ವಾರ್ಷಿಕ ಚಂದಾ ರೂ.25/-

ಮಾಸಿಕ

# ಜನಪದ

ಸಂಪುಟ–05 • ಸಂಚಿಕೆ–12 • ಸೆಪ್ಟೆಂಬರ್ 2022




Downloaded From:www.kpscvaani.com




ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಕರ್ನಾಟಕದಿಂದ ಭಾಗವಹಿಸಿದ್ದ ಹಾಗೂ ಪದಕ ವಿಜೇತ ಕ್ರೀಡಾಪಟುಗಳನ್ನು ಮುಖ್ಯಮಂತ್ರಿ ಅವರು ಸನ್ಮಾನಿಸಿದ ಸಂದರ್ಭ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವರಾದ ಡಾ. ನಾರಾಯಣಗೌಡ, ಕ್ರೀಡಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್, ಕರ್ನಾಟಕ ಒಲಂಪಿಕ್ ಅಸೋಸಿಯೇಶನ್‌ನ ಅಧ್ಯಕ್ಷರಾದ ಗೋವಿಂದ ರಾಜ್ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.




2022 ನೇ ಸಾಲಿನ ಡಿ.ದೇವರಾಜ ಅರಸು ರಾಜ್ಯ ಮಟ್ಟದ ಪ್ರಶಸ್ತಿಯನ್ನು ಮುಖ್ಯಮಂತ್ರಿ ಅವರು ಡಾ. ಅಣ್ಣಯ್ಯ ಕುನಾಲ್ ಅವರಿಗೆ ಪ್ರಧಾನ ಮಾಡಿದ ಸಂದರ್ಭ. ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಹರತಾಳು ಹಾಲಪ್ಪ, ಕುಮಾರ್ ಬಂಗಾರಪ್ಪ, ಪ್ರತಾಪ ಸಿಂಹ ನಾಯಕ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-05 • ಸಂಚಿಕೆ-12 • ಸೆಪ್ಟೆಂಬರ್ 2022




**06** ಘೋಷಿತ ಯೋಜನೆಗಳ ಜಾರಿಯತ್ತ ಸರ್ಕಾರದ ದಿಟ್ಟ ಹೆಜ್ಜೆ
• ಚಂದ್ರಮುಖಿ

**12** ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ: ಇದು ಸರ್ಕಾರದ ಆಶಯ
• ಎಂ. ಭಾಗ್ಯ

**15** ಸಂಪನ್ನಗೊಂಡ ಹರ್ ಘರ್ ತಿರಂಗಾ ಅಭಿಯಾನ
• ರಂಜನ್ ಗೌಡ

**18** ಅಮೃತ ಭಾರತಿಗೆ ಕನ್ನಡದಾರತಿ ಅಭಿಯಾನಕ್ಕೆ ಪ್ರಧಾನಿಯಿಂದ ಪ್ರಶಂಸೆ
• ಕೆ. ಎಸ್. ರಾಜಮನ್ನಾರ್





**21** ಭಾರತದ ಉಪ ರಾಷ್ಟ್ರಪತಿ ಜಗದೀಪ್ ಧನಕರ್
• ಡಿ. ಪಿ. ಮುರಳೀಧರ್

**24** ಕಾಶಿ ಯಾತ್ರೆಗೆ ರಾಜ್ಯ ಸರ್ಕಾರದಿಂದ ಸಹಾಯಧನ
• ಆರ್. ಸ್ಮಿತಾ

**26** ಲಾಲ್ ಬಾಗ್ ಫಲಪುಷ್ಪ ಪ್ರದರ್ಶನ ಛಾಯಾಚಿತ್ರಗಳು

**28** ಮೌನಕ್ಕೆ ಜಾರಿದ ಕಾಡು ಕುದುರೆ
• ಕೆ.ಟಿ.ರಮ್ಯ ಗೌಡ

**30** ನಿವೃತ್ತಿಯಾದರೂ ಪ್ರವೃತ್ತಿ ಬಿಡದ ಶ್ಯಾಮಣ್ಣ ಮೇಷ್ಟ್ರು
• ಕಿಶನ್‌ರಾವ್ ಕುಲಕರ್ಣಿ

**34** ಯಶಸ್ವಿಯಾದ ಎಲೆಕ್ಟ್ರಿಕ್ ವಾಹನ ಅಭಿಯಾನ
• ಎಚ್. ಮಾರುತಿ

**37** ಸುಲಲಿತ ವ್ಯವಹಾರಗಳ ಶ್ರೇಯಾಂಕದಲ್ಲಿ ಕರ್ನಾಟಕಕ್ಕೆ ಅಗ್ರಸ್ಥಾನ
• ಟಿ. ಅನಿಲ್

**38** ಗೋವುಗಳ ಸಂರಕ್ಷಣೆಗಾಗಿ ಪುಣ್ಯಕೋಟಿ ದತ್ತು ಯೋಜನೆ
• ಡಾ. ಪಿ.ವಿ. ವರ ಪ್ರಸಾದ್ ರಾವ್

**41** ಅಂಗತ್ವ ಅಲ್ಪಸಂಖ್ಯಾತರಿಗೂ ಆಸರೆಯಾದ ನರೇಗಾ
• ಮರೆಪ್ಪ. ಸಿ. ಹರವಾಳ್ಕರ್





**43** ಮೈಸೂರಿನಲ್ಲಿ ವಿದ್ಯುತ್ ದೀಪ ಬೆಳಗಿದ ಇತಿಹಾಸ
• ವೇಮಗಲ್ ಸೋಮಶೇಖರ್

**45** ಬೀದಿ ನಾಯಿಗಳಿಗೊಂದು ನೆಮ್ಮದಿಯ ನೆಲೆ
• ರಾಮಕೃಷ್ಣ ಶಾಸ್ತ್ರಿ

**48** ಸ್ವಾತಂತ್ರ್ಯ ಹೋರಾಟದಲ್ಲಿ ಉಮಾಬಾಯಿ ಕುಂದಾಪುರರ ಪಾತ್ರ
• ರಿತೇಶ ನಾಯ್ಕ

**50** ಪದಬಂಧ-34



ಪ್ರಧಾನ ಸಂಪಾದಕರು
ಡಾ॥ ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರಕ್ಕೆ ಒಂದು ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಅವರ ಆಡಳಿತ ವೈಖರಿಯನ್ನು ಲೇಖಕರಾದ ಕಂ.ಕ.ಮೂರ್ತಿ ಅವರು ತಮ್ಮ ಪತ್ರಿಕೆಯಲ್ಲಿ ಸೊಗಸಾಗಿ ವಿವರಿಸಿದ್ದಾರೆ.

ತಾವು ಕಾಮನ್ ಮ್ಯಾನ್ ಎಂದೇ ಹೇಳುವ ಮುಖ್ಯಮಂತ್ರಿಗಳ ಸರಳತೆ, ಸೌಜನ್ಯ ಮತ್ತು ಸಂವೇದನಾಶೀಲತೆಯ ನಡವಳಿಕೆಯನ್ನು ಲೇಖಕನದಲ್ಲಿ ಚೆನ್ನಾಗಿ ಬಿಂಬಿಸಲಾಗಿದೆ. ರೈತ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ನೆರವನ್ನು ನೀಡುವ ಸಲುವಾಗಿ ರೈತ ವಿದ್ಯಾನಿಧಿ ಯೋಜನೆಯನ್ನು ಪ್ರಾರಂಭಿಸಿರುವುದು ಅವರಿಗೆ ರೈತ ಜನರ ಮೇಲಿರುವ ಕಾಳಜಿಯನ್ನು ತೋರಿಸುತ್ತದೆ.

ಅವರು ನಾಡಿನ ಎಲ್ಲಾ ವರ್ಗದ ಜನರ ಯೋಗಕ್ಷೇಮವನ್ನು ಗುರಿಯಾಗಿಟ್ಟುಕೊಂಡು 'ಸಬ್ ಕಾ ಸಾತ್ ಸಬ್ ಕಾ ವಿಕಾಸ್' ಎಂಬ ಆದರ್ಶದಂತೆ ಆಡಳಿತ ನಡೆಸುತ್ತಿರುವುದರಿಂದ ಜನಮನ್ನಣೆಗೆ ಪಾತ್ರರಾಗಿದ್ದಾರೆ.

**-ಕೆ. ಆರ್. ಸುಭಾಷ್, ರಾಮನಗರ**

* * *


ನಮ್ಮ ಮುಖ್ಯಮಂತ್ರಿ ಅವರ ಆಡಳಿತ ನಾಡಿನ ಜನರ ಬದುಕಿನಲ್ಲಿ ಹೊಸ ಆಶಾಕಿರಣವನ್ನು ಮೂಡಿಸಿದೆ ಎಂದರೆ ತಪ್ಪಾಗಲಾರದು. ಆಗಸ್ಟ್ ಮಾಹೆಯ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳು ಅದಕ್ಕೆ ಪುಷ್ಠಿ ನೀಡುತ್ತದೆ. ಅನುಭವಿ ರಾಜಕಾರಣಿಯಾಗಿರುವ ಅವರ ನೇತೃತ್ವದಲ್ಲಿ ಸರ್ಕಾರವು ದೇಶದಲ್ಲೇ ಪ್ರಥಮ ಬಾರಿಗೆ ಹಲವು ಹೊಸ ಹೊಸ ಯೋಜನೆಗಳನ್ನು ನೀಡಿರುವುದಲ್ಲದೆ, ಇತರೆ ರಾಜ್ಯದವರೂ ಹಮ್ಮಿಕೊಳ್ಳುವಂತೆ ಪ್ರೇರಣೆ ನೀಡಿದೆ.

ಅಭಿವೃದ್ಧಿಯ ವೇಗಕ್ಕೆ ಹೊಸ ದಿಕ್ಕುದೆಸೆ ನೀಡುತ್ತಿದ್ದಾರೆ. ಅವರ ನೇತೃತ್ವ ಸರ್ಕಾರದ ಒಂದು ವರ್ಷದ ಅವಧಿಯಲ್ಲಿ ಆಗಿರುವ ಸಾಧನೆಗಳನ್ನು ವಾರ್ತಾ ಜನಪದ ಪತ್ರಿಕೆಯಲ್ಲಿ ಓದಿ ಬೊಮ್ಮಾಯಿ ಅವರ ಆಡಳಿತ ಶೈಲಿಯನ್ನು ತಿಳಿಯಲು ಸಾಧ್ಯವಾಯಿತು. ಉತ್ತಮ ಮಾಹಿತಿಯನ್ನು ಒದಗಿಸಿಕೊಟ್ಟಿರುವ ಸಂಪಾದಕೀಯ ತಂಡಕ್ಕೆ ನನ್ನ ಅಭಿನಂದನೆಗಳು.

**-ಕೇಶವ ಕುಲಕರ್ಣಿ, ಧಾರವಾಡ**

* * *

ಆಗಸ್ಟ್ ವಾರ್ತಾ ಜನಪದ 'ಸರ್ವರ ವಿಕಾಸಕ್ಕೆ ಸಮೃದ್ಧ ಕರ್ನಾಟಕ, ಇದು ನಮ್ಮ ಸಂಕಲ್ಪ' ಎಂಬ ಘೋಷವಾಕ್ಯದೊಂದಿಗೆ ಬಸವರಾಜ ಬೊಮ್ಮಯಿ ಅವರ ನೇತೃತ್ವ ಸರ್ಕಾರದ ಅವಧಿಯಲ್ಲಿ ಸರ್ಕಾರವು ರಾಜ್ಯದ ಸಮಗ್ರ ಪ್ರಗತಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು, ಯೋಜನೆಗಳು, ಸೇವಾ–ಸೌಲಭ್ಯಗಳ ಮೇಲೆ ಬೆಳಕು ಚೆಲ್ಲಿದೆ. ಪತ್ರಿಕೆಯು ಅತ್ಯಂತ ಆಕರ್ಷಕವಾಗಿ ಮೂಡಿ ಬಂದಿದೆ.




ಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ.ಪಿ.ಎಸ್.ಹರ್ಷ ಅವರು ಸಂಪಾದಕೀಯದಲ್ಲಿ ರಾಜ್ಯದ ತಲಾವಾರು ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಎಲ್ಲಾ ವರ್ಗದ ಜನರಿಗೆ ಉದ್ಯೋಗವನ್ನು ಒದಗಿಸಲು ಮುಖ್ಯಮಂತ್ರಿಗಳು ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣದ ತಳಹದಿಯ ಮೇಲೆ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ ಎಂದು ತಿಳಿಸಿರುವುದು ನಮ್ಮಂತಹ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಿಗೆ ಆಶಾಕಿರಣ ಮೂಡಿಸಿದೆ.

**-ಎಸ್.ಜಿ. ಹರೀಶ್, ಸಾಗರಕಟ್ಟೆ**

* * *

ರಾಜ್ಯ ಸರ್ಕಾರವು ಕೃಷಿಕರ ಪರವಾಗಿದೆ ಎಂಬುದಕ್ಕೆ ಕೇಂದ್ರ ಸರ್ಕಾರದ ಆದೇಶದಂತೆ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಉಳಿದೆಲ್ಲಾ ರಾಜ್ಯಗಳಿಗಿಂತಲೂ ನಮ್ಮ ರಾಜ್ಯವೇ ಮೊದಲ ಬಾರಿಗೆ ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯವನ್ನು ಸ್ಥಾಪಿಸಿರುವುದೇ ನಿದರ್ಶನವಾಗಿದೆ.

ಯಂತ್ರೋಪಕರಣಗಳ ಬಳಕೆಯಿಂದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಬಹುದಾಗಿರುವುದರಿಂದ ಆಧುನಿಕತೆಗೆ ಅನುಗುಣವಾಗಿ ಕೃಷಿ ಕ್ಷೇತ್ರದಲ್ಲೂ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು 'ರೈತ ಶಕ್ತಿ' ಎಂಬ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿರುವುದನ್ನು ತಿಳಿದು ಸಂತಸವಾಯಿತು. ಆಗಸ್ಟ್ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಕೃಷಿಕರ ಆದಾಯ ಹೆಚ್ಚಿಸುವ ದಿಶೆಯಲ್ಲಿ ಮುನ್ನಡೆಯುತ್ತಿರುವ ಸರ್ಕಾರ' ಲೇಖನದಲ್ಲಿ ಸಮಗ್ರವಾಗಿ ಕೃಷಿ ಕ್ಷೇತ್ರಕ್ಕೆ ಸರ್ಕಾರದ ಕೊಡುಗೆಯನ್ನು ತಿಳಿಸಿಕೊಡಲಾಗಿದೆ.

**-ಹರಿಣಿ ತಿಮ್ಮೇಗೌಡ ಹಾಸನ**

ಆಗಸ್ಟ್ ಸಂಚಿಕೆಯ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟವಾಗಿರುವ ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಲೇಖನದ ಇಂಟ್ರೋದಲ್ಲಿ ತಿಳಿಸಿರುವಂತೆ ಪ್ರಜಾಪ್ರಭುತ್ವದಲ್ಲಿ ಆಳು ಅರಸನಾಗಬಹುದು, ಅರಸ ಆಳಾಗಬಹುದು ಎಂಬ ಮಾತು ನೂರಕ್ಕೆ ನೂರು ಸತ್ಯವಾದುದು. ಇದು ದೇಶದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿ ಸ್ಥಾನಕ್ಕೆ ದ್ರೌಪದಿ ಮುರ್ಮು ಅವರು ಕ್ರಮಿಸಿದ ಹಾದಿಯೇ ಸಾಕ್ಷಿಯಾಗಿದೆ. ಲೇಖನವು ಅವರ ಕುರಿತು ಸಂಪೂರ್ಣ ಮಾಹಿತಿಯನ್ನು ಒದಗಿಸಿತು.

**-ಕಮಲಾಕ್ಷಿ, ಬೆಂಗಳೂರು**

'ವಾರ್ತಾ ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಚಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೇ,**

ಪ್ರಧಾನಮಂತ್ರಿ ಅವರು ತಮ್ಮ **'ಮನ್ ಕಿ ಬಾತ್'** ನಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ರಾಜ್ಯ ಸರ್ಕಾರವು ಆಯೋಜಿಸಿರುವ 'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮವನ್ನು ಮತ್ತು ಜೇನು ಕೃಷಿಯಲ್ಲಿ ಸಾಧನೆ ಮಾಡಿರುವ ಉತ್ತರಕನ್ನಡ ಜಿಲ್ಲೆಯ ಜೇನು ಕೃಷಿಕ ಮಧುಕೇಶ್ವರ ಹೆಗಡೆ ಅವರಿಗೆ ಅಭಿನಂದನೆ ಸಲ್ಲಿಸಿರುವುದು ಹೆಮ್ಮೆಯ ಸಂಗತಿ.

ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಸಂಭ್ರಮಿಸಲು ಹಾಗೂ ನಾಡಿನೆಲ್ಲೆಡೆ ದೇಶಪ್ರೇಮವನ್ನು ಜಾಗೃತಗೊಳಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಆಶಯದಂತೆ ರಾಜ್ಯದೆಲ್ಲಡೆ ಮನೆ ಮನೆಯ ಮೇಲೆ ಧ್ವಜಾರೋಹಣವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳುವ ಮೂಲಕ ದೇಶ ಪ್ರೇಮವನ್ನು ಮೆರೆಯಲಾಯಿತು.

ಜುಲೈ 28ಕ್ಕೆ ತಮ್ಮ ನೇತೃತ್ವದ ಆಡಳಿತಕ್ಕೆ ಒಂದು ವರ್ಷವಾದ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮಗಳನ್ನು ಅನಿವಾರ್ಯ ಕಾರಣದಿಂದ ರದ್ದು ಪಡಿಸಿದ ಮುಖ್ಯಮಂತ್ರಿ ಅವರು, ಅಂದು ಹಿರಿಯ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದರು. ಸರ್ಕಾರದಲ್ಲಿ ರಾಜಕಾರಣಿಗಳ ಅಧಿಕಾರವಧಿ ಐದು ವರ್ಷಗಳಾದರೆ, ಅಧಿಕಾರಿಗಳು ಶಾಶ್ವತವಾಗಿ ಇರುವವರು. ಕಡತ ವಿಲೇವಾರಿ ಮಾಡುವುದಷ್ಟೇ ತಮ್ಮ ಜವಾಬ್ದಾರಿ ಎಂದು ಭಾವಿಸದೆ, ಸರ್ಕಾರದ ಜನಪರ ಯೋಜನೆಗಳು ಜನರನ್ನು ತಲುಪಿದೆಯೇ ಎಂದು ಖಾತರಿ ಪಡಿಸಿಕೊಳ್ಳಬೇಕೆಂದು ಅವರು ಅಧಿಕಾರಿಗಳಿಗೆ ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗ ಇವೇ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಲವು ಹೊಸ ಯೋಜನೆಗಳಿಗೆ ಅವರು ಚಾಲನೆ ನೀಡಿದರು.

ಇನ್ನು ಕಳೆದ ವರ್ಷ ಜಾರಿಗೆ ತರಲಾಗಿರುವ ಅಮೃತ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಮುಖ್ಯಮಂತ್ರಿಗಳು 76 ನೇ ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ತಿಳಿಸಿದ್ದಾರೆ. ಅಲ್ಲದೆ ಈಗಾಗಲೇ ಹಲವು ಅಮೃತ ಯೋಜನೆಗಳು ಪೂರ್ಣಗೊಳ್ಳುತ್ತಿರುವುದು ಸರ್ಕಾರದ ಸಫಲತೆಯನ್ನು ತೋರಿಸುತ್ತದೆ.

ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 107 ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಅವರು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಲು 250 ಕೋಟಿ ರೂ. ಗಳನ್ನು ಮಂಜೂರು ಮಾಡಲು ಮತ್ತು ನಾರಾಯಣ ಗುರು ಹೆಸರಿನಲ್ಲಿ ತಲಾ 30 ಕೋಟಿ ರೂ. ವೆಚ್ಚದಲ್ಲಿ ನಾಲ್ಕು ಶಾಲೆಗಳನ್ನು ಆರಂಭಿಸಲು ಸರ್ಕಾರ ತೀರ್ಮಾನಿಸಿದೆ ಎಂದು ತಿಳಿಸಿದ್ದಾರೆ. ಈ ತೀರ್ಮಾನ, ಅವರು ಶಿಕ್ಷಣಕ್ಕೆ ನೀಡುತ್ತಿರುವ ಮಹತ್ವವನ್ನು ತಿಳಿಸುತ್ತದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸೇವಾ-ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ದೂರು ಪುಸ್ತಕವನ್ನು ಇಡಲು ಕ್ರಮವಹಿಸಲಾಗುತ್ತಿದೆ. ರೋಗಿಗಳು ಈ ದೂರು ಪುಸ್ತಕದಲ್ಲಿ ತಮ್ಮ ಅಭಿಪ್ರಾಯ, ಸಲಹೆ ಮತ್ತು ಸೂಚನೆಗಳನ್ನು ನೀಡಬಹುದು. ಆ ಮೂಲಕ ಸರ್ಕಾರದ ಸೇವಾ-ಸೌಲಭ್ಯಗಳ ಮೌಲ್ಯಮಾಪನ ಮಾಡುವ ಅವಕಾಶವನ್ನು ಸರ್ಕಾರವು ಜನರಿಗೆ ನೀಡುತ್ತಿದೆ. ಖಂಡಿತಾ ಇದು ಆರೋಗ್ಯ ಕ್ಷೇತ್ರ ಸುಧಾರಣೆಗೆ ಮುನ್ನುಡಿ ಬರೆಯಲಿದೆ.

ಕ್ರೀಡಾ ಕ್ಷೇತ್ರಕ್ಕೂ ಕೂಡ ಸರ್ಕಾರವು ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಅಮೃತ ಕ್ರೀಡಾ ದತ್ತು ಯೋಜನೆಯಡಿ 75 ಜನರಿಗೆ ಒಲಂಪಿಕ್‌ನಲ್ಲಿ ಭಾಗವಹಿಸಲು ಈಗಾಗಲೇ ತರಬೇತಿ ನೀಡಲಾಗುತ್ತಿದೆ. ಇತ್ತೀಚೆಗೆ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪದಕ ಪಡೆದ ರಾಜ್ಯದ ಕ್ರೀಡಾಪಟುಗಳಿಗೆ ಅಭಿನಂದಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ಸರ್ಕಾರಿ ನೌಕರಿಯಲ್ಲಿ ಕ್ರೀಡಾಪಟುಗಳಿಗೆ ಶೇ. 2 ರಷ್ಟು ಮೀಸಲಾತಿಯನ್ನು ವಿಸ್ತರಿಸುವುದಾಗಿ ಘೋಷಿಸಿದ್ದಾರೆ.

ನಮ್ಮ ಸಂಸ್ಕೃತಿಯಲ್ಲಿ ಗೋವುಗಳಿಗೆ ದೈವಿಕ ಸ್ಥಾನವನ್ನು ನೀಡಿ ಪೂಜಿಸಲಾಗುತ್ತದೆ. ಆ ಕಾರಣ ರಾಜ್ಯ ಸರ್ಕಾರವು ಗೋವುಗಳ ರಕ್ಷಣೆಗಾಗಿ ದೇಶದಲ್ಲೇ ಮೊದಲ ಬಾರಿಗೆ ಗೋಹತ್ಯೆ ನಿಷೇಧ ಕಾಯಿದೆಯನ್ನು ಜಾರಿಗೆ ತಂದಿದೆ. ಈಗ ಗೋ ಸಂರಕ್ಷಣೆಗಾಗಿ ಸಾರ್ವಜನಿಕರು ಗೋವುಗಳನ್ನು ದತ್ತು ತೆಗೆದುಕೊಳ್ಳಲು ಅನುಕೂಲವಾಗುವಂತೆ **'ಪುಣ್ಯಕೋಟಿ ದತ್ತು'** ಯೋಜನೆಯನ್ನು ದೇಶದಲ್ಲೇ ಮೊದಲ ಬಾರಿಗೆ ಜಾರಿಗೆ ತಂದಿದೆ. ಹಾಗಾಗಿ ಸಾರ್ವಜನಿಕರು ತಮ್ಮ ಸಂತಸದ ದಿನಾಚರಣೆಗಳ ಸಂದರ್ಭದಲ್ಲಿ ಗೋವುಗಳನ್ನು ದತ್ತು ಪಡೆಯುವ ಮೂಲಕ ಗೋವುಗಳ ರಕ್ಷಣೆಗೆ ಮುಂದಾಗುವಂತೆ ಕೋರುವೆ.

**ಡಾ|| ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com

## ಘೋಷಿತ ಯೋಜನೆಗಳ ಜಾರಿಯತ್ತ

# ಸರ್ಕಾರದ ದಿಟ್ಟ ಹೆಜ್ಜೆ



Downloaded From:www.kpscvaani.com



**ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು 76 ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯಲ್ಲಿ ಧ್ವಜಾರೋಹಣ ಮಾಡಿ ನಾಡಿನ ಜನತೆಯನ್ನು ಉದ್ದೇಶಿಸಿ ಮಾಡಿದ ಭಾಷಣ.**

ಚಂದ್ರಮುಖಿ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆರಂಭಿಕ ಕಾಲಘಟ್ಟದಲ್ಲಿ ರಾಜ್ಯದ ಅಧಿಕಾರದ ಚುಕ್ಕಾಣಿಯನ್ನು ಹಿಡಿದವರು ಬಸವರಾಜ ಬೊಮ್ಮಾಯಿ ಅವರು. ಈಗ ಅವರು ಮುಖ್ಯಮಂತ್ರಿಯಾಗಿ ಒಂದು ವರ್ಷ ಪೂರ್ತಿಗೊಂಡಿರುವ ಜೊತೆಗೆ ಅಮೃತ ಮಹೋತ್ಸವ ಆಚರಣೆಗೂ ಒಂದು ವರ್ಷ ಪೂರ್ಣಗೊಂಡಿದೆ.

ಕಳೆದ ವರ್ಷ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಅವರು ಸ್ವಾತಂತ್ರ್ಯೋತ್ಸವ ದಿನದ ಭಾಷಣವನ್ನು ಮಾಡುವ ಹೊತ್ತಿಗೆ ಆಗಿನ್ನೂ ಅವರ ಸರ್ಕಾರಕ್ಕೆ ಕೇವಲ ಹತ್ತೊಂಭತ್ತು ದಿನಗಳು ಮಾತ್ರ ತುಂಬಿದ್ದವು. ನಾಡಿನ ಜನತೆಯ ಹೊಸ ಆಶೋತ್ತರಗಳ ದೊಡ್ಡ ಪಟ್ಟಿಯೇ ಅವರ ಮುಂದೆ ಇತ್ತು. ಜನರೂ ಅಪಾರ ನಿರೀಕ್ಷೆಯಲ್ಲಿ ಕಾದಿದ್ದರು. ಅಂದು ಭಾಷಣ ಮಾಡಿದ್ದ ಬೊಮ್ಮಾಯಿ ಅವರು,

"ಜನಪ್ರಿಯರಾಗುವುದು ಸುಲಭ. ಆದರೆ ಜನೋಪಯೋಗಿಯೂ ಆಗಬೇಕು. ಜನರಿಗಾಗಿ ಜನರ ಕಲ್ಯಾಣಕ್ಕಾಗಿ ನನ್ನ ಆಡಳಿತವನ್ನು ಮೀಸಲಿಡುತ್ತೇನೆ. ಅಂತಹ ಜನಪರವಾದ ಯೋಜನೆಗಳನ್ನು ರೂಪಿಸಿ ಅವುಗಳನ್ನು ಅಕ್ಷರಶಃ ಜಾರಿಗೆ ತರುವುದು ನನ್ನ ಸಂಕಲ್ಪವಾಗಿದೆ. ಆಳುವ ವರ್ಗ ಯಾವತ್ತೂ ಜನಸ್ನೇಹಿಯಾಗಿರಬೇಕು. ಹಾಗಿದ್ದಾಗ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ." ಎಂಬ ಘೋಷಣೆಯನ್ನು ಮಾಡಿ, ನವಕರ್ನಾಟಕ ನಿರ್ಮಾಣದ ದಿಕ್ಸೂಚಿಯನ್ನು ನಾಡಿಗೆ ನೀಡಿದ್ದರು. ಮಾತ್ರವಲ್ಲದೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಹದಿನಾಲ್ಕು ಪ್ರಮುಖ ಯೋಜನೆಗಳನ್ನು ಪ್ರಕಟಿಸಿದ್ದರು. 'ಅಮೃತ' ಶೀರ್ಷಿಕೆಯನ್ನು ಹೊತ್ತಿದ್ದ ಆ ಯೋಜನೆಗಳನ್ನು ಮುಂದಿನ ಒಂದು ವರ್ಷ ಪೂರೈಸುವ ಹೊತ್ತಿಗೆ ಜಾರಿಗೆ ತರುವ ಸಂಕಲ್ಪವನ್ನು ಅವರು ಪ್ರಕಟಿಸಿದ್ದರು. ಅದು ಅವರು ಹಾಕಿಕೊಂಡ



Downloaded From:www.kpscvaani.com



> "ಕೇಂದ್ರದಲ್ಲಿ ನರೇಂದ್ರ ಮೋದಿ ಅವರ ಸರ್ಕಾರವು ಐದು ಟ್ರಿಲಿಯನ್ ಡಾಲರ್ ಅರ್ಥ ವ್ಯವಸ್ಥೆಯನ್ನು ಸಾಧಿಸುವ ಮಹತ್ವಾಕಾಂಕ್ಷಿ ಗುರಿಯನ್ನು ಹಾಕಿಕೊಂಡಿದೆ. ಇದರಲ್ಲಿ ಕರ್ನಾಟಕದ ಪಾಲೇ ಒಂದು ಟ್ರಿಲಿಯನ್ ಡಾಲರ್ ಆಗಬೇಕು ಎಂಬುದು ನಮ್ಮ ಆಶಯ. ನವ ಭಾರತಕ್ಕಾಗಿ ನವಕರ್ನಾಟಕ ಎಂಬ ಉದ್ದೇಶದೊಂದಿಗೆ ನಾವು ದೃಢವಾದ ಹೆಜ್ಜೆಯನ್ನಿಟ್ಟು ಮುಂದೆ ಸಾಗುತ್ತಿದ್ದೇವೆ."
>
> –ಬಸವರಾಜ್ ಎಸ್ ಬೊಮ್ಮಾಯಿ, ಮುಖ್ಯಮಂತ್ರಿ

'ಅಜೆಂಡಾ' ಆಗಿತ್ತು. ಈ ಕಾರಣದಿಂದಲೇ ನಾಡಿನ ಜನತೆ ಈ ಸರ್ಕಾರದಿಂದ 'ಅಮೃತ ಘಳಿಗೆ'ಯ ಆರಂಭ ಎಂದು ವಿಶ್ಲೇಷಣೆ ಮಾಡಿದ್ದು ಸುಳ್ಳಲ್ಲ.

ಈ ಹಿನ್ನೆಲೆಯಲ್ಲಿ 76ನೇ ಸ್ವಾತಂತ್ರ್ಯೋತ್ಸವದ ದಿನದಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಡುವ ಭಾಷಣದ ಬಗ್ಗೆ ಅಪಾರವಾದ ನಿರೀಕ್ಷೆಯಿತ್ತು, ಅದು ಕೇವಲ ಭಾಷಣವಾಗಿರದೇ ವರ್ಷದ ಹಿಂದೆ ಅವರು ಘೋಷಣೆ ಮಾಡಿದ 'ಅಮೃತ' ಕಾರ್ಯಕ್ರಮಗಳಿಗೆ ಹಿಡಿದ ಕನ್ನಡಿಯಾಗಿತ್ತು ಎಂದರೆ ತಪ್ಪಲ್ಲ. ಆ ನಿರೀಕ್ಷೆಗೆ ತಕ್ಕುನಾಗಿ ಮುಖ್ಯಮಂತ್ರಿಯವರು ಈ ಬಾರಿಯ ತಮ್ಮ ಸ್ವಾತಂತ್ರೋತ್ಸವದ ಭಾಷಣದಲ್ಲಿ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿದ ನಿಧಿ, ಅವುಗಳನ್ನು ಜಾರಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳ ಪಟ್ಟಿಯನ್ನು ಮಂಡಿಸಿದರು. ಒಂದು ರೀತಿಯಲ್ಲಿ ಅದು ಸರ್ಕಾರದ ಕಾರ್ಯವೈಖರಿಯ ಬಗೆಗೆ ನೀಡಿದ ಪ್ರಮಾಣಪತ್ರವೂ ಆಗಿತ್ತು.

"ಕೋವಿಡ್‌ನಿಂದ ಬಿದ್ದ ಹೊಡೆತಗಳಿಂದ ಚೇತರಿಸಿಕೊಂಡು, ಉಂಟಾದ ಆರ್ಥಿಕ ಹಿಂಜರಿತಕ್ಕೆ ಸೆಡ್ಡು ಹೊಡೆದು ಸುಮಾರು ಹದಿನೈದು ಸಾವಿರ ಕೋಟಿಗೂ ಅಧಿಕ ಆದಾಯವನ್ನು ತಂದಿದ್ದೇವೆ" ಎಂದು ಹೇಳಿದ ಅವರು ಈ ಮೂಲಕ ಪ್ರಗತಿಗೆ ದೊಡ್ಡ ಪ್ರಮಾಣದಲ್ಲಿಯೇ ಮುನ್ನುಡಿಯನ್ನು ಬರೆದಿದ್ದೇವೆ ಎಂದು ಪ್ರತಿಪಾದಿಸಿದರು.

### ನಗರೋತ್ಥಾನ ಕಾಮಗಾರಿಗಳಿಗೆ ವೇಗ

ಮುನಿಸಿಪಾಲಿಟಿಯನ್ನು ಒಳಗೊಂಡ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನದ ಎರಡು ಯೋಜನೆಗಳಲ್ಲಿ 2680 ಕೋಟಿ ರೂ. ಮೊತ್ತದ ಕಾಮಗಾರಿಗಳಿಗೆ ಟೆಂಡರ್ ಕಾರ್ಯಾದೇಶ ನೀಡುವ ಕಾರ್ಯವು ನಾನಾ ಹಂತಗಳಲ್ಲಿವೆ. ಬೆಂಗಳೂರು, ನಗರ ಮತ್ತು ಪಟ್ಟಣಗಳಲ್ಲಿ ಮೂಲ ಸೌಕರ್ಯ ಮತ್ತು ಪೌರಸೇವೆಗಳ ಉನ್ನತೀಕರಣ ಈ ಯೋಜನೆಗಳ ಉದ್ದೇಶ.

ಅಮೃತ ಯೋಜನೆಯ ಚೌಕಟ್ಟಿನ ಒಳಗೆ ಕಳೆದ ವರ್ಷ ಘೋಷಣೆ ಮಾಡಿದ್ದ ಹದಿನಾಲ್ಕು ಕಲ್ಯಾಣ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸರ್ಕಾರ ಸಫಲವಾಗಿರುವುದು ಭರವಸೆದಾಯಕ ನಾಳೆಗಳ ಅನಾವರಣಕ್ಕೆ ನಾಂದಿಯಾಗಿದೆ ಎಂಬುದು ಅವರ ಮಾತಿನ ಒಟ್ಟು ಸಾರವಾಗಿತ್ತು. ಹಾಗೆ ಘೋಷಣೆ ಮಾಡಿದ ಅಷ್ಟೂ ಹದಿನಾಲ್ಕು ಯೋಜನೆಗಳು ಯಾವ ದಿಕ್ಕಿನಲ್ಲಿವೆ, ಅದಕ್ಕೆ ಸಿಕ್ಕ ಆದ್ಯತೆಗಳು ಎಷ್ಟು ಎಂಬುದನ್ನು ಕೂಲಂಕಷವಾಗಿ ನೋಡಿದರೆ 'ಸಫಲ ಆಡಳಿತ'ದ ಚಿತ್ರಣ ಸಿಗುತ್ತದೆ.

ಅಭಿವೃದ್ಧಿ ಎನ್ನುವುದು ನಗರಕ್ಕಷ್ಟೇ ಕೇಂದ್ರಿತವಾದಾಗ ಒಟ್ಟು ಪ್ರಗತಿಯಲ್ಲಿ ಸಮತೋಲನ ಕಾಪಾಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ಅದರ ಪಾಲು ಕಟ್ಟಕಡೆಯ ಗ್ರಾಮಕ್ಕೂ, ಕಟ್ಟಕಡೆಯ ಜನರಿಗೂ ತಲುಪಬೇಕು. ಆ ಉದ್ದೇಶ ಸರ್ಕಾರದ್ದೂ ಆಗಿತ್ತು. ಆ ಕಾರಣಕ್ಕಾಗಿಯೇ ಸರ್ಕಾರ ಪ್ರಕಟಿಸಿದ್ದು ಅಮೃತ ಗ್ರಾಮ ಪಂಚಾಯ್ತಿ ಯೋಜನೆ.





Downloaded From:www.kpscvaani.com



ಸ್ವಾತಂತ್ರ್ಯ ಅಮೃತ ಮಹೋತ್ಸವದ ಸುಸಂದರ್ಭದಲ್ಲಿ ಸ್ವಚ್ಛತೆ, ಪೌಷ್ಠಿಕತೆ ಕಾಪಾಡಲು, ರೈತರು, ಶ್ರಮಿಕರ ಅಭ್ಯುದಯಕ್ಕಾಗಿ ಹಾಗೂ ಕೆಚ್ಚೆದೆಯ ಸೈನಿಕರ ಕ್ಷೇಮಾಭಿವೃದ್ಧಿಗಾಗಿ ಕೆಲವು ಕೊಡುಗೆಗಳನ್ನು ನೀಡುವ ಸಲುವಾಗಿ ಹೊಸ ಯೋಜನೆಗಳನ್ನು ಮುಖ್ಯಮಂತ್ರಿ ಅವರು ಘೋಷಣೆ ಮಾಡಿದರು.

- ಶಾಲೆ, ಕಾಲೇಜುಗಳಲ್ಲಿ ಸ್ವಚ್ಛ–ಆರೋಗ್ಯಕರ ವಾತಾವರಣ ನಿರ್ಮಾಣಕ್ಕಾಗಿ ರಾಜ್ಯದ ಎಲ್ಲ ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ 250 ಕೋಟಿ ರೂ. ವೆಚ್ಚದಲ್ಲಿ ಶೇ. 100 ರಷ್ಟು ಶೌಚಾಲಯಗಳ ನಿರ್ಮಾಣ.
- ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದಿಂದ ಕುಂಬಾರ, ಕಮ್ಮಾರ, ಬಡಗಿ, ಶಿಲ್ಪಿಗಳು, ಭಜಂತ್ರಿ, ಬುಟ್ಟಿ ಹೆಣೆಯುವವರು, ವಿಶ್ವಕರ್ಮರು, ಮಾದರು ಮತ್ತಿತರ ಕುಶಲಕರ್ಮಿಗಳಿಗೆ ತಲಾ 50 ಸಾವಿರ ರೂ. ಗಳ ವರೆಗೆ ಸಾಲ–ಸಹಾಯಧನ ಯೋಜನೆ.
- ರೈತರ ಮಕ್ಕಳಿಗೆ ಜಾರಿಗೊಳಿಸಿರುವ ರೈತ ಮಕ್ಕಳಿಗೆ ಜಾರಿಗೊಳಿಸಿರುವ ರೈತ ವಿದ್ಯಾನಿಧಿ ಯೋಜನೆಯ ಸೌಲಭ್ಯವನ್ನು ಭೂ ರಹಿತ ಕೃಷಿ ಕಾರ್ಮಿಕರ ಮಕ್ಕಳಿಗೂ ವಿಸ್ತರಣೆ.
- ಭೂ ರಹಿತ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳನ್ನು ಆದ್ಯತೆಯಾಗಿರಿಸಿಕೊಂಡು, ಅಗತ್ಯವನ್ನಾಧರಿಸಿ, ರಾಜ್ಯದಲ್ಲಿ ಹೊಸದಾಗಿ 4050 ಅಂಗನವಾಡಿ ತೆರೆಯಲು ಕ್ರಮ.
- ರಾಜ್ಯದ ಸೈನಿಕರು ಕರ್ತವ್ಯ ನಿರತರಾಗಿದ್ದಾಗ ಮೃತರಾದರೆ, ಅವರ ಕುಟುಂಬದ ಜೀವನಕ್ಕೆ ಭದ್ರತೆ ಒದಗಿಸುವ ಉದ್ದೇಶದಿಂದ ಮೃತ ಸೈನಿಕರ ಕುಟುಂಬದ ಒಬ್ಬ ಸದಸ್ಯರಿಗೆ ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿ.



## ಬಡ ಮಕ್ಕಳ ಶಿಕ್ಷಣಕ್ಕೆ ಭರವಸೆ ಹುಟ್ಟಿಸಿದ ವಿದ್ಯಾನಿಧಿ

ಈ ರೈತ ಮಕ್ಕಳು ಉನ್ನತ ವಿದ್ಯಾಭ್ಯಾಸ ಮಾಡಬೇಕು ಎಂಬುದು ಸರ್ಕಾರದ ಆಶಯ. ಅದನ್ನು ಸಾರ್ಥಕಗೊಳಿಸುವಲ್ಲಿ ಸರ್ಕಾರಿ ಯಂತ್ರ ಅವಿರತ ಶ್ರಮಿಸಿದೆ. ನೇಕಾರರು, ಮೀನುಗಾರರು ಮತ್ತು ಟ್ಯಾಕ್ಸಿ ಚಾಲಕರ ಮಕ್ಕಳ ಕಣ್ಣಲ್ಲೂ ಶಿಕ್ಷಣದ ಹೊಸ ಭರವಸೆ ಕಾಣಲು ಸರ್ಕಾರ ಸಿದ್ಧತೆ ನಡೆಸಿದೆ. 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಯೋಜನೆಯಡಿ ಈ ಮಕ್ಕಳಿಗೂ ವಿದ್ಯಾರ್ಥಿ ವೇತನ ನೀಡಲು ಮುಂದಾಗಿದೆ. ದೇಶದಲ್ಲೇ ಇಂತಹುದೊಂದು ಯೋಜನೆಯನ್ನು ಮೊದಲ ಬಾರಿಗೆ ಸ್ಥಾಪಿಸಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಸರ್ಕಾರ ಹತ್ತು ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಈ ನಿಧಿಯನ್ನು ತಲುಪಿಸುವಲ್ಲಿ ಯಶಸ್ವಿಯಾಗಿದೆ. ಅಂದರೆ ಸರ್ಕಾರ ವಿತರಿಸಿರುವ ಒಟ್ಟು ಮೊತ್ತವೇ ಸುಮಾರು 440 ಕೋಟಿ ರೂ.

ಅಂದರೆ 'ಸಮಗ್ರ ಅಭಿವೃದ್ಧಿ'ಯ ಗ್ರಾಫ್‌ನ ವ್ಯಾಪ್ತಿಯಲ್ಲಿ ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಎಲ್ಲ ಭಾಗಗಳ ಆಯ್ದ 750 ಗ್ರಾಮ ಪಂಚಾಯತಿಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಸಂಕಲ್ಪವಾಗಿತ್ತು. ವರ್ಷದ ಬಳಿಕ ಅವಲೋಕನ ಮಾಡಿ ನೋಡಿದರೆ ಸರ್ಕಾರ ಈ ನಿಟ್ಟಿನಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿರುವುದು ವೇದ್ಯವಾಗಿತ್ತು. ಅಂದರೆ ಇಂತಹುದೊಂದು ಯೋಜನೆಗಾಗಿ ಸರ್ಕಾರ ಹಾಕಿಕೊಂಡ ಗುರಿ 9000 ಕಾಮಗಾರಿಗಳು. ಅವುಗಳಲ್ಲಿ 6499 ಕಾಮಗಾರಿಗಳು ಪೂರ್ಣಗೊಂಡಿವೆ.



Downloaded From:www.kpscvaani.com

## ಮನೆ ಮನೆಗೆ ಗಂಗೆ

**ದೇಶದ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಪೂರೈಕೆಯೇ ಇಲ್ಲದ ಮನೆಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ 'ಮನೆ ಮನೆಗೆ ಗಂಗೆ'. ಅಂತಹ ಮಹತ್ವಾಕಾಂಕ್ಷಿ ಯೋಜನೆಯನ್ನು ಕೈಗೆತ್ತಿಕೊಂಡಿರುವ ರಾಜ್ಯ ಸರ್ಕಾರ ಅದನ್ನು ಎಷ್ಟರ ಮಟ್ಟಿಗೆ ಜಾರಿಗೆ ತಂದಿದೆ ಎಂಬುದರ ಚಿತ್ರಣವನ್ನು ಮುಖ್ಯಮಂತ್ರಿ ಬೊಮ್ಮಾಯಿ ಅವರು ತಮ್ಮ ಭಾಷಣದಲ್ಲಿ ನೀಡಿದರು.**

**ಕೇಂದ್ರ ಸರ್ಕಾರ ಈ ಯೋಜನೆಯನ್ನು ಪ್ರಕಟಿಸಿದಂದಿನಿಂದ ಈವರೆಗೆ ರಾಜ್ಯದಲ್ಲಿ 52.78 ಲಕ್ಷ ಮನೆಗಳಿಗೆ ನಲ್ಲಿ ನೀರಿನ ಸೌಲಭ್ಯವನ್ನು ಸರ್ಕಾರ ಕಲ್ಪಿಸಿದೆ. ಆದರೆ ಕಳೆದ ಒಂದೇ ವರ್ಷದಲ್ಲಿ ಮಾಡಿರುವ ಸಾಧನೆ 22.85 ಲಕ್ಷ ಮನೆಗಳಿಗೆ ನೀರಿನ ಸೌಕರ್ಯವನ್ನು ಒದಗಿಸಿರುವುದು. ಈ ಯೋಜನೆಯನ್ನು ಮತ್ತಷ್ಟು ಮುತುವರ್ಜಿಯಿಂದ ಮಾಡಲಾಗುತ್ತಿದ್ದು ಇನ್ನಷ್ಟು ಮನೆಗಳು 'ಗಂಗೆ'ಯ ಭಾಗ್ಯ ಕಾಣುವ ದಿನಗಳು ದೂರವಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.**

ಮುಂದಿನ ಆರು ತಿಂಗಳಲ್ಲಿ ಉಳಿದ ಕಾಮಗಾರಿಗಳಿಗೆ ಇನ್ನಷ್ಟು ವೇಗ ದೊರೆಯಲಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ ಎಂಬುದನ್ನು ಬೊಮ್ಮಾಯಿ ಅವರು ತಮ್ಮ ಭಾಷಣದಲ್ಲಿ ಮನನ ಮಾಡಿಕೊಟ್ಟಿದ್ದಾರೆ.

ರೈತರು, ನೇಕಾರರು, ಮೀನುಗಾರರಾದಿಯಾಗಿ ನಮ್ಮ ಗ್ರಾಮೀಣ ಭಾರತದ ಜೀವನಾಡಿಯಾಗಿರುವವರು ಹಲವರು. ಇವರೆಲ್ಲರೂ ಬೆಳೆದ ಬೆಳೆ, ತಯಾರಿಸಿದ ಉತ್ಪನ್ನಗಳಿಗೆ ಸೂಕ್ತವಾದ ಮಾರುಕಟ್ಟೆ ಸಿಗಬೇಕು, ದಕ್ಷ ವೇದಿಕೆಯನ್ನು ಅದು ತಲುಪಿದರೆ ಮಾತ್ರ ಸಾಫಲ್ಯತೆ ಸಾಧ್ಯ ಎಂಬ ಕಾರಣಕ್ಕೆ ಅಮೃತ ರೈತ ಉತ್ಪಾದಕ ಸಂಸ್ಥೆಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಿತ್ತು. ಮೂರು ವರ್ಷಗಳ ಅವಧಿಯಲ್ಲಿ ಇಂತಹ 750 ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತದೆ ಎಂದು ಘೋಷಿಸಲಾಗಿತ್ತು. ಕಳೆದ ಒಂದು ವರ್ಷದಲ್ಲಿ ಅಂತಹ 324 ರೈತ ಉತ್ಪಾದಕ ಸಂಸ್ಥೆಗಳನ್ನು ಸರ್ಕಾರ ಸ್ಥಾಪಿಸಿದ್ದು ಮಾತ್ರವಲ್ಲದೆ ಅವುಗಳಿಗೆ ತಲಾ 30 ಲಕ್ಷ ರೂ.ದಂತೆ 225 ಕೋಟಿ ರೂ. ಅನುದಾನವನ್ನು ನೀಡಿರುವುದು ಹೆಗ್ಗಳಿಕೆ. ಅಂದರೆ ಒಂದೇ ವರ್ಷದಲ್ಲಿ ಸರ್ಕಾರ ಶೇ.45ರಷ್ಟು ಸಾಧನೆಯನ್ನು ಮಾಡಿದಂತಾಗಿದೆ. ಇದರಿಂದಾಗಿ ಮೀನುಗಾರಿಕೆ, ಪಶುಸಂಗೋಪನೆ, ಜವಳಿ, ರೇಷ್ಮೆ, ತೋಟಗಾರಿಕೆಯಂತಹ ರೈತ ಉತ್ಪಾದಕ ಸಂಸ್ಥೆಗಳು ಸ್ಥಾಪನೆಗೊಂಡಿದ್ದು ಆಯಾ ಕ್ಷೇತ್ರಗಳ ರೈತರಿಗೆ, ಉತ್ಪಾದಕರಿಗೆ ಆದ್ಯತೆಗಳು ಸಿಕ್ಕಿವೆ.

ಶಿಕ್ಷಣದ ವಿಚಾರಕ್ಕೆ ಬಂದಾಗ ಗ್ರಾಮೀಣ ಭಾಗದ ಮಕ್ಕಳು ಯಾವತ್ತೂ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುತ್ತಾರೆ. ಅವರನ್ನು ಶಾಲೆಗಳತ್ತ ಕರೆತರುವ ಮೂಲಕ ಗುಣಮಟ್ಟದ ಶಿಕ್ಷಣದಿಂದ ಅವರು ವಂಚಿತರಾಗುವುದನ್ನು ತಪ್ಪಿಸಬೇಕು. ಆ ಕೆಲಸವನ್ನು ಅಮೃತ ಶಾಲಾ ಸೌಲಭ್ಯ ಯೋಜನೆಯ ಅಡಿಯಲ್ಲಿ ಸರ್ಕಾರ ಕೈಗೊಂಡಿದೆ. ಶಾಲೆಗಳಿಗೆ ಸುಸಜ್ಜಿತವಾದ ಕಟ್ಟಡಗಳು, ಶೌಚಾಲಯ, ಪ್ರಯೋಗಾಲಯ, ಗ್ರಂಥಾಲಯಗಳನ್ನು ಒದಗಿಸುವುದು ಈ ಯೋಜನೆಯ ಆದ್ಯತೆ. ಇದಕ್ಕಾಗಿ ಸರ್ಕಾರ ಗುರುತಿಸಿದ ಶಾಲೆಗಳ ಸಂಖ್ಯೆ 750. ಅವುಗಳಿಗೆ ತಲಾ ಹತ್ತು ಲಕ್ಷ ರೂ.ಗಳಂತೆ ಈಗಾಗಲೇ ಸುಮಾರು 74 ಕೋಟಿಗೂ ಅಧಿಕ ಮೊತ್ತವನ್ನು ಬಿಡುಗಡೆ ಮಾಡಿರುವುದು ಸರ್ಕಾರಕ್ಕೆ ಗ್ರಾಮೀಣ ಶಾಲೆಗಳ ಬಗ್ಗೆ ಇರುವ ಕಾಳಜಿಯನ್ನು ತೋರಿಸುತ್ತದೆ. ಹಾಗೆಯೇ 750 ಅಂಗನವಾಡಿ ಕೇಂದ್ರಗಳಿಗೂ ಮೂಲ ಸೌಕರ್ಯಗಳನ್ನು ಕಲ್ಪಿಸಿ ಅವುಗಳನ್ನು ಮೇಲ್ದರ್ಜೆಗೆ ಏರಿಸುವ ಕೆಲಸ ಕೂಡ ಪ್ರಗತಿಯಲ್ಲಿದೆ. ಇದರಲ್ಲಿ 392 ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಅವರು ತಮ್ಮ ಭಾಷಣದಲ್ಲಿ ಪ್ರಕಟಿಸಿದ್ದಾರೆ.

ತಳವರ್ಗದ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಯುವಕರನ್ನು ಉತ್ತೇಜಿಸುವ ಯೋಜನೆ ಅಮೃತ ಕೌಶಲ ಅಭಿವೃದ್ಧಿ ತರಬೇತಿ ಯೋಜನೆ. ಯುವ ಜನತೆಗೆ ಸರಿಯಾದ ಉದ್ಯೋಗ ನೀಡಲಾಗುತ್ತಿಲ್ಲ ಎಂಬ ಕೂಗಿನ ನಡುವೆಯೇ ಎರಡು ವರ್ಷಗಳ ಕಾಲಮಿತಿಯಲ್ಲಿ 75000 ಯುವಕ, ಯುವತಿಯರ ಕೌಶಲ್ಯಾಭಿವೃದ್ಧಿಗೆ ತರಬೇತಿ ನೀಡುವುದು ಇದರ ಉದ್ದೇಶ. ಒಟ್ಟಾರೆ ಈ ಕಾರ್ಯಕ್ರಮಗಳಿಗೆ ನಿಗದಿ ಮಾಡಿದ ಅನುದಾನ 112 ಕೋಟಿ ರೂ. ಈಗಾಗಲೇ 60 ಸಾವಿರಕ್ಕೂ ಅಧಿಕ ಮಂದಿ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ ಎಂಬುದು ಅಂದಾಜು. ಅಂದರೆ ಯುವಕರಿಗೆ ತರಬೇತಿ ನೀಡಿ ಅವರು ಸ್ವಾವಲಂಬಿಗಳಾಗಲು ಸ್ಪಷ್ಟವಾದ ದಾರಿಯನ್ನು ತೋರಿಸುವ ನಿಟ್ಟಿನಲ್ಲಿ ಸರ್ಕಾರ ಸರಿಯಾದ ಮಾರ್ಗದಲ್ಲಿ ಸಾಗಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ 40 ಸಾವಿರ ಕೋಟಿ ರೂ.ಗೂ ಅಧಿಕ ಹೂಡಿಕೆಯ ಯೋಜನೆಗಳಿಗೆ ಅನುಮೋದನೆ ಸಿಕ್ಕಿರುವುದರಿಂದ ರಾಜ್ಯದಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚಿನ ಯುವಕರಿಗೆ ಉದ್ಯೋಗ ದೊರೆಯಲಿದೆ ಎಂಬ ವಿಶ್ವಾಸ ಸರ್ಕಾರದ್ದಾಗಿದೆ.

ಮಹಾನಗರಗಳಿರಲಿ, ಪಟ್ಟಣಗಳಿರಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅದರ ಜೀವನಾಡಿ ಇದ್ದಂತೆ. ಅವುಗಳನ್ನು







Downloaded From:www.kpscvaani.com



ಮೇಲ್ದರ್ಜೆಗೇರಿಸಿದಷ್ಟು ಜನರಿಗೆ ಅವು ಇನ್ನಷ್ಟು ಹತ್ತಿರವಾಗುತ್ತಾ ಹೋಗುತ್ತವೆ. ಅಮೃತ ಆರೋಗ್ಯ ಮೂಲ ಸೌಲಭ್ಯ ಯೋಜನೆ ಇಂತಹ ದೂರದೃಷ್ಟಿಯನ್ನು ಹೊಂದಿರುವ ಯೋಜನೆ. ಪ್ರತಿ ಆರೋಗ್ಯ ಕೇಂದ್ರಗಳಿಗೆ 20 ಲಕ್ಷ ರೂ. ನೀಡಿ 750 ಪಿಎಚ್‌ಸಿಗಳ ಉನ್ನತೀಕರಣದ ಗುರಿಯ ಕಡೆಗೆ ಹೆಜ್ಜೆ ಹಾಕಿರುವುದು ಸರ್ಕಾರದ ಜನಪರ ನಿಲುವನ್ನು ಪುಷ್ಟೀಕರಿಸುತ್ತದೆ.

ಅಮೃತ ನಿರ್ಮಲ ನಗರ ಯೋಜನೆ, ಅಮೃತ ಸಮುದಾಯ ಅಭಿವೃದ್ಧಿ ಯೋಜನೆ, ಅಮೃತ ಕ್ರೀಡಾ ದತ್ತು ಯೋಜನೆ, ಅಮೃತ ಸ್ವಸಹಾಯ ಕಿರು ಉದ್ದಿಮೆ ಯೋಜನೆ, ಗ್ರಾಮೀಣ ವಸತಿ ಯೋಜನೆ, ಅಮೃತ ನವೋದ್ಯಮ ಯೋಜನೆಗಳನ್ನು ಘೋಷಿಸುವಲ್ಲಿ ತೋರಿದ್ದ ಕಾಳಜಿಯನ್ನು ಅವುಗಳಿಗೆ ಅನುದಾನ ಬಿಡುಗಡೆ ಮಾಡುವಲ್ಲಿಯೂ, ಜಾರಿಗೆ ತರುವಂತೆ ಮಾಡುವಲ್ಲಿಯೂ ಸರ್ಕಾರ ಕಾಳಜಿಯನ್ನು ತೋರಿದೆ ಎಂಬುದು ಮುಖ್ಯಮಂತ್ರಿಯವರು ಮಂಡಿಸಿದ ಸರ್ಕಾರದ ಸಾಧನೆಯ ಪಟ್ಟಿಯಿಂದ ವ್ಯಕ್ತವಾಗುತ್ತದೆ. ಸರ್ಕಾರ ಮಾತು ಕೊಟ್ಟ ಒಂದು ವರ್ಷದಲ್ಲಿ ಈಡೇರಿಸಿದ್ದೆಷ್ಟು ಎಂದು ಮತ್ತೊಮ್ಮೆ ಸಿಂಹಾವಲೋಕನ ಮಾಡಿ ನೋಡಿದಾಗ ಮೇಲೆ ಪ್ರಸ್ತಾಪ ಮಾಡಿದ ಅನುಷ್ಠಾನಗೊಂಡ ಮತ್ತು ಆ ಹಂತದಲ್ಲಿರುವ ಅಮೃತ ಯೋಜನೆಗಳು ಕಣ್ಣ ಮುಂದೆ ನಿಲ್ಲುತ್ತವೆ. ಸರ್ಕಾರದ 'ಸಫಲತೆ'ಯನ್ನು ಅಳೆಯುವ ಮಾನದಂಡಗಳಾಗಿ ಅವು ಕಾಣುತ್ತವೆ.

ಇನ್ನು ಯುವ ಜನರಿಗೆ ಉದ್ಯೋಗವನ್ನು ಒದಗಿಸುವ ನಿಟ್ಟಿನಲ್ಲಿ ಬಂಡವಾಳ ಹೂಡಿಕೆ ಆಕರ್ಷಿಸಲು ಸರ್ಕಾರ ಆದ್ಯತೆ ನೀಡುತ್ತಿದೆ. ಕೋವಿಡ್ ಸಂದರ್ಭದಲ್ಲಿಯೂ ವಿದೇಶಿ ನೇರ ಹೂಡಿಕೆಯಲ್ಲಿ ದೇಶದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿತ್ತು. ಈಗಲೂ ಈ ಮುಂಚೂಣಿಯನ್ನು ರಾಜ್ಯ ಕಾಯ್ದುಕೊಂಡಿದೆ. ನಾವೀನ್ಯತೆಯಲ್ಲಿ, ಸ್ಟಾರ್ಟಪ್‌ಗಳ ರ‍್ಯಾಂಕಿಂಗ್‌ನಲ್ಲಿಯೂ ರಾಜ್ಯ ಅಗ್ರ ಸ್ಥಾನದಲ್ಲಿರುವುದು ರಾಜ್ಯದ ಉದ್ಯಮ ಸ್ನೇಹಿ ವಾತಾವರಣಕ್ಕೆ ಹಿಡಿದ ಕೈಗನ್ನಡಿ ಎಂದು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ.

ಒಟ್ಟಿನಲ್ಲಿ ಸರ್ಕಾರವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗದವರು, ಮಹಿಳೆಯರು, ಅಲ್ಪಸಂಖ್ಯಾತರು ಹೀಗೆ ಎಲ್ಲಾ ದುರ್ಬಲ ವರ್ಗಗಳ ಜನರು ಸ್ವಾಭಿಮಾನಿ, ಸ್ವಾವಲಂಬನೆಯ ಬದುಕು ನಡೆಸಲು ಪೂರಕ ವಾತಾವರಣ ನಿರ್ಮಾಣ ಮಾಡುವ ಮೂಲಕ ಸಮ ಸಮಾಜ ನಿರ್ಮಾಣಕ್ಕಾಗಿ ಸರ್ಕಾರವು ಶಿಕ್ಷಣ, ಉದ್ಯೋಗ, ಸಬಲೀಕರಣ (Education, Employment & Empowerment) ಎಂಬ ಮೂರು ಇ ಸೂತ್ರದಡಿ ಮುನ್ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಅವರು ಹೇಳಿರುವುದಕ್ಕೆ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೇ ಸಾಕ್ಷಿಯಾಗಿವೆ.


Downloaded From:www.kpscvaani.com



# ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ: ಇದು ಸರ್ಕಾರದ ಆಶಯ

**ತಮ್ಮ ನೇತೃತ್ವದ ಸರ್ಕಾರಕ್ಕೆ ಒಂದು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು ನಡೆಸಿದ ಮಾಧ್ಯಮ ಗೋಷ್ಠಿಯ ಸಂಕ್ಷಿಪ್ತ ಮಾಹಿತಿ.**

ಎಂ. ಭಾಗ್ಯ

ರಾಜ್ಯದ ಎಲ್ಲ ವರ್ಗದವರ ಅಭಿವೃದ್ಧಿಗೆ ಸಮಗ್ರವಾದ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ರಾಜ್ಯದ ಆರ್ಥಿಕತೆಯನ್ನು ಹೆಚ್ಚಿಸಿ, ಅದರ ಲಾಭವನ್ನು ಎಲ್ಲರಿಗೂ ತಲುಪಿಸುವ ಸದುದ್ದೇಶದಿಂದ ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ ಕಟ್ಟುವ ಸಂಕಲ್ಪವನ್ನು ರಾಜ್ಯ ಸರ್ಕಾರವು ಮಾಡುತ್ತಿದೆ.

ಬಸವರಾಜ ಎಸ್ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರಕ್ಕೆ ಒಂದು ವರ್ಷ ಹಾಗೂ ಸರ್ಕಾರಕ್ಕೆ ಮೂರು ವರ್ಷಗಳು ಪೂರೈಸುತ್ತಿದ್ದ ಹಿನ್ನೆಲೆಯಲ್ಲಿ ಜುಲೈ 28 ರಂದು ಬ್ಯಾಂಕ್ವೆಟ್‌ಹಾಲ್‌ನಲ್ಲಿ ಸರ್ಕಾರಿ ಕಾರ್ಯಕ್ರಮವನ್ನು ಮತ್ತು ದೊಡ್ಡಬಳ್ಳಾಪುರದಲ್ಲಿ ಜನೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ ತಮ್ಮದೇ ಪಕ್ಷದ ಯುವ ಮುಖಂಡ ಪ್ರವೀಣ್ ಅವರ ಹತ್ಯೆಯಾಗಿದ್ದರಿಂದ ಬಹಳ ನೊಂದಿದ್ದ ಮುಖ್ಯಮಂತ್ರಿ ಅವರಿಗೆ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆತ್ಮಸಾಕ್ಷಿ ಒಪ್ಪಲಿಲ್ಲ. ಹಾಗಾಗಿ ಅವರು 27 ರ ಮಧ್ಯರಾತ್ರಿ ಕಾರ್ಯಕ್ರಮಗಳನ್ನು ರದ್ದು ಮಾಡಿರುವುದಾಗಿ ಘೋಷಣೆ ಮಾಡಿದರು.

ತಮ್ಮ ನೇತೃತ್ವದ ಸರ್ಕಾರಕ್ಕೆ ಒಂದು ವರ್ಷ ಹಾಗೂ ಸರ್ಕಾರಕ್ಕೆ ಮೂರು ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಇದುವರೆಗೆ ಏನೆಲ್ಲಾ ಮಾಡಿದೆ ಮತ್ತು ಮುಂದೆ ಯಾವೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದೆಂಬುದನ್ನು ತಿಳಿಸಬೇಕಾದುದು ಸರ್ಕಾರದ ಕರ್ತವ್ಯವಾದ್ದರಿಂದ ಅವರು ಜುಲೈ 28 ರಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುವ ಮೂಲಕ ತಮ್ಮ ಸರ್ಕಾರ ಈ ಒಂದು ವರ್ಷದಲ್ಲಿ ಏನೆಲ್ಲಾ ಮಾಡಿದೆ ಮತ್ತು ಸರ್ಕಾರ ಹಮ್ಮಿಕೊಂಡಿರುವ ಇತರೆ ಹೊಸ ಯೋಜನೆಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಂಡರು.

ಹಾಗಾಗಿ ಅವರು, ಅಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮೊದಲಿಗೆ



Downloaded From:www.kpscvaani.com



ಹಿರಿಯ ಅಧಿಕಾರಿಗಳ ಸಭೆಯನ್ನು ನಡೆಸಿದರು. ಸಭೆಯಲ್ಲಿ ಕಳೆದ ಒಂದು ವರ್ಷದಲ್ಲಿ ಸಾಧಿಸಿದ ಪ್ರಗತಿಗೆ ಅಧಿಕಾರಿಗಳು ನೀಡಿದ ಸಹಕಾರ ಮತ್ತು ಕೊಡುಗೆಗೆ ಮೆಚ್ಚುಗೆಯನ್ನು ಸೂಚಿಸಿದರು. ರಾಜಕಾರಣಿಗಳ ಅಧಿಕಾರವಧಿ ಕೇವಲ ಐದು ವರ್ಷ. ಆದರೆ ಅಧಿಕಾರಿಗಳು ಶಾಶ್ವತವಾಗಿ ಇರುವವರು. ಹಾಗಾಗಿ ನಿಮ್ಮ ಸಾಮರ್ಥ್ಯ, ಅನುಭವವನ್ನು ಅಭಿವೃದ್ಧಿಗೆ ಉಪಯೋಗವಾಗುವಂತೆ ಹಾಗೂ ಯೋಜನೆಗಳು ತಳಹಂತದವರೆಗೆ ತಲುಪುವಂತೆ ಮಾಡುವುದು ನಿಮ್ಮ ಕೈಯಲ್ಲಿದೆ ಎಂದು ತಿಳಿಸಿದರು.

ಅಧಿಕಾರಿಗಳು ಕೇವಲ ಕಡತ ವಿಲೇವಾರಿ ಮಾಡುವುದಷ್ಟೇ ತಮ್ಮ ಜವಾಬ್ದಾರಿ ಎಂದು ಭಾವಿಸದೆ, ಸರ್ಕಾರ ಕೈಗೊಂಡಿರುವ ಜನಪರ ಯೋಜನೆಗಳು ಜನರನ್ನು ತಲುಪಿದೆಯೇ ಎಂದು ಖಾತರಿ ಪಡಿಸಿಕೊಳ್ಳಬೇಕೆಂದು ಅವರು ಅಧಿಕಾರಿಗಳಿಗೆ ಸಲಹೆ ನೀಡಿದರು. ಇಂದಿನ ದಿನಗಳಲ್ಲಿ ಸರ್ಕಾರದಿಂದ ಜನರ ಆಕಾಂಕ್ಷೆ, ಅಪೇಕ್ಷೆಗಳು ಬದಲಾಗುತ್ತಿದೆ. ಇದನ್ನು ಅರಿತು ಸ್ಪಂದನಾಶೀಲರಾಗಿ ನೀವು ಕಾರ್ಯ ನಿರ್ವಹಿಸಬೇಕು ಎಂದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಅತ್ಯಂತ ಸವಾಲಿನ ಕೆಲಸ. ದುರ್ಬಲ ವರ್ಗದವರಿಗೆ ನ್ಯಾಯ ಒದಗಿಸುವ ರೀತಿಯಲ್ಲಿ ಎಲ್ಲರೂ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು.

ಪ್ರವಾಹ ಉಂಟಾದ ಸಂದರ್ಭದಲ್ಲಿ ರಕ್ಷಣೆ ಹಾಗೂ ಪರಿಹಾರ ಕಾರ್ಯಗಳಲ್ಲಿ ಇಡೀ ಆಡಳಿತ ಯಂತ್ರ ಒಟ್ಟಾಗಿ ಶ್ರಮಿಸಿ, ಜನರ ಸಂಕಷ್ಟಕ್ಕೆ ಸ್ಪಂದಿಸಿ ಅದ್ಭುತ ಕೆಲಸ ಮಾಡಲಾಗಿದೆ. ಪರಿಹಾರ ವಿತರಣೆಯನ್ನೂ ಚುರುಕಾಗಿ ನಿರ್ವಹಿಸಲಾಗಿದೆ. ಕೋವಿಡ್-19 ರ ಸಂದರ್ಭದಲ್ಲಿಯೂ ಜೀವದ ಹಂಗು ತೊರೆದು ಕಾರ್ಯ ನಿರ್ವಹಿಸಿದುದಕ್ಕೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಕೋವಿಡ್-19 ನಂತರ ರಾಜ್ಯದಲ್ಲಿ ಹಣಕಾಸು ಪರಿಸ್ಥಿತಿಯಲ್ಲಿಯೂ ಹೆಚ್ಚಿನ ಸುಧಾರಣೆಯಾಗಿದ್ದು, ಜಲಜೀವನ್ ಮಿಷನ್‌ನಲ್ಲಿ ನಮ್ಮ ರಾಜ್ಯವು 17 ನೇ ಸ್ಥಾನದಿಂದ 3 ನೇ ಸ್ಥಾನಕ್ಕೇರಿದೆ. ಮನೆಗಳ ನಿರ್ಮಾಣ, ಲಸಿಕಾ ಅಭಿಯಾನ ಮೊದಲಾದವುಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಇನ್ನಷ್ಟು ತೀವ್ರಗೊಳಿಸುವಂತೆ ಅವರು ಅಧಿಕಾರಿಗಳಿಗೆ ತಿಳಿಸಿದರು.

ಅಧಿಕಾರಿಗಳ ಸಭೆಯ ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ಬಜೆಟ್‌ನಲ್ಲಿ ಘೋಷಿಸಲಾದ ಕಾರ್ಯಕ್ರಮಗಳಿಗೆ ಒಂದೇ ತಿಂಗಳ ಅವಧಿಯಲ್ಲಿ ಸರ್ಕಾರದ ಆದೇಶವನ್ನು ಹೊರಡಿಸಿ, ಪ್ರಥಮ ಬಾರಿಗೆ 4 ತಿಂಗಳ ಅವಧಿಯಲ್ಲಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಆಡಳಿತದಲ್ಲಿ ದಕ್ಷತೆಯನ್ನು ತರಲಾಗಿದೆ. ಪ್ರಗತಿಪರವಾಗಿರುವ ಉದ್ಯಮವನ್ನು ಸ್ಥಾಪಿಸಿ, ಯುವಕರಿಗೆ ಉದ್ಯೋಗ ನೀಡುವುದರಿಂದ ಹಿಡಿದು ಹೊಲದಲ್ಲಿ ದುಡಿಯುವ ರೈತನಿಗೆ, ಕೂಲಿಕಾರರಿಗೆ, ಮಹಿಳೆಯರಿಗೆ, ಎಸ್.ಸಿ, ಎಸ್.ಟಿ, ಓಬಿಸಿ ಜನರ ಅಭಿವೃದ್ಧಿಗೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ 5 ಹೊಸ ಇಂಟೆಗ್ರೇಟೆಡ್ ಟೌನ್ ಷಿಪ್‌ಗಳನ್ನು ಕಟ್ಟುವ ಪ್ರಕ್ರಿಯೆ ಪ್ರಾರಂಭವಾಗಿದೆ. ಆರು ಇಂಜಿನಿಯರಿಂಗ್ ಕಾಲೇಜುಗಳನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಬಡವರಿಗೆ ಆರೋಗ್ಯ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಡಯಾಲಿಸಿಸ್ ಸೈಕಲ್ ಅನ್ನು 60,000ಕ್ಕೆ ಏರಿಸಲು ಆದೇಶಿಸಲಾಗಿದೆ. ಕ್ಯಾನ್ಸರ್ ರೋಗಿಗಳಿಗೆ ಕೀಮೋಥೆರಪಿ ಚಿಕಿತ್ಸೆಯನ್ನು 10 ಕಾಲೇಜುಗಳಲ್ಲಿ ಒದಗಿಸಲು ಈಗಾಗಲೇ ಅನುಮತಿಯನ್ನು ನೀಡಲಾಗಿದೆ. ಆ್ಯಸಿಡ್ ದಾಳಿಗೊಳಗಾದವರಿಗೆ ನೀಡುವ ಭತ್ಯೆಯನ್ನು 10 ಸಾವಿರ ರೂಗಳಿಗೆ ಹೆಚ್ಚಳ ಮಾಡಲಾಗಿದ್ದು, ಆಶಾ ಕಾರ್ಯಕರ್ತರಿಗೆ, ಸಫಾಯಿ ಕರ್ಮಚಾರಿ, ಗ್ರಾಮ ಸಹಾಯಕರಿಗೆ ಮಾಸಿಕ ಭತ್ಯೆ ಹೆಚ್ಚಳ ಮಾಡಲು ಆದೇಶ ನೀಡಲಾಗಿದೆ. ಅತಿಥಿ ಉಪನ್ಯಾಸಕರ ಗೌರವಧನ ಹೆಚ್ಚಳ, ಈ ಎಲ್ಲ ಸಾಧನೆಗಳು ಜನರನ್ನು ತಲುಪುತ್ತಿದ್ದು, ಸಕಾರಾತ್ಮಕ ಪ್ರತಿಕ್ರಿಯೆ ದೊರೆಯುತ್ತಿದೆ ಎಂದರು.

ಹಾಗೆಯೇ ತಮ್ಮ ಅಧಿಕಾರದ ಈ ಅವಧಿಯಲ್ಲಿ ಎಲ್ಲಾ ವಿವಾದಗಳು ಮತ್ತು ಸವಾಲುಗಳನ್ನು ವ್ಯವಸ್ಥಿತವಾಗಿ ನಿಭಾಯಿಸಲಾಗಿದೆ. ಹಿಜಾಬ್ ವಿವಾದದಲ್ಲಿ ಕಾನೂನಿನ ಆದೇಶವನ್ನು ಜಾರಿಗೊಳಿಸಿದ್ದರ ಪರಿಣಾಮ ಇಂದು ಬಹುತೇಕರು ಹಿಜಾಬ್ ಸಂಬಂಧಿಸಿದ ನಿಯಮವನ್ನು ಪಾಲಿಸುತ್ತಿದ್ದಾರೆ. ಅದೇ ರೀತಿ ಮಸೀದಿಗಳಲ್ಲಿ ಆಜಾನ್ ಬಗ್ಗೆಯೂ ಸುಪ್ರೀಂ ಕೋರ್ಟ್ ಆದೇಶವನ್ನು ಪರಿಪಾಲಿಸಿ ವಿವಾದವನ್ನು ಬಗೆಹರಿಸಲಾಗಿದೆ.

ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕದಡಲೆಂದೇ ಕೆಲವೊಂದು ಸಂಘಟನೆಗಳು ರಾಜ್ಯದಲ್ಲಿ ಹುಟ್ಟಿಕೊಂಡಿವೆ. ಸರ್ಕಾರವು ಹಲವು ವಿಧಾನಗಳನ್ನು ಪ್ರಯೋಗ ಮಾಡುವ ಮೂಲಕ ಇಂತಹ ಅಹಿತಕರ ಘಟನೆಗಳನ್ನು ನಿಯಂತ್ರಿಸಿದೆ. ಇದಕ್ಕೆ ಡಿಜೆಹಳ್ಳಿ-ಕೆಜೆಹಳ್ಳಿ, ಮತ್ತು ಪಾಂಡವಪುರ ಪ್ರಕರಣಗಳೇ ಸಾಕ್ಷಿ.

ಒಟ್ಟಿನಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದಲ್ಲಿ ಎರಡು ವರ್ಷ ಮತ್ತು ತಮ್ಮ ನೇತೃತ್ವದಲ್ಲಿ ಒಂದು ವರ್ಷ ಸೇರಿದಂತೆ ಒಟ್ಟು ಮೂರು ವರ್ಷದಲ್ಲಿ ನಮ್ಮ ಸರ್ಕಾರವು ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಜನರ ಪಾಲ್ಗೊಳ್ಳುವಿಕೆ ಹಾಗೂ ಭಾಗೀದಾರಿಕೆಯನ್ನು ಖಾತ್ರಿ ಪಡಿಸುವಂತಹ ಆಡಳಿತ ನೀಡಿದ್ದೇವೆ, ಮುಂದೆಯೂ ಜನಪರ ಆಡಳಿತವನ್ನು ನೀಡುತ್ತೇವೆ ಎಂಬುದನ್ನು ಮಾಧ್ಯಮದ ಮೂಲಕ ನಾಡಿನ ಸಮಸ್ತ ಜನರಿಗೆ ತಿಳಿಸಿದರು.

**ಮುಖ್ಯಮಂತ್ರಿ ಅವರು ಈ ಸಂದರ್ಭದಲ್ಲಿ ಘೋಷಿಸಿದ ಹೊಸ ಯೋಜನೆಗಳು:**

**ನೇಕಾರ, ಮೀನುಗಾರ, ಟ್ಯಾಕ್ಸಿ ಚಾಲಕರ ಮಕ್ಕಳಿಗೂ ವಿದ್ಯಾರ್ಥಿ ವೇತನ:** ತಮ್ಮ ಸರ್ಕಾರದ ಬಹುಮುಖ್ಯ ಯೋಜನೆಯಾದ ರೈತ ವಿದ್ಯಾನಿಧಿ ಯೋಜನೆಯಡಿ ಕಳೆದ ವರ್ಷ 8.50 ಲಕ್ಷ ಹಾಗೂ ಈ ವರ್ಷ 9.8 ಲಕ್ಷ



Downloaded From:www.kpscvaani.com

ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ. ಇನ್ನು ಇದೇ ಯೋಜನೆಯಡಿ ನೇಕಾರರು, ಮೀನುಗಾರರು ಮತ್ತು ಟ್ಯಾಕ್ಸಿ ಚಾಲಕರ ಮಕ್ಕಳ ಉನ್ನತ ಶಿಕ್ಷಣಕ್ಕೂ ಪ್ರೋತ್ಸಾಹ ನೀಡಲು ವಿದ್ಯಾರ್ಥಿ ವೇತನ ನೀಡಲಾಗುವುದು ಎಂದು ಮುಖ್ಯಮಂತ್ರಿ ಅವರು ಘೋಷಣೆ ಮಾಡಿದರು.

**ಪುಣ್ಯಕೋಟಿ ದತ್ತು ಯೋಜನೆ:** ಗೋಶಾಲೆಯ ಜಾನುವಾರುಗಳಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸಲು ಮತ್ತು ಗೋವುಗಳ ಸಂರಕ್ಷಣೆ ಕಾರ್ಯದಲ್ಲಿ ಭಾಗವಹಿಸುವಂತೆ ಸಾರ್ವಜನಿಕರನ್ನು ಪ್ರೇರೇಪಿಸುವ ಉದ್ದೇಶದಿಂದ ರಾಜ್ಯದಲ್ಲಿಯೇ ಮೊದಲ ಬಾರಿಗೆ ಸರ್ಕಾರವು ಪುಣ್ಯಕೋಟಿ ದತ್ತು ಯೋಜನೆಯನ್ನು ಪ್ರಾರಂಬಿಸುತ್ತಿದೆ. ಈ ಯೋಜನೆಯಿಂದ ವಾರ್ಷಿಕ 11 ಸಾವಿರ ರೂ.ಗಳ ಮೊತ್ತಕ್ಕೆ ಗೋಶಾಲೆಗಳಲ್ಲಿನ ಗೋವುಗಳನ್ನು ದತ್ತು ತೆಗೆದುಕೊಳ್ಳಬಹುದಾಗಿದೆ.

**ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣ:** ಸರ್ವರಿಗೂ ಆರೋಗ್ಯ ಸೇವೆಯನ್ನು ನೀಡಬೇಕು ಎಂಬ ಉದ್ದೇಶದಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಉನ್ನತೀಕರಣ ಮಾಡಲಾಗುತ್ತಿದೆ. ಹಾಗಾಗಿ ರಾಜ್ಯದ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು (ಪಿಎಚ್‌ಸಿ) ರೂ 1000 ಕೋಟಿ ವೆಚ್ಚದಲ್ಲಿ ಸಮುದಾಯ ಕೇಂದ್ರಗಳನ್ನಾಗಿ (ಸಿಎಚ್‌ಸಿ) ಉನ್ನತೀಕರಣಗೊಳಿಸಲಾಗುವ ಮಹತ್ವಕಾಂಕ್ಷಿ ಯೋಜನೆಗೆ ಚಾಲನೆ ನೀಡಲಾಗುತ್ತಿದೆ. ಈ ಉನ್ನತೀಕರಣಗೊಂಡ ಕೇಂದ್ರಗಳಲ್ಲಿ ತುರ್ತು ಶಸ್ತ್ರ ಚಿಕಿತ್ಸೆ ಹಾಗೂ ಹೆರಿಗೆ ಮಾಡಿಸಲು ಅಗತ್ಯ ತಜ್ಞರುಗಳನ್ನೊಳಗೊಂಡಂತೆ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗುತ್ತದೆ. ಹಾಗಾಗಿ ಈ ಯೋಜನೆಯಿಂದ ರಾಜ್ಯದಲ್ಲಿ ಆರೋಗ್ಯ ವ್ಯವಸ್ಥೆಯು ಇನ್ನಷ್ಟು ಸುಧಾರಿಸಲಿದೆ.

**ನಮ್ಮ ಕ್ಲಿನಿಕ್:** ರಾಜ್ಯದ ನಗರದಲ್ಲಿ ವಾಸಿಸುತ್ತಿರುವ ಬಡ ಜನರಿಗಾಗಿ ರೂ 103 ಕೋಟಿ ರೂ ವೆಚ್ಚದಲ್ಲಿ 438 ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗುತ್ತಿದೆ. ನಮ್ಮ ಕ್ಲಿನಿಕ್‌ಗಳನ್ನು 15 ರಿಂದ 20 ಸಾವಿರ ಜನರಿಗೆ ಒಂದರಂತೆ ನಗರ ಪ್ರದೇಶಗಳಲ್ಲಿ ಸ್ಥಾಪಿಸಲಾಗುವುದು. ಸಾಮಾನ್ಯ ರೋಗಗಳಿಗೆ ಪ್ರಾಥಮಿಕ ಚಿಕಿತ್ಸೆಯನ್ನು ನೀಡುವ ಸಲುವಾಗಿ ಸ್ಥಾಪಿಸಲಾಗುತ್ತಿರುವ ಈ ಕ್ಲಿನಿಕ್‌ನಲ್ಲಿ ಸುಮಾರು 14 ಕ್ಕೂ ಹೆಚ್ಚಿನ ರೀತಿಯ ತಪಾಸಣೆಯ ಸೌಕರ್ಯ ಹಾಗೂ ಉಚಿತವಾಗಿ ಔಷಧ ನೀಡಲಾಗುವುದಲ್ಲದೆ, ಹೆಚ್ಚಿನ ಚಿಕಿತ್ಸೆಗೆ ತಜ್ಞರ ಸಲಹೆ ಪಡೆದುಕೊಂಡು ಚಿಕಿತ್ಸೆ ನೀಡಲಾಗುತ್ತದೆ.

**ಸ್ತ್ರೀ ಸಾಮರ್ಥ್ಯ ಯೋಜನೆ:** ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪಿನ ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಸ್ತ್ರೀ ಸಾಮರ್ಥ್ಯ ಯೋಜನೆಗಾಗಿ ಬಜೆಟ್‌ನಲ್ಲಿ 500 ಕೋಟಿ ರೂ ಘೋಷಿಸಿದೆ. ಅದರಂತೆ 33,333 ಸ್ವಸಹಾಯ ಗುಂಪುಗಳಿಗೆ ತಲಾ 1.50 ಲಕ್ಷ ರೂ ನಂತೆ ಸಹಾಯಧನ ವಿತರಿಸಲು ಸರ್ಕಾರ ಮುಂದಾಗಿದೆ. ರಾಜ್ಯ ಸರ್ಕಾರದ ವಿಶಿಷ್ಟ ಕಾರ್ಯಕ್ರಮವಾದ ಈ 'ಸ್ತ್ರೀ ಸಾಮರ್ಥ್ಯ' ಯೋಜನೆಯ ಮೂಲಕ ಸ್ವ ಸಹಾಯ ಗುಂಪಿನ ಮಹಿಳೆಯರಿಗೆ ಎಂಡ್ ಟು ಎಂಡ್ ಮ್ಯಾನೇಜ್ಮೆಂಟ್, ಕೌಶಲ್ಯ ತರಬೇತಿ, ಪ್ಯಾಕೇಜಿಂಗ್ ಮತ್ತು ಬ್ರ್ಯಾಂಡಿಂಗ್, ಮಾರ್ಕೆಟಿಂಗ್ ಬೆಂಬಲ, ಡಿಜಿಟಲ್ ಮಾರ್ಕೆಟ್‌ಗಳಾದ ಅಮೆಜಾನ್, ಫ್ಲಿಪ್‌ಕಾರ್ಟ್, ಮೀಶೋಗಳೊಂದಿಗೆ ಒಡಂಬಡಿಕೆ ಮಾಡಿ, ಮಾರುಕಟ್ಟೆ ವಿಸ್ತರಿಸಲು ಬೆಂಬಲ ನೀಡುವ ಮೂಲಕ ಗ್ರಾಮೀಣ ಮಹಿಳೆಯರನ್ನು ಉದ್ಯಮಶೀಲರನ್ನಾಗಿ ಮಾಡುವ ಸದುದ್ದೇಶವನ್ನು ಹೊಂದಲಾಗಿದೆ.

**ವಿವೇಕ ಯೋಜನೆ:** ಸರ್ಕಾರಿ ಶಾಲಾ ಕಾಲೇಜು ಮಕ್ಕಳಿಗೆ ಮೂಲಭೂತ ಅವಶ್ಯಕತೆಗಳಲ್ಲಿ ಪ್ರಮುಖವಾದ ಹೆಚ್ಚುವರಿ ಹಾಗೂ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಿಕೊಡುವ ಉದ್ದೇಶದಿಂದ ಸರ್ಕಾರವು ವಿವೇಕ ಹೆಸರಿನ ಈ ಯೋಜನೆಯನ್ನು ಹಮ್ಮಿಕೊಂಡಿದೆ. ಶಾಲಾ ಮತ್ತು ಕಾಲೇಜುಗಳಲ್ಲಿನ ಮೂಲ ಸೌಕರ್ಯವನ್ನು ಒದಗಿಸಿಕೊಡುವ ಮೂಲಕ ಮಕ್ಕಳಿಗೆ ಉತ್ತಮ ಕಲಿಕಾ ವಾತಾವರಣವನ್ನು ನಿರ್ಮಿಸಿಕೊಡುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಅವಶ್ಯಕತೆ ಇರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 6601 ಕೊಠಡಿಗಳನ್ನು ಮತ್ತು ಪದವಿ ಪೂರ್ವ ಕಾಲೇಜುಗಳ 1500 ಕೊಠಡಿಗಳು ಸೇರಿದಂತೆ 8101 ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು. ರಾಜ್ಯ ಸರ್ಕಾರಿ ಶಾಲೆಗಳಲ್ಲಿನ ಮೂಲ ಸೌಕರ್ಯ ಅಭಿವೃದ್ಧಿಗೆ ಆಯವ್ಯಯದಲ್ಲಿ ಒದಗಿಸಲಾಗಿದ್ದ 500 ಕೋಟಿ ರೂ.ಗಳನ್ನು ಬಳಕೆ ಮಾಡಿಕೊಂಡು ಈ ಕೊಠಡಿಗಳನ್ನು ನಿರ್ಮಾಣ ಮಾಡಲಾಗುವುದು.

**ಅಂಗನವಾಡಿ ಕೇಂದ್ರಗಳ ಉನ್ನತೀಕರಣ:** 102 ಮಹಾತ್ವಾಕಾಂಕ್ಷಿ ತಾಲೂಕುಗಳಲ್ಲಿ 500 ಅಂಗನವಾಡಿ ಕೇಂದ್ರಗಳು ಸೇರಿದಂತೆ ರಾಜ್ಯದಾದ್ಯಂತ 1000 ಅಂಗನವಾಡಿ ಕೇಂದ್ರಗಳ ನಿರ್ಮಾಣ ಹಾಗೂ ಉನ್ನತೀಕರಣ ಕಾರ್ಯಕ್ಕೆ ಸರ್ಕಾರವು ಚಾಲನೆ ನೀಡಿದೆ. 2022–23 ನೇ ಆಯವ್ಯಯದಲ್ಲಿ ಘೋಷಿಸಿದಂತೆ ಮಹಾತ್ಮಗಾಂಧಿ ನರೇಗಾ ಯೋಜನೆಯೊಂದಿಗೆ ಸಂಯೋಜಿಸಿ ಸ್ವಂತ ಕಟ್ಟಡಗಳಿಲ್ಲದ ಅಂಗನವಾಡಿಗಳಿಗೆ ಹೊಸ ಕಟ್ಟಡಗಳ ನಿರ್ಮಾಣವನ್ನು ಮಾಡಲಾಗುತ್ತದೆ. ಹೊಸ ಮಾದರಿಯ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಎರಡು ಕೊಠಡಿಯ ಒಂದು ಘಟಕದ ನಿರ್ಮಾಣಕ್ಕೆ 20 ಲಕ್ಷ ರೂ ಅನುದಾನವನ್ನು ಒದಗಿಸಲಾಗಿದ್ದು, ನೂತನವಾಗಿ ನಿರ್ಮಾಣವಾಗಲಿರುವ ಅಂಗನವಾಡಿಗಳು ಅಡುಗೆ ಮನೆ, ಆಟದ ಕೊಠಡಿ, ಶೌಚಾಲಯ ಸೇರಿದಂತೆ ಅಗತ್ಯವಿರುವ ಸೌಲಭ್ಯಗಳನ್ನು ಹೊಂದಿರಲಿದೆ.

**ಉಚಿತ ವಿದ್ಯುತ್:** ರಾಜ್ಯದ ಎಲ್ಲಾ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಬಡತನ ರೇಖೆಗಿಂತ ಕೆಳಗಿರುವ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳ ಗೃಹ ವಿದ್ಯುತ್ ಬಳಕೆದಾರರಿಗೆ ಅನ್ವಯವಾಗುವಂತೆ, ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಬಳಕೆದಾರರನ್ನು ಒಳಗೊಂಡಂತೆ ಮಾಸಿಕ 75 ಯುನಿಟ್ ಉಚಿತ ವಿದ್ಯುತ್ ನೀಡುವ ಯೋಜನೆಗೆ ಸರ್ಕಾರ ಚಾಲನೆ ನೀಡುತ್ತಿದೆ. ಗ್ರಾಹಕರು ಮಾಸಿಕ ವಿದ್ಯುತ್ ಬಿಲ್ಲನ್ನು ಸಂಪೂರ್ಣವಾಗಿ ನಿಗದಿತ ಅವಧಿಯೊಳಗೆ ಪಾವತಿಸಿದ ನಂತರ ಗ್ರಾಹಕರಿಗೆ ನೇರವಾಗಿ ನೇರ ನಗದು ಯೋಜನೆಯ ವ್ಯವಸ್ಥೆಯಡಿ ಸರ್ಕಾರದಿಂದ ಮರುಪಾವತಿ ಮಾಡಲಾಗುವುದು.

ಪತ್ರಿಕಾಗೋಷ್ಠಿಯಲ್ಲಿ ಇಷ್ಟು ಹೊಸ ಯೋಜನೆಗಳನ್ನು ಪ್ರಕಟಿಸಿದ ನಂತರ ಅವರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿರುವ ಪ್ರವೀಣ್ ಅವರ ಮನೆಗೆ ತೆರಳಿ ಪ್ರವೀಣ್ ಅವರ ಪತ್ನಿ ಮತ್ತು ತಾಯಿ ಅವರಿಗೆ ಸಾಂತ್ವಾನ ■



Downloaded From:www.kpscvaani.com

## ಸಂಪನ್ನಗೊಂಡ
# ಹರ್ ಘರ್ ತಿರಂಗಾ ಅಭಿಯಾನ

**ಆಗಸ್ಟ್ 13 ರಿಂದ 15 ರವರೆಗೆ ಮೂರು ದಿನಗಳ ಕಾಲ ಎಲ್ಲರ ಮನೆ ಮತ್ತು ಮನದಲ್ಲೂ ದೇಶದಾದ್ಯಂತ ತ್ರಿವರ್ಣದ ರಾಷ್ಟ್ರಧ್ವಜ ಹಾರಾಡಿತು.**

ರಂಜನ್ ಗೌಡ

ಜಯ ಹೇ ಭಾರತ ಮಾತಾ ಹಾಡಿ ಹೊಗಳುವೆ ನಿನ್ನಯ ಕಥಾ... ಮನೆಮನೆಯಲ್ಲೂ ಅರಳಿತು ತ್ರಿವರ್ಣ ಧ್ವಜ.. ಕೇಂದ್ರ ಸರ್ಕಾರದ ಮಹತ್ವದ 'ಹರ್ ಘರ್ ತಿರಂಗಾ' (ಪ್ರತಿ ಮನೆಯಲ್ಲಿ ತ್ರಿವರ್ಣಧ್ವಜ) ಅಭಿಯಾನಕ್ಕೆ ಇಡೀ ದೇಶವೇ ಕೈಜೋಡಿಸುವ ಮೂಲಕ ಯಶಸ್ವಿಗೊಂಡಿತು. 75ನೇ ವರ್ಷ ಸ್ವಾತಂತ್ರ್ಯೋತ್ಸವದ ಅಂಗವಾಗಿ ಇತಿಹಾಸದ ಪುಟಗಳಲ್ಲಿ ದಾಖಲಿಸುವ ಆಶಯ ಹೊತ್ತು ಕೇಂದ್ರ ಸರ್ಕಾರ ಈ ಅಭಿಯಾನಕ್ಕೆ ಚಾಲನೆ ನೀಡಿತ್ತು. ಇದರೊಂದಿಗೆ ಕೋಟ್ಯಂತರ ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಾಡುವಂತೆ ಮಾಡಿತು. ಆಗಸ್ಟ್ 13 ರಿಂದ 15 ರವರೆಗೆ ಮನೆ, ಸರ್ಕಾರಿ ಕಚೇರಿ, ಗ್ರಾಪಂ ಕಟ್ಟಡ, ಅಂಚೆ ಕಚೇರಿ, ಅಂಗನವಾಡಿ ಕೇಂದ್ರ, ಶಾಲಾ-ಕಾಲೇಜು, ಖಾಸಗಿ ಕಚೇರಿ, ಅಂಗಡಿ, ಹೋಟೆಲ್‌ಗಳ ಮೇಲೂ ರಾಷ್ಟ್ರ ಧ್ವಜ ಹಾರಾಡಿತು.

ಸಣ್ಣ ಗ್ರಾಮದಿಂದ ಹಿಡಿದು ದೆಹಲಿವರೆಗೂ ತ್ರಿವರ್ಣ ಧ್ವಜದ ರಂಗು ಮೂಡಿತು. 2022ರ ಧ್ವಜ ಸಂಹಿತೆ ತಿದ್ದುಪಡಿ ಮೂಲಕ ಕೈಯಿಂದ ನೇಯ್ದ ಅಥವಾ ಯಂತ್ರದಿಂದ ಸಿದ್ಧಪಡಿಸಿದ ಹತ್ತಿ, ಪಾಲಿಸ್ಟರ್, ಉಣ್ಣೆ, ರೇಷ್ಮೆ, ಖಾದಿ ಬಾವುಟ ಬಳಸಲು ಅವಕಾಶ ಕಲ್ಪಿಸಲಾಗಿತ್ತು. ಈ ಅಭಿಯಾನ ಪ್ರತಿಯೊಬ್ಬ ನಾಗರಿಕನಿಗೂ





Downloaded From:www.kpscvaani.com



ತಲುಪುವ ಮೂಲಕ ಸಂಪನ್ನಗೊಂಡಿತು. ಪ್ರಧಾನಿ ನರೇಂದ್ರ ಮೋದಿ ಅವರ ಅಭಿಯಾನದ ಕರೆಗೆ ದೇಶದ ಗಣ್ಯಾತಿಗಣ್ಯರು, ಸೆಲೆಬ್ರಿಟಿಗಳು, ಕ್ರಿಕೆಟಿಗರು ಸೇರಿದಂತೆ ಹಲವು ಕ್ರೀಡಾಪಟುಗಳು ತಮ್ಮ ಮನೆಯ ಮೇಲೆ ಬಾವುಟ ಹಾರಿಸುವ ಮೂಲಕ ಹರ್ ಘರ್ ತಿರಂಗಾ ಯಶಸ್ವಿಗೆ ಕೈಜೋಡಿಸಿದರು.

**ಹರ್ ಘರ್ ತಿರಂಗದ ಉದ್ದೇಶ**

ಭಾರತ ಸ್ವಾತಂತ್ರ್ಯಗೊಂಡು ಈ ವರ್ಷಕ್ಕೆ 75 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಈ ಅಭಿಯಾನ ಆರಂಭಿಸಲಾಯಿತು. ಈ ಸ್ವಾತಂತ್ರ್ಯ ದಿನವನ್ನು ಸ್ಮರಣೀಯವಾಗಿಸಲು, ಭಾರತ ಸರ್ಕಾರವು ಆಜಾದಿ ಕಾ ಅಮೃತ್ ಮಹೋತ್ಸವ ಅಡಿಯಲ್ಲಿ ಈ ಅಭಿಯಾನವನ್ನು ಘೋಷಿಸಿತು. ಈ ಅಭಿಯಾನದ ಅಡಿಯಲ್ಲಿ ದೇಶದ 25 ಕೋಟಿ ಮನೆಗಳಲ್ಲಿ ತ್ರಿವರ್ಣ ಧ್ವಜ ಹಾರಿಸುವ ಗುರಿಯನ್ನು ನಿಗದಿಪಡಿಸಲಾಗಿತ್ತು. ಈ ಅಭಿಯಾನದ ಉದ್ದೇಶ ದೇಶದ ಜನರನ್ನು ಒಗ್ಗೂಡಿಸುವುದು. ಮನೆಯಲ್ಲಿ ರಾಷ್ಟ್ರಧ್ವಜ ಹಾರಿಸಲು ಪ್ರೇರೇಪಿಸಬೇಕು. ಇದರಿಂದ ಜನರಲ್ಲಿ ದೇಶಭಕ್ತಿಯ ಭಾವನೆ ಮೂಡುತ್ತದೆ. ಇದರಿಂದ ಅವರಲ್ಲಿ ರಾಷ್ಟ್ರಧ್ವಜದ ಬಗ್ಗೆ ಜಾಗೃತಿ ಮೂಡಿಸುವುದೇ ಈ ಅಭಿಯಾನದ ಪ್ರಮುಖ ಉದ್ದೇಶವಾಗಿತ್ತು.



**5 ಕೋಟಿ ಮಂದಿಯಿಂದ ಸೆಲ್ಫಿ ಅಪ್‌ಲೋಡ್**

ಹರ್ ಘರ್ ತಿರಂಗಾ ಅಭಿಯಾನಕ್ಕಾಗಿ ಪ್ರಾರಂಭಿಸಲಾಗಿದ್ದ ವೆಬ್‌ಸೈಟ್‌ನಲ್ಲಿ ಸುಮಾರು 5 ಕೋಟಿಗೂ ಅಧಿಕ ಮಂದಿ ಧ್ವಜದೊಂದಿಗೆ ಸೆಲ್ಫಿ ಕ್ಲಿಕ್ಕಿಸಿದ ಫೋಟೋಗಳನ್ನು ಅಪ್ ಲೋಡ್ ಮಾಡಿದ್ದಾರೆ. 75 ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಕೆಂಪುಕೋಟೆಯಲ್ಲಿ ಅದ್ದೂರಿ ಕಾರ್ಯಕ್ರಮ ನಡೆಯಿತು. ಪ್ರಧಾನಿ ನರೇಂದ್ರ ಮೋದಿ ದೇಶಕ್ಕಾಗಿ ಮುಂದಿನ 25 ವರ್ಷಗಳಿಗೆ ಹಾಕಿಕೊಂಡಿರುವ ನೀಲನಕ್ಷೆಯನ್ನು ಜನತೆಯ ಎದುರು ಹಂಚಿಕೊಂಡರು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಭಾಗವಾಗಿ ಹರ್ ಘರ್ ತಿರಂಗಾ ಅಭಿಯಾನ ಘೋಷಿಸಿದ್ದ ಪ್ರಧಾನಿ ಮೋದಿ, ಭಾಗವಾಗಿ ಮನೆ ಮನೆಗಳಲ್ಲಿ ತಿರಂಗಾ ಹಾರಿಸುವುದು/ಪ್ರದರ್ಶಿಸಲು ಜುಲೈ 22 ರಂದು ಕರೆ ನೀಡಿದ್ದರು. ಇದಕ್ಕಾಗಿ ವಿಶೇಷ ವೆಬ್‌ಸೈಟ್ ಅನ್ನು ಪ್ರಾರಂಭಿಸಲಾಗಿತ್ತು.

**500 ಕೋಟಿಗೂ ಅಧಿಕ ವಹಿವಾಟು**

ಈ ಅಭಿಯಾನದಿಂದಾಗಿ ದಾಖಲೆ ಮಟ್ಟದಲ್ಲಿ ತ್ರಿವರ್ಣ ಧ್ವಜಗಳು ಮಾರಾಟವಾದವು. ಸುಮಾರು 30 ಕೋಟಿಗೂ ಹೆಚ್ಚು ಧ್ವಜಗಳು ಮಾರಾಟವಾಗುವ ಮೂಲಕ ಸುಮಾರು 500 ಕೋಟಿ ರೂಪಾಯಿಗಳ ವ್ಯಾಪಾರವಾಗಿದೆ ಎಂದು ಹೇಳಲಾಗಿದೆ. ಈ ಅಭಿಯಾನವೂ ಭಾರತದ ಸ್ವಾತಂತ್ರ್ಯ





Downloaded From:www.kpscvaani.com



ಅಮೃತ ಮಹೋತ್ಸವದ ಭಾಗವಾಗಿ ಮಾರ್ಚ್ 2021ರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಆರಂಭಿಸಿದ ಸರ್ಕಾರದ ಅಜಾದಿ ಕಾ ಅಮೃತ್ ಮಹೋತ್ಸವದ ಭಾಗವಾಗಿತ್ತು. ಇದಕ್ಕೆ ಅಂಚೆ ಇಲಾಖೆ ಕೂಡ ಧ್ವಜ ಮಾರಾಟ ಮಾಡಲು ಅಭಿಯಾನದ ಯಶಸ್ವಿಗೆ ಕೈಜೋಡಿಸಿತು. ದೇಶದಾದ್ಯಂತ ಸುಮಾರು 1.50 ಲಕ್ಷ ಕಚೇರಿಗಳನ್ನು ಹೊಂದಿರುವ ಅಂಚೆ ಇಲಾಖೆಗೆ ಈ ಅಭಿಯಾನ ವಿಸ್ತರಿಸಲು ಸಹಕಾರಿಯಾಯಿತು. ಅಭಿಯಾನ ಆರಂಭಗೊಂಡ 10 ದಿನಗಳಲ್ಲೇ 1 ಕೋಟಿ ಗೂ ಅಧಿಕ ರಾಷ್ಟ್ರಧ್ವಜಗಳು ಮಾರಾಟವಾಗಿದ್ದವು. ಅಂಚೆ ಕಚೇರಿ ಮಾತ್ರವಲ್ಲದೆ, ಆನ್‌ಲೈನ್‌ನಲ್ಲಿಯೂ ಬಾವುಟ ಮಾರಾಟವಾಯಿತು. ಉಚಿತ ಡಿಲಿವರಿ ವ್ಯವಸ್ಥೆ ಮಾಡಲಾಗಿತ್ತು. ಪೋಸ್ಟ್ ಆಫೀಸ್‌ನಲ್ಲಿ ಮಾರಾಟವಾದ ಪ್ರತಿ ಧ್ವಜಗೆ 25 ರೂಪಾಯಿ ನಿಗದಿಪಡಿಸಲಾಗಿತ್ತು.

**ಮನೆ ಮನೆಯಲ್ಲೂ ಹಾರಿದ ರಾಷ್ಟ್ರಧ್ವಜ**

ಹರ್ ಘರ್ ತಿರಂಗಾ ಅಭಿಯಾನ ಯಶಸ್ವಿಗಾಗಿ ಬೆಂಗಳೂರು ಮಹಾನಗರ ಪಾಲಿಕೆಯೂ ಸಾಕಷ್ಟು ಸಿದ್ಧತೆಗಳನ್ನು ಕೈಗೊಂಡಿತ್ತು. ನಗರದಲ್ಲಿರುವ ಎಲ್ಲ ಅಪಾರ್ಟ್‌ಮೆಂಟ್‌ಗಳಲ್ಲಿನ ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ ಹಾರಿಸಬೇಕು ಎಂದು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮನವಿ ಮಾಡಿದ್ದರು. ಸ್ಥಳೀಯ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳೊಂದಿಗೆ ವರ್ಚುವಲ್ ಸಭೆ ನಡೆಸಿ ಅಭಿಯಾನಕ್ಕೆ ಕೈಜೋಡಿಸಬೇಕು ಎಂದು ಹೇಳಿದ್ದರು. ಅಪಾರ್ಟ್‌ಮೆಂಟ್‌ಗಳ ಪ್ರತಿ ಮನೆಗಳಲ್ಲಿಯೂ ರಾಷ್ಟ್ರಧ್ವಜ ಹಾರಿಸುವ ಮೂಲಕ ಹರ್ ಘರ್ ತಿರಂಗಾ ಅಭಿಯಾನದ ಯಶಸ್ವಿಗೆ ಪಾಲಿಕೆಯೊಂದಿಗೆ ಕೈಜೋಡಿಸಬೇಕು. ಅಭಿಯಾನ ಮುಗಿದ ಬಳಿಕ ರಾಷ್ಟ್ರ ಧ್ವಜವನ್ನು ನಿಯಮಾನುಸಾರ ತೆಗೆದು ತಮ್ಮ ತಮ್ಮ ಮನೆಗಳಲ್ಲಿ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕು. ಅಲ್ಲದೆ ತಮ್ಮ ಅಪಾರ್ಟ್ಮೆಂಟ್‌ಗಳಲ್ಲಿ ನಡೆದ ಅಭಿಯಾನದ ಛಾಯಾಚಿತ್ರ ಹಾಗೂ ದೃಶ್ಯಾವಳಿಗಳನ್ನು ಸಂಗ್ರಹಿಸಿ ಅಂತರ್ಜಾಲ ತಾಣದಲ್ಲಿ ಅಪ್ಲೋಡ್ ಮಾಡಬೇಕು ಎಂದು ಹೇಳಿದ್ದರು.

ಬಿಬಿಎಂಪಿ ವ್ಯಾಪ್ತಿಯ ಪ್ರತಿ ಮನೆಯಲ್ಲೂ ರಾಷ್ಟ್ರ ಧ್ವಜವನ್ನು ಹಾರಿಸಲು ಅನುಕೂಲ ಆಗುವಂತೆ ಆಗಸ್ಟ್ 12 ರ ಸಂಜೆ ವರೆಗೂ ಸುಮಾರು 15 ಲಕ್ಷದಷ್ಟು ಧ್ವಜಗಳನ್ನು ವಿತರಿಸಲಾಗಿತ್ತು. ಎಲ್ಲ ವಲಯಗಳ ಜಂಟಿ ಆಯುಕ್ತರು ತಮ್ಮ ವ್ಯಾಪ್ತಿಯಲ್ಲಿನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳನ್ನು ಸಂಪರ್ಕಿಸಿ ಅಭಿಯಾನದ ಬಗ್ಗೆ ಅರಿವು ಮೂಡಿಸಿದ್ದರು. ಕೇವಲ ಬೆಂಗಳೂರಿಗೆ ಸೀಮಿತವಾಗದೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲೂ ಈ ಅಭಿಯಾನಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು. ಕೇವಲ ಮನೆಯ ಮಹಡಿ, ವಾಹನಗಳು, ಚಿಕ್ಕ ಪುಟ್ಟ ಗುಡಿಸಲಿನಲ್ಲೂ ತ್ರಿವರ್ಣ ಧ್ವಜ ರಾರಾಜಿಸಿತು.

**ಹರ್ ಘರ್ ತಿರಂಗಾ ಯಶಸ್ವಿ ಎಂದ ಸಿಎಂ**

ಮನೆ ಮನೆಯಲ್ಲಿ ರಾಷ್ಟ್ರಧ್ವಜ ಹಾರಿಸುವ ಹರ್ ಘರ್ ತಿರಂಗಾ ಅಭಿಯಾನ ಯಶಸ್ವಿಗೊಂಡಿದ್ದು, ಇದಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹರ್ಷ ವ್ಯಕ್ತಪಡಿಸಿದ್ದಾರೆ. ಸುಮಾರು 1 ಕೋಟಿ 25 ಲಕ್ಷಕ್ಕೂ ಅಧಿಕ ಮನೆ, ಕಚೇರಿ, ಕಟ್ಟಡಗಳಲ್ಲಿ ಧ್ವಜ ಹಾರಾಡಿದೆ. ಈ ಮೂಲಕ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹರ್ ಘರ್ ತಿರಂಗಾ ಸಂಪನ್ನಗೊಂಡಿತು. ನಾಡಿನ ಯುವ ಜನರಲ್ಲಿ ಈ ಅಭಿಮಾನ ಹೊಸ ಸಂಚಲನ ಸೃಷ್ಟಿಸಿತು ಎಂದಿದ್ದಾರೆ. ಇದರಲ್ಲಿ ಜಾತಿ, ಮತ, ಪಕ್ಷ, ಪಂಗಡ ಇಲ್ಲ. ನಾವೆಲ್ಲರೂ ಭಾರತೀಯರು. ಒಗ್ಗಟ್ಟಾಗಿ ಒಂದಾಗಿ ಮಾಡಬೇಕು. ನಾನು ಎಲ್ಲವನ್ನೂ ಸ್ವಾಗತ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಅಭಿಯಾನದ ಯಶಸ್ವಿಗಾಗಿ ಮುಖ್ಯಮಂತ್ರಿಗಳು ಹಲವು ಸುತ್ತಿನ ಸಭೆಗಳನ್ನು ನಡೆಸಿದ್ದರು. ಗ್ರಾಮ ಪಂಚಾಯಿತಿ ಸದಸ್ಯನಿಂದ ಹಿಡಿದು ಮುಖ್ಯಮಂತ್ರಿವರೆಗೂ ಪ್ರತಿಯೊಬ್ಬ ಜನಪ್ರತಿನಿಧಿಯೂ ಹರ್ ಘರ್ ತಿರಂಗಾ ಅಭಿಯಾನದಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳುವ ಮೂಲಕ ಭರ್ಜರಿ ಯಶಸ್ವಿಗೆ ಕಾರಣರಾದರು.


Downloaded From:www.kpscvaani.com

# ಅಮೃತ ಭಾರತಿಗೆ ಕನ್ನಡದಾರತಿ

## ಅಭಿಯಾನಕ್ಕೆ ಪ್ರಧಾನಿಯಿಂದ ಪ್ರಶಂಸೆ

**ರಾಜ್ಯ ಸರ್ಕಾರವು ಕೈಗೊಂಡಿರುವ "ಅಮೃತ ಭಾರತಿಗೆ ಕನ್ನಡದಾರತಿ" ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಶಂಸಿಸಿರುವುದು ಕನ್ನಡಿಗರ ಗೌರವವನ್ನು ಹೆಚ್ಚಿಸಿದೆ.**

ಕೆ. ಎಸ್. ರಾಜಮನ್ನಾರ್

ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂಭ್ರಮ ಎಂದರೆ 75 ವರ್ಷಗಳ ಸ್ಮರಣೆ ಮತ್ತು ಗತವೈಭವದ ಪುನರುತ್ಥಾನ. ಕನ್ನಡಿಗರ ಪಾಲಿಗಂತೂ ಇದೊಂದು ಅಮೃತ ಘಳಿಗೆ ಎಂದರೆ ಅತಿಶಯೋಕ್ತಿಯೇನಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಆಕಾಶವಾಣಿಯ ತಮ್ಮ 'ಮನ್ ಕಿಬಾತ್' ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ 'ಅಮೃತ ಭಾರತಿಗೆ ಕನ್ನಡದಾರತಿ' ಅಭಿಯಾನವನ್ನು ಪ್ರಶಂಸಿಸಿರುವುದು ಕರ್ನಾಟಕ ಮತ್ತು ಕನ್ನಡಿಗರ ಗೌರವ ಮತ್ತು ದೇಶಾಭಿಮಾನವನ್ನು ಮತ್ತಷ್ಟು ಹೆಚ್ಚಿಸಿದೆ. ಅವರ ಮನದಾಳದ ಮಾತು ನಮಗೆ ಸದಾ ಪ್ರೇರಣೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ವಿ. ಸುನೀಲ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಎಂದರೆ 75 ವರ್ಷಗಳ ಹಿಂದಿನ ಸಿಹಿ–ಕಹಿ ನೆನಪಿನ ಮಿಶ್ರಣ. ಇದು ಕೋಟಿ–ಕೋಟಿ ಭಾರತೀಯರ ಮನೆಗಳಲ್ಲಿ ತ್ರಿವರ್ಣ ಧ್ವಜ ಚಿತ್ತಾರದ ಹೊಸ ರಂಗೋಲಿ ಬಿಡಿಸಿ, ರಾಷ್ಟ್ರಪ್ರೇಮದ ಕಿಚ್ಚೆಬ್ಬಿಸಿದೆ. ಸ್ವಾತಂತ್ರ್ಯದ ಸಂಭ್ರಮ ಹಾಗೂ ಅಮೃತ ಮಹೋತ್ಸವ ಸಡಗರವನ್ನೂ ಇಮ್ಮಡಿಗೊಳಿಸಿದೆ. ದೇಶ ಮತ್ತು ಜನತೆಯ ಪಾಲಿಗೆ ಇದೊಂದು ಮರೆಯಲಾಗದ





Downloaded From:www.kpscvaani.com



ಅಪರೂಪದ ಕ್ಷಣ ಎಂದರೂ ಅತಿಶಯೋಕ್ತಿಯಲ್ಲ.

ದೇಶವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವಲ್ಲಿ ಮತ್ತು ಭವಿಷ್ಯ ರೂಪಿಸುವಲ್ಲಿ ಇತಿಹಾಸ-ಸಂಸ್ಕೃತಿ, ಮಹತ್ತರ ಪಾತ್ರವಹಿಸಲಿದೆ. ಇತಿಹಾಸ ಅರಿತವರಿಂದ ಮಾತ್ರ ಹೊಸ ಇತಿಹಾಸ ಸೃಷ್ಟಿಸಲು ಸಾಧ್ಯ ಎಂಬ ಮಾತು ಇದೇ ಕಾರಣದಿಂದಲೇ ಹೆಚ್ಚು ಪ್ರಚಲಿತವಾಗಿದೆ. ದೇಶ ಈಗ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದಲ್ಲಿದೆ. ಸ್ವಾತಂತ್ರ್ಯ ಹೋರಾಟಕ್ಕಾಗಿ ಸಾವಿರಾರು ಜನರು ಹೋರಾಡಿ, ತ್ಯಾಗ-ಬಲಿದಾನ ಮಾಡಿದ್ದಾರೆ. ಆದರೆ ಮುಂಚೂಣಿಯಲ್ಲಿ ನಿಂತವರು ಕೆಲವೇ ಪ್ರಮುಖ ನಾಯಕರಾದರೂ ತೆರೆಯ ಹಿಂದಿನ ಹೋರಾಟಗಾರರನ್ನು ಹಾಗೂ ಅವರು ನಿರ್ವಹಿಸಿದ ಪಾತ್ರವನ್ನು ಎಂದಿಗೂ ಮರೆಯಲಾಗದು.

ಕೋಟ್ಯಾಂತ ಜನರ ಹೋರಾಟದಿಂದ ದೇಶ ಸ್ವಾತಂತ್ರ್ಯ ಪಡೆದಿದೆಯೇ ಹೊರತು ಏಕವ್ಯಕ್ತಿಯ ನಾಯಕತ್ವದಿಂದ ಅಲ್ಲ ಎಂಬುದು ಗಾಂಧೀಜಿಯವರ ಸ್ಪಷ್ಟ ಮಾತು. ಸ್ಪಷ್ಟ ಸಂದೇಶ. ಸ್ವಾತಂತ್ರ್ಯ ಹೋರಾಟದ ಸ್ಮರಣೆ, ಹೋರಾಟಗಾರರ ಕಿಚ್ಚು, ತ್ಯಾಗ-ಬಲಿದಾನ ಮಾಡಿದವರ ಸಾಧನೆ, ವಿಶೇಷತೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಿ, ಅವರಲ್ಲಿ ರಾಷ್ಟ್ರಪ್ರೇಮದ ಕಿಚ್ಚು ಹಚ್ಚಲು ರಾಜ್ಯ ಸರ್ಕಾರ ಮೂರು ತಿಂಗಳ ಕಾಲ ಅಮೃತ ಭಾರತಿಗೆ ಕನ್ನಡಾದರತಿ ಎಂಬ ವಿನೂತನ ಅಭಿಯಾನವನ್ನು ಹಮ್ಮಿಕೊಂಡಿದೆ. ಇದರ ಸಮಾರೋಪ ಸಮಾರಂಭ ವರ್ಷದ ಕೊನೆಗೆ ಜರುಗಲಿದೆ. ಕನ್ನಡದಾರತಿಯ ಹೊಂಬೆಳಕಿನಲ್ಲಿ ಭಾರತಾಂಬೆಯ ವೈಭವ ಮತ್ತುಷ್ಟು ಪ್ರಜ್ವಲಿಸಿದೆ. ಕನ್ನಡದ ಕೀರ್ತಿ ಮತ್ತು ಪರಂಪರೆ ಮುಗಿಲೆತ್ತರಕ್ಕೆ ಪಸರಿಸಿದೆ.

ಸ್ವಾತಂತ್ರ್ಯ ಹೋರಾಟಕ್ಕೆ ಕರ್ನಾಟಕದ ವೀರಭೂಮಿ ನೀಡಿದ ಕೊಡುಗೆ ಸ್ಮರಿಸಿ, ರಾಷ್ಟ್ರೀಯ ವಿಚಾರಧಾರೆಗಳನ್ನು ಜಾಗೃತಗೊಳಿಸುವುದೇ ಈ ಅಭಿಯಾನದ ಮುಖ್ಯ ಉದ್ದೇಶ ಎಂಬುದು ಕನ್ನಡ ಮತ್ತು ಸಂಸ್ಕೃತಿ ಸಚಿವರು ಸ್ಪಷ್ಟಪಡಿಸಿದ್ದಾರೆ. ಅಮೃತ ಭಾರತಿಗೆ ಕನ್ನಡದಾರತಿ ಎಂಬ ಘೋಷವಾಕ್ಯದೊಂದಿಗೆ ಸರಿ ಸುಮಾರು ಮೂರು ತಿಂಗಳಿನಿಂದ ಮೂರು ಹಂತದಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಳೆ ಮತ್ತು ಪ್ರವಾಹದ ಕಾರಣ ಇದೇ ಆಗಸ್ಟ್ ಮಾಹೆಯ ಅಂತ್ಯದಲ್ಲಿ ನಡೆಯಬೇಕಿದ್ದ ಸಮಾರೋಪ ಸಮಾರಂಭ ವರ್ಷದ ಕೊನೆಗೆ ಜರುಗಲಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಕರ್ನಾಟಕ ಮತ್ತು ಕನ್ನಡಿಗರ ಪಾಲಿಗೆ ಬಹಳ ವಿಶೇಷ ಮತ್ತು ಮಹತ್ವವಾಗಿದೆ. ಕಾರಣವಿಷ್ಟೆ, ದೇಶದ ಪ್ರಧಾನಿ ನರೇಂದ್ರ ಮೋದಿ ತಮ್ಮ ಜನಪ್ರಿಯ ಆಕಾಶವಾಣಿಯ ಮನದ ಮಾತು ಮಾಸಿಕ ಸರಣಿ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಅಮೃತ ಭಾರತಿಗೆ ಕನ್ನಡದಾರತಿ ಕಾರ್ಯಕ್ರಮವನ್ನು ಮನಸಾರೆ ಮೆಚ್ಚಿರುವುದು ಕನ್ನಡಿಗರ ದೇಶಾಭಿಮಾನ ರಾಷ್ಟ್ರಮಟ್ಟದಲ್ಲಿ ಪಸರಿಸುವಂತೆ ಮಾಡಿದೆ. ಇದು ಭವಿಷ್ಯದಲ್ಲಿ ವಿನೂತನ ಪ್ರಯತ್ನಗಳಿಗೆ ಉತ್ತೇಜನ ನೀಡಿದೆ. ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಮತ್ತಷ್ಟು ಎತ್ತರಕ್ಕೆ ತೆಗೆದುಕೊಂಡು ಹೋಗಲು ಪ್ರಧಾನಿ ಅವರ ಮೆಚ್ಚುಗೆಯ ಮಾತು


Downloaded From:www.kpscvaani.com

ಸದಾ ಪ್ರೇರಣೆಯಾಗಲಿದೆ ಎಂದು ಸಚಿವರು ಅಭಿಮಾನದಿಂದ ಸ್ಮರಿಸಿದ್ದಾರೆ.

**ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಚಾಲನೆ:**

ಕಳೆದ ಮೇ 28 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶೇಷ ಅಭಿಯಾನಕ್ಕೆ ಚಾಲನೆ ನೀಡಿದರೆ, ವಿದುರಾಶ್ವತ್ಥದಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಯಾದಗಿರಿಯ ಸುರಪುರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಅವರು ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿದರು.

ಮೇ 28 ರಿಂದ ಜೂನ್ ತಿಂಗಳವರೆಗೆ 75 ಸ್ಥಳಗಳಲ್ಲಿ ಸ್ವಾತಂತ್ರ್ಯ ಹೋರಾಟದ ಸ್ಮರಣೆ, ಸ್ಮಾರಕ ಶಿಲಾ ಫಲಕ ಅನಾವರಣ ಹಾಗೂ ದೇಶಭಕ್ತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿವೆ.

**ಹೋರಾಟದ ನೆಲದಲ್ಲಿ ಒಂದು ದಿನ:**

ಜುಲೈ 1 ರಿಂದ 15 ರವರೆಗೆ ಹೋರಾಟದ ನೆಲದಲ್ಲಿ ಒಂದು ದಿನ ಎನ್ನುವ ಪ್ರೇರಣಾದಾಯಿ ಕಾರ್ಯಕ್ರಮ ನಿಗದಿಯಾಗಿತ್ತು. ಆದರೆ ಕೆಲವು ಜಿಲ್ಲೆಗಳಲ್ಲಿ ಬಿದ್ದ ಮಳೆ ಮತ್ತು ಪ್ರವಾಹದ ಕಾರಣ ಕಾರ್ಯಕ್ರಮ ಬದಲಾಗಿದ್ದು ಆಗಸ್ಟ್ 13 ರಿಂದ ತಿಂಗಳ ಕೊನೆಯವರೆಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನಾಟಕ, ಸಾಕ್ಷ್ಯಚಿತ್ರಗಳ ಪ್ರದರ್ಶನ ನಡೆಸಲಾಗುತ್ತಿದೆ.

**ರಥಯಾತ್ರೆ-ಸಮಾರೋಪ ಮುಂದೂಡಿಕೆ:**

ಆಗಸ್ಟ್ 1 ರಿಂದ 8 ವರೆಗೆ ರಾಜ್ಯದ ನಾಲ್ಕು ಕಂದಾಯ ವಿಭಾಗದಲ್ಲಿ ಅಮೃತ ಭಾರತಿಗೆ ಕನ್ನಡದಾರತಿ ಎಂಬ ಶೀರ್ಷಿಕೆಯಡಿ ಮಹೋತ್ಸವದ ರಥಯಾತ್ರೆ ರಾಜ್ಯದ 31 ಜಿಲ್ಲೆಗಳನ್ನು ಸ್ಪರ್ಶಿಸಿ ಅಂತಿಮವಾಗಿ ಆಗಸ್ಟ್ 9 ರಂದು ಬೆಂಗಳೂರಿಗೆ ಆಗಮಿಸ ಬೇಕಿತ್ತು. ಆದರೆ ವಿವಿಧ ಜಿಲ್ಲೆಗಳಲ್ಲಿನ ಮಳೆ ಪರಿಸ್ಥಿತಿ ಕಾರಣ ತಾತ್ಕಾಲಿಕವಾಗಿ ಈ ರಥಯಾತ್ರೆಯು ಮುಂದೂಡಲ್ಪಟ್ಟಿದ್ದು, ವರ್ಷದ ಕೊನೆಗೆ ಮೂರು ದಿನ ರಥಯಾತ್ರೆ ಹಾಗೂ ಸಮಾರೋಪ ಸಮಾರಂಭವನ್ನು ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಗಿದೆ.

**ಸಂಚಾಲನಾ ಸಮಿತಿಯಲ್ಲಿ ಪರಿಣಿತರು:**

ಎಲ್ಲ ಕಾರ್ಯಕ್ರಮಗಳನ್ನು ವ್ಯವಸ್ಥಿತ ಮತ್ತು ಬಹಳ ಅಚ್ಚುಕಟ್ಟಾಗಿ ನಡೆಸಲು ಸಂಗೀತ-ಸಾಹಿತ್ಯ, ಕಲೆ-ನಾಟಕ, ಸಿನಿಮಾ, ಜಾನಪದ ಹೀಗೆ ಮುಂತಾದ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿದ 17 ಸದಸ್ಯರ ಸಂಚಾಲನಾ ಸಮಿತಿಯನ್ನು ಸರ್ಕಾರ ನೇಮಿಸಿದೆ.

ನಾಡೋಜ ಚಂದ್ರಶೇಖರ ಕಂಬಾರ, ಪ್ರೊಫೆಸರ್ ದೊಡ್ಡರಂಗೇಗೌಡ, ಮಾತಾ ಮಂಜಮ್ಮ ಜೋಗತಿ, ಅಬ್ದುಲ್ ಖಾದಿರ್ ನಡದಕಟ್ಟಿನ್, ಕೃಷ್ಣದೇವರಾಯ, ಡಾ॥ ಎಂ.ಮೋಹನ್ ಆಳ್ವ, ರಿಷಬ್‌ಶೆಟ್ಟಿ, ಸೇತುರಾಮ್, ಡಾ॥ ಲಕ್ಷ್ಮಣತೆಲಗಾವಿ, ಡಾ॥ ಗೋಮತಿದೇವಿ, ಸಾಹಿತಿ ಬಾಬು ಕೃಷ್ಣಮೂರ್ತಿ, ಪ್ರೊಫೆಸರ್ ವಿಷ್ಣುಕಾಂತಚಟಪಲ್ಲಿ, ಪ್ರೊ॥ ಶ್ರೀನಿವಾಸ ಬಳ್ಳಿ, ದಾಕ್ಷಾಯಿಣಿ ಶರಣಬಸಪ್ಪ, ಡಾ॥ ದಯಾನಂದ ಅಗಸರ, ಮುದ್ದು ಮೋಹನ್, ಮನು ಬಳಿಗಾರ್ ಸಮಿತಿಯಲ್ಲಿದ್ದಾರೆ.

'ಅಮೃತ ಭಾರತಿಗೆ ಕನ್ನಡದಾರತಿ' ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ 75 ಐತಿಹಾಸಿಕ ಸ್ಥಳಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು, ಜೊತೆಗೆ ಸ್ವಾತಂತ್ರ್ಯ ಹೋರಾಟ ಮತ್ತು ಐತಿಹಾಸಿಕ ಸ್ಥಳಗಳ ಮಹಿಮೆ, ಮಹತ್ವದ ನೆನಪು ಕಟ್ಟಿಕೊಡುವ 75 ಲೇಖಕರು ಮತ್ತು ಬರಹಗಾರರ ಕೃತಿಗಳನ್ನು ಸಾಹಿತ್ಯ ಅಕಾಡೆಮಿ ವತಿಯಿಂದ ಹೊರ ತರಲಾಗಿದೆ.

**ಭೂಲೋಕದ ಅಮೃತಕ್ಕೆ ಕೂಡ ಪ್ರಧಾನಿಯಿಂದ ಪ್ರಶಂಸೆ:**



ಹಾಗೆಯೇ ಮನ್ ಕಿ ಬಾತ್ ಭಾಷಣದಲ್ಲಿ ಪ್ರಧಾನಿ ಅವರು ಉತ್ತರ ಕನ್ನಡ ಜಿಲ್ಲೆಯ ಜೇನು ಕೃಷಿಕ ಮಧುಕೇಶ್ವರ ಹೆಗಡೆ ಅವರ ಸಾಧನೆಯನ್ನು ಕೂಡ ಕೊಂಡಾಡಿದ್ದಾರೆ. ಇವರ ಸಾಧನೆ ಇತರರಿಗೆ ಸ್ಫೂರ್ತಿಯಾಗಿದೆ. ಜೇನು ಕೃಷಿ ಎಷ್ಟರ ಮಟ್ಟಿಗೆ ಲಾಭದಾಯಕ ಎಂದರೆ ಇತ್ತೀಚೆಗೆ ವಿದ್ಯಾವಂತ ಯುವಕರು ಪೇಟೆಯಲ್ಲಿನ ನೌಕರಿ ತೊರೆದು ಜೇನು ಕೃಷಿಯಲ್ಲಿ ತೊಡಗುವಷ್ಟರ ಮಟ್ಟಿಗೆ ಜೇನು ಸಾಕಾಣಿಕೆ ಲಾಭದಾಯಕ ಎಂದು ಹೇಳಿರುವುದು ಜೇನು ಸಾಕಾಣಿಕೆಯ ಮಹತ್ವವನ್ನು ಸಾಬೀತು ಪಡಿಸಿದೆ.

ಜೇನು ಕೃಷಿಯಲ್ಲಿ ತೊಡಗುವ ಎಲ್ಲ ಸಮುದಾಯಕ್ಕೂ ಪ್ರಧಾನಿ ಪ್ರಶಂಸೆ ಮಾತು ಮಾರ್ಗದರ್ಶನ ಮತ್ತು ಪ್ರೇರಣಾದಾಯಕ ಸಲಹೆಯಾಗಿದೆ. ಯಾವುದೇ ಕಸಬು ಗೊತ್ತಿಲ್ಲದಿದ್ದರೂ 20 ಸಾವಿರ ರೂಪಾಯಿ ಸಾಲ ಮಾಡಿ ಜೇನು ಕೃಷಿ ಆರಂಭಿಸಿ ಇದರಿಂದ ಆರ್ಥಿಕವಾಗಿ ಕುಟುಂಬ ಪ್ರಗತಿ ಹೊಂದಿದೆ. ಜೇನನ್ನು ಭೂಲೋಕದ ಅಮೃತ ಎನ್ನಲಾಗುತ್ತದೆ. ಜೇನಿನ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ತುಂಬಾ ಬೇಡಿಕೆಯಿದೆ. ರಾಯಲ್‌ಜೆಲ್ಲಿ, ಪರಾಗ, ಜೇನುತುಪ್ಪ ಮುಂತಾದ ಉಪ ಉತ್ಪನ್ನಗಳಿಂದಲೂ ಹೆಚ್ಚು ವರಮಾನ ಬರಲಿದೆ. ಅದರಲ್ಲೂ ರಾಯಲ್‌ಜೆಲ್ಲಿಗೆ ಕೇವಲ 20 ಗ್ರಾಂ ಗೆ ಮಾರುಕಟ್ಟೆಯಲ್ಲಿ 3,600 ರೂಪಾಯಿ ಬೆಲೆ ಇದೆ.

ಇದರ ಜೊತೆಗೆ ಜೇನು ಚುಚ್ಚುವಿಕೆ ಎಂಬ ಬಿ-ಥೆರಪಿ (ಚಿಕಿತ್ಸಾ ಪದ್ಧತಿ) ಸಹ ನೀಡಲಾಗುತ್ತಿದ್ದು, ದೇಶ-ವಿದೇಶಗಳ ಜನರು ಈ ಚಿಕಿತ್ಸೆಗಾಗಿ ಬರುತ್ತಾರೆ. ಈ ಚಿಕಿತ್ಸೆಯಿಂದ ಸಂಧಿವಾತದಂತಹ ರೋಗಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದಂತೆ.

ಕೃಷಿ ಮಾಡಲು ಭೂಮಿಯಿಲ್ಲದೆ, ಹೆಚ್ಚಿನ ವಿದ್ಯಾಭ್ಯಾಸವಿಲ್ಲದೆ, ಭವಿಷ್ಯವೇ ಇಲ್ಲ ಎಂಬ ಹತಾಶ ಪರಿಸ್ಥಿತಿಯಲ್ಲಿ ಸಾಲ-ಸೋಲ ಮಾಡಿ ಆರಂಭಿಸಿದ ಜೇನು ಕೃಷಿಯಿಂದ ಆರ್ಥಿಕವಾಗಿ ಮುಂದೆ ಬರಲು ಸಾಧ್ಯವಾಗಿದೆ. ಹೊಸ ಹೂಗಳ ಪ್ರದೇಶಕ್ಕೆ ಹೋಗಿ ಜೇನುತುಪ್ಪ ತೆಗೆದು ಅದರಿಂದ ಹನಿ ಜಾಮ್, ಅಶ್ವಗಂಧ, ಲೆಮನ್, ಜಿಂಜರ್, ಕೋಕಮ್ ಹನಿ ಮುಂತಾದ ಉಪ ಉತ್ಪನ್ನ ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಜೇನು ಸಾಕಾಣಿಕೆಗಾಗಿ ಪ್ರತ್ಯೇಕ ಜಮೀನು ಖರೀದಿಸಿ ಜೇನುಕೃಷಿಯಲ್ಲಿ ತೊಡಗುವವರಿಗೆ ಉಚಿತ ತರಬೇತಿ ನೀಡಲಾಗುತ್ತಿದೆ. ಬರಿಗೈಲಿದ್ದ ತಮ್ಮನ್ನು ಜೇನು ಕೃಷಿ ಇಂದು ಕೋಟ್ಯಧಿಪತಿಯನ್ನಾಗಿಸಿದೆ. ಕೇವಲ ಹಣಗಳಿಕೆಯಲ್ಲದೆ ಜೇನಿನ ಮೂಲಕ ಜನರ ಮತ್ತು ಸಮಾಜದ ಆರೋಗ್ಯ ಸುಧಾರಿಸುವ, ವಿಷಮುಕ್ತ ಆಹಾರ ನೀಡುವ ಕೆಲಸಕ್ಕೂ ಸಹಕಾರಿಯಾಗಿದೆ ಎಂದು ಕೃಷಿಕ ಮಧುಕೇಶ್ವರ ಹೆಗಡೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ■



Downloaded From:www.kpscvaani.com



# ಭಾರತದ ಉಪ ರಾಷ್ಟ್ರಪತಿ

# ಜಗದೀಪ್ ಧನಕರ್

ಡಿ. ಪಿ. ಮುರಳೀಧರ್

**ಭಾ**ರತದ 14 ನೇ ಉಪ ರಾಷ್ಟ್ರಪತಿಯಾಗಿ ಆಗಸ್ಟ್ 11 ರಂದು ಜಗದೀಪ್ ಧನಕರ್ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಭಾರತದ ಉಪ ರಾಷ್ಟ್ರಪತಿಯ ವಿಶೇಷ ಎಂದರೆ ಅವರು ರಾಜ್ಯಸಭೆಯ ಸಭಾಪತಿಯೂ ಆಗಿರುತ್ತಾರೆ !

**ಜಗದೀಪ್ ಧನಕರ್ ಯಾರು ?**

ರಾಜಾಸ್ಥಾನದ ಜುಂಜುನು ಎಂಬಲ್ಲಿ ಕಿತನಾ ಎಂಬುದೊಂದು ಸಣ್ಣ ಹಳ್ಳಿ. ಆ ಹಳ್ಳಿಯಲ್ಲೊಂದು ಕೃಷಿಕ ಕುಟುಂಬ. ಜಾಟ್ ಸಮುದಾಯದ ಗೋಕುಲ್ ಚಂದ್ ಮತ್ತು ಕೇಸರಿ ದೇವಿ ದಂಪತಿಯ ಪುತ್ರನಾಗಿ 1951 ರ ಮೇ 18 ರಂದು ಜಗದೀಪ್ ಧನಕರ್ ಅವರು ಜನಿಸಿದರು. ತಮ್ಮ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಕಿತನಾ ಸರ್ಕಾರಿ ಶಾಲೆಯಲ್ಲಿ, ಮಾಧ್ಯಮಿಕ ಶಿಕ್ಷಣವನ್ನು ಘರ್ಧನಾ ಸರ್ಕಾರಿ ಶಾಲೆಯಲ್ಲಿ, ಪೌಢ ಶಿಕ್ಷಣವನ್ನು ಚಿತ್ತೋರ್‌ಘರ್‌ನ ಸೈನಿಕ ಶಾಲೆಯಲ್ಲಿ ಪೂರ್ಣಗೊಳಿಸಿದ ಜಗದೀಪ್ ಧನಕರ್ ಅವರು ಜೈಪುರದ ರಾಜಾಸ್ಥಾನ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ಪದವಿ ಪಡೆದರು. ನಂತರ, ಅದೇ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿ ವ್ಯಾಸಂಗ ಮಾಡಿದರು. ತದ ನಂತರ, 1979 ರಲ್ಲಿ ವಕೀಲ ವೃತ್ತಿಯ ಮೂಲಕ ತಮ್ಮ ಬದುಕನ್ನು ಕಟ್ಟಿಕೊಂಡರು. ಅಷ್ಟೇ ಅಲ್ಲ ! ಅದೇ ವರ್ಷ ಸುದೇಶ್ ಅವರನ್ನು ವಿವಾಹವಾಗಿ, ತಮ್ಮ ಜೀವನವನ್ನೂ ರೂಪಿಸಿಕೊಂಡರು. ಜಗದೀಪ್


Downloaded From:www.kpscvaani.com



ಧನಕರ್ ಮತ್ತು ಸುದೇಶ್ ದಂಪತಿಗಳಿಗೆ ಕಾಮ್ನಾ ಎಂಬ ಹೆಸರಿನ ಏಕೈಕ ಪುತ್ರಿ ಇದ್ದಾರೆ.

ಅಲ್ಲದೆ, 1990 ರಲ್ಲಿ ರಾಜಾಸ್ಥಾನ ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಎಂದು ಮಾನ್ಯತೆ ಗಳಿಸಿದ್ದ ಜಗದೀಪ್ ಧನಕರ್ ಅವರು ಅಲ್ಲಿನ ವಕೀಲರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ದೇಶದ ವಿವಿಧ ಉಚ್ಚ ನ್ಯಾಯಾಲಯಗಳಲ್ಲಿ ವಾದ ಮಂಡಿಸಿ ತಮ್ಮ ಪ್ರಖಾಂಡ ಪಾಂಡಿತ್ಯ ಮೆರೆದಿರುವುದರ ಜೊತೆಗೆ ಭಾರತ ಸರ್ವೋಚ್ಚ ನ್ಯಾಯಾಲಯದಲ್ಲೂ ವಕೀಲರಾಗಿ ಸೇವೆ ಸಲ್ಲಿಸಿ ಹಣ ಮತ್ತು ಹೆಸರು ಗಳಿಸಿದ್ದಾರೆ. ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ಸಟ್ಲೇಜ್ ನದಿ ಜಲ ವಿವಾದ ಕುರಿತು ಹರಿಯಾಣ ಸರ್ಕಾರದ ಪರವಾಗಿ ಜಗದೀಪ್ ಧನಕರ್ ಅವರು 2016 ರಲ್ಲಿ ಮಂಡಿಸಿದ ವಾದ ಇಂದಿಗೂ ಒಂದು ಮೈಲಿಗಲ್ಲು. ಮತ್ತೊಂದು ಗಮನಾರ್ಹ ಅಂಶ ಎಂದರೆ 2019 ರ ಜುಲೈ 30 ರಂದು ಪಶ್ಚಿಮ ಬಂಗಾಳದ ರಾಜ್ಯಪಾಲರಾಗುವವರೆಗೆ ರಾಜಾಸ್ಥಾನ ಉಚ್ಚ ನ್ಯಾಯಾಲಯದಲ್ಲಿ ಹಿರಿಯ ವಕೀಲ ಎಂದು ನಿಯೋಜಿತರಾದವರಲ್ಲಿ ಜಗದೀಪ್ ಧನಕರ್ ಅವರು ಅತ್ಯಂತ ಹಿರಿಯರಾಗಿದ್ದರು.

### ರಾಜಕಾರಣದಲ್ಲಿ ಚತುರ

ರಾಜಕಾರಣದಲ್ಲಿ ಜಗದೀಪ್ ಧನಕರ್ ಅವರನ್ನು ಚತುರ ಎಂದು ಬಣ್ಣಿಸಬಹುದು. ಏಕೆಂದರೆ ಜಗದೀಪ್ ಧನಕರ್ ಅವರು ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳನ್ನು ಪ್ರವೇಶಿಸಿ ಅಲ್ಲಿನ ಅಗಲ ಮತ್ತು ಆಳವನ್ನು ಕಂಡಿದ್ದಾರೆ. ಅಲ್ಲಿ ಕೇವಲ ಸವಿ ಮತ್ತು ಸುಖವನ್ನು ಮಾತ್ರವಲ್ಲ, ಕಹಿ ಮತ್ತು ಕಷ್ಟವನ್ನೂ ಅನುಭವಿಸಿದ್ದಾರೆ. ಜಗದೀಪ್ ಧನಕರ್ ಅವರು 1989 ರಿಂದ 1991 ರ ವರೆಗೆ ಒಂಭತ್ತನೇ ಲೋಕಸಭೆಯಲ್ಲಿ ಜನತಾದಳದ ಸದಸ್ಯರಾಗಿ ರಾಜಾಸ್ಥಾನದ ಜುಂಜುನು ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಆದರೆ, 1991 ರಲ್ಲಿನ ಸಾರ್ವತ್ರಿಕ ಚುನಾವಣೆಗಳಲ್ಲಿ ರಾಜಾಸ್ಥಾನದ ಅಜ್ಮೀರ್ ಲೋಕಸಭಾ ಕ್ಷೇತ್ರದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಎರಡು ವರ್ಷದ ನಂತರ 1993 ರಲ್ಲಿ ಕಿಶನ್‌ಗಂಜ್ ವಿಧಾನ ಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ, ವಿಜಯದ ಮಾಲೆಯನ್ನು ತನ್ನದಾಗಿಸಿಕೊಂಡ ಜಗದೀಪ್ ಧನಕರ್ ಅವರು 1993 ರಿಂದ 1998 ರವರೆಗೆ ರಾಜಾಸ್ಥಾನದ ಹತ್ತನೇ ವಿಧಾನ ಸಭೆಯನ್ನು ಪ್ರವೇಶಿಸಿ, ಎಲ್ಲರ ಗಮನ ಸೆಳೆದರು. ಮತ್ತೆ 1999 ರಲ್ಲಿ ಜುಂಜುನು ಲೋಕಸಭಾ



### ಉಪ ರಾಷ್ಟ್ರಪತಿ ಕುರಿತ ಸತ್ಯ ಮತ್ತು ಸ್ವಾರಸ್ಯಕರ ಸಂಗತಿಗಳು

- ಭಾರತದ ಮೊದಲ ಉಪ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್. ಅಷ್ಟೇ ಅಲ್ಲ, ರಾಷ್ಟ್ರಪತಿ ಸ್ಥಾನಕ್ಕೆ ಏರಿದ ಮೊದಲ ಉಪ ರಾಷ್ಟ್ರಪತಿ ಕೂಡಾ ಡಾ ಸರ್ವಪಲ್ಲಿ ರಾಧಾಕೃಷ್ಣನ್ ಅವರೇ !
- ಡಾ. ಸರ್ವಪಲ್ಲಿ ರಾಧಾಕೃಷ್ಣನ್, ಡಾ. ಝಾಕೀರ್ ಹುಸೇನ್, ಡಾ. ವರಾಹಗಿರಿ ವೆಂಕಟಗಿರಿ, ಆರ್. ವೆಂಕಟರಾಮನ್, ಡಾ. ಶಂಕರ್ ದಯಾಳ್ ಶರ್ಮ ಮತ್ತು ಕೆ.ಆರ್. ನಾರಾಯಣನ್ ಅವರು ರಾಷ್ಟ್ರಪತಿ ಸ್ಥಾನ ಅಲಂಕರಿಸಿದ ಉಪ ರಾಷ್ಟ್ರಪತಿಗಳು.
- ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಮತ್ತು ಮೊಹಮದ್ ಹಮೀದ್ ಅನ್ಸಾರಿ ಅವರು ಹತ್ತು ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ ಉಪ ರಾಷ್ಟ್ರಪತಿಗಳು.
- ಬಸಪ್ಪ ದಾನಪ್ಪ ಜತ್ತಿ ಅವರು ಹಂಗಾಮಿ ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸಿದ ಏಕೈಕ ಉಪ ರಾಷ್ಟ್ರಪತಿ.
- ಮೊಹಮದ್ ಹಮೀದ್ ಅನ್ಸಾರಿ ಮತ್ತು ಎಂ.ವೆಂಕಯ್ಯ ನಾಯ್ಡು ಅವರು ಉಪ ರಾಷ್ಟ್ರಪತಿ ಸ್ಥಾನ ಅಲಂಕರಿಸಿ ಜೀವಂತವಾಗಿರುವ ವಿಶ್ರಾಂತ ಉಪ ರಾಷ್ಟ್ರಪತಿಗಳು.
- ಉಪ ರಾಷ್ಟ್ರಪತಿ ಸ್ಥಾನ ಅಲಂಕರಿಸಿದ ಮೊದಲ ಶಿಕ್ಷಣ ತಜ್ಞ ಡಾ. ಸರ್ವಪಲ್ಲಿ ರಾಧಾಕೃಷ್ಣನ್. ಉಪ ರಾಷ್ಟ್ರಪತಿ ಸ್ಥಾನ ಅಲಂಕರಿಸಿದ ಮೊದಲ ವಿಜ್ಞಾನಿ ಕೆ.ಆರ್. ನಾರಾಯಣನ್.
- ಡಾ. ಸರ್ವಪಲ್ಲಿ ರಾಧಾಕೃಷ್ಣನ್, ಡಾ. ಝಾಕೀರ್ ಹುಸೇನ್. ಡಾ. ವರಾಹಗಿರಿ ವೆಂಕಟಗಿರಿ, ಗೋಪಾಲ್ ಸ್ವರೂಪ್ ಪಾಠಕ್ ಹಾಗೂ ಎಂ. ಹಿದಾಯತುಲ್ಲಾ ಅವರು ಪಕ್ಷೇತರ ಅಭ್ಯರ್ಥಿಯಾಗಿ ಉಪ ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದವರು.
- ಬಸಪ್ಪ ದಾನಪ್ಪ ಜತ್ತಿ, ಆರ್. ವೆಂಕಟರಾಮನ್ ಡಾ. ಶಂಕರ್ ದಯಾಳ್ ಶರ್ಮ, ಕೆ. ಆರ್. ನಾರಾಯಣನ್, ಹಾಗೂ ಮೊಹಮದ್ ಹಮೀದ್ ಅನ್ಸಾರಿ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾಗಿ ಆಯ್ಕೆಯಾದ ಉಪ ರಾಷ್ಟ್ರಪತಿಗಳು.
- ಬೈರೋನ್ ಸಿಂಗ್ ಶೇಖಾವತ್, ಎಂ. ವೆಂಕಯ್ಯ ನಾಯ್ಡು ಹಾಗೂ ಜಗದೀಪ್ ಧನಕರ್ ಅವರು ಭಾರತೀಯ ಜನತಾ ಪಕ್ಷದ ಅಭ್ಯರ್ಥಿಗಳಾಗಿ ಉಪ ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದವರು.



Downloaded From:www.kpscvaani.com

ಕ್ಷೇತ್ರದಲ್ಲಿ ಚುನಾವಣಾ ಕಣಕ್ಕೆ ಇಳಿದಾಗ ಮೂರನೇ ಸ್ಥಾನಕ್ಕೆ ಕುಸಿದು ಹೀನಾಯ ಸೋಲು ಅನುಭವಿಸಿದ ಜಗದೀಪ್ ಧನಕರ್ ಅವರು 2003 ರಲ್ಲಿ ಭಾರತೀಯ ಜನತಾ ಪಕ್ಷವನ್ನು ಸೇರ್ಪಡೆಯಾಗಿ ಆ ಪಕ್ಷದ ಗೆಲುವಿಗಾಗಿ ವಿವಿಧ ಹಂತಗಳಲ್ಲಿ ಶ್ರಮಿಸಿದರು. ಜಗದೀಪ್ ಧನಕರ್ ಅವರ ಶ್ರಮಕ್ಕೆ ಪ್ರತಿಫಲವಾಗಿ ಅವರನ್ನು ಪಶ್ಚಿಮ ಬಂಗಾಳದ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಯಿತು.

### ಮೌನಿ ಅಲ್ಲ ! ಮಾತುಗಾರ !

ಸಾಂವಿಧಾನಿಕ ಹುದ್ದೆ ಎನಿಸಿರುವ ರಾಜ್ಯಪಾಲರ ಸ್ಥಾನ ಅಲಂಕರಿಸಿದವರು ರಾಜಭವನದ ನಾಲ್ಕು ಗೋಡೆಗಳಿಗೆ ಸೀಮಿತರಾಗುತ್ತಾರೆ. ಮೌನಕ್ಕೆ ಶರಣಾಗುತ್ತಾರೆ. ಆದರೆ, ಜಗದೀಪ್ ಧನಕರ್ ಅವರು ಹಾಗಲ್ಲ. ತಾವು ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದ ಅವಧಿಯಲ್ಲಿ ಅಲ್ಲಿನ ಸರ್ಕಾರದ ನಡೆಯನ್ನು ಹಲವು ಬಾರಿ ಪ್ರಶ್ನಿಸಿದರು. ಅಂತೆಯೇ, ಅಲ್ಲಿನ ಸರ್ಕಾರದ ಕಾರ್ಯಚಟುವಟಿಕೆಗಳ ಕುರಿತು ಬಹಿರಂಗವಾಗಿ ಟೀಕೆ ಮಾಡಿದರು. ಮಾಧ್ಯಮಗಳ ಜೊತೆ ಮಾತನಾಡಿದರು. ಸರ್ಕಾರದ ಜೊತೆ ಸಂಘರ್ಷಕ್ಕೆ ಇಳಿಯುತ್ತಿದ್ದ ರಾಜ್ಯಪಾಲರನ್ನು ಆಡಳಿತ ಪಕ್ಷದವರು ಪಶ್ಚಿಮ ಬಂಗಾಳದಲ್ಲಿ "ಏಕೈಕ ಹಾಗೂ ನೈಜ ಪ್ರತಿಪಕ್ಷ" ಎಂದರೆ ರಾಜ್ಯಪಾಲರೇ ಎಂದು ಬಣ್ಣಿಸಿದರೂ, ಇದ್ದದ್ದನ್ನು ಇದ್ದಂತೆ ಹಾಗೂ ಕಂಡದ್ದನ್ನು ಕಂಡಂತೆ ಹೇಳುವ ಜಾಯಮಾನದ ಜಗದೀಪ್ ಧನಕರ್ ಅವರು ಸರ್ಕಾರದ ಹಾದಿ ಹಳಿ ತಪ್ಪದೇ ಇರಬೇಕು. ನಮ್ಮ ನೆಲದಲ್ಲಿ ಪ್ರಜಾಪ್ರಭುತ್ವ ದೃಢವಾಗಿ ನೆಲೆಸಬೇಕು ಎಂಬ ಸದುದ್ದೇಶದಿಂದ ತಾವು ಸಾರ್ವಜನಿಕವಾಗಿ ಸರ್ಕಾರವನ್ನು ಎಚ್ಚರಿಸುತ್ತಿರುವುದಾಗಿ ಬಹಿರಂಗ ಹೇಳಿಕೆ ನೀಡುವ ದಿಟ್ಟತನ ತೋರಿ ಎಲ್ಲರ ಹುಬ್ಬೇರಿಸಿದರು.

### ಉಪ ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿ

ಭಾರತದ ಹದಿಮೂರನೇ ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರ ಅಧಿಕಾರವಧಿ ಮುಕ್ತಾಯಗೊಳ್ಳುತ್ತಿದ್ದಂತೆ, ಆ ಹುದ್ದೆಗೆ ಯಾರು ? ಎಂಬ ಪ್ರಶ್ನೆ ಉದ್ಭವಿಸಿದಾಗ ಆಡಳಿತಾರೂಢಾ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಅಭ್ಯರ್ಥಿಯಾಗಿ ಜಗದೀಶ್ ಧನಕರ್ ಅವರು ಹೊರ ಹೊಮ್ಮಿದರು. ಕೇಂದ್ರದ ಮಾಜಿ ಸಚಿವೆ ಹಾಗೂ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದ್ದ ಮಾರ್ಗರೇಟ್ ಆಳ್ವ ಅವರು ಪ್ರತಿಪಕ್ಷದ ಅಭ್ಯರ್ಥಿಯಾಗಿ ಆಯ್ಕೆಯಾದರು.

| ಕ್ರ ಸಂ. | ಭಾರತದ ಉಪ ರಾಷ್ಟ್ರಪತಿಗಳು | ಕಾರ್ಯನಿರ್ವಹಿಸಿದ ಅವಧಿ |
|---|---|---|
| 1. | ಡಾ. ಸರ್ವಪಲ್ಲಿ ರಾಧಾಕೃಷ್ಣನ್ | ಮೇ 13, 1952 ರಿಂದ ಮೇ 12, 1957<br>ಮೇ 13, 1957 ರಿಂದ ಮೇ 12, 1962 |
| 2. | ಡಾ. ಝಾಕೀರ್ ಹುಸೇನ್ | ಮೇ 13, 1962 ರಿಂದ ಮೇ 12, 1967 |
| 3. | ಡಾ. ವರಾಹಗಿರಿ ವೆಂಕಟಗಿರಿ | ಮೇ 13, 1967 ರಿಂದ ಮೇ 3, 1969 |
| 4. | ಗೋಪಾಲ್ ಸ್ವರೂಪ್ ಪಾಠಕ್ | ಆಗಸ್ಟ್ 31, 1969 ರಿಂದ ಆಗಸ್ಟ್ 30, 1974 |
| 5. | ಬಸಪ್ಪ ದಾನಪ್ಪ ಜತ್ತಿ<br>(ಬಸಪ್ಪ ದಾನಪ್ಪ ಜತ್ತಿ<br>– ಹಂಗಾಮಿ ರಾಷ್ಟ್ರಪತಿ | ಆಗಸ್ಟ್ 31, 1974 ರಿಂದ ಆಗಸ್ಟ್ 30, 1979<br><br>ಫೆಬ್ರವರಿ 11, 1977 ರಿಂದ ಜುಲೈ 25, 1977 |
| 6. | ಎಂ ಹಿದಯತ್ತುಲ್ಲಾ | ಆಗಸ್ಟ್ 31, 1979 ರಿಂದ ಆಗಸ್ಟ್ 30, 1984 |
| 7. | ಆರ್. ವೆಂಕಟರಾಮನ್ | ಆಗಸ್ಟ್ 31, 1984 ರಿಂದ ಜುಲೈ 24, 1987 |
| 8. | ಡಾ. ಶಂಕರ್ ದಯಾಳ್ ಶರ್ಮ | ಸೆಪ್ಟೆಂಬರ್ 3, 1987 ರಿಂದ ಜುಲೈ 24, 1992 |
| 9. | ಕೆ. ಆರ್. ನಾರಾಯಣನ್ | ಆಗಸ್ಟ್ 21, 1992 ರಿಂದ ಜುಲೈ 24, 1997 |
| 10. | ಕೃಷ್ಣಕಾಂತ್ | ಆಗಸ್ಟ್ 21, 1997 ರಿಂದ ಜುಲೈ 27, 2002 |
| 11. | ಬೈರೋನ್ ಸಿಂಗ್ ಶೇಖಾವತ್ | ಆಗಸ್ಟ್ 19, 2002 ರಿಂದ ಜುಲೈ 21, 2007 |
| 12. | ಮೊಹಮದ್ ಹಮೀದ್ ಅನ್ಸಾರಿ | ಆಗಸ್ಟ್ 11, 2007 ರಿಂದ ಆಗಸ್ಟ್ 10, 2012<br>ಆಗಸ್ಟ್ 11, 2012 ರಿಂದ ಆಗಸ್ಟ್ 10, 2017 |
| 13. | ಎಂ. ವೆಂಕಯ್ಯ ನಾಯ್ಡು | ಆಗಸ್ಟ್ 11, 2017 ರಿಂದ ಆಗಸ್ಟ್ 10, 2022 |
| 14. | ಜಗದೀಪ್ ಧನ್‌ಕರ್ | ಆಗಸ್ಟ್ 11, 2022 ರಿಂದ |

ಉಪ ರಾಷ್ಟ್ರಪತಿಯನ್ನು ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರು ಆಯ್ಕೆ ಮಾಡುತ್ತಾರೆ. ಸಂಸತ್ತಿನ ಮೇಲ್ಮನೆ ಹಾಗೂ ಕೆಳಮನೆಗಳಲ್ಲಿ ಆಡಳಿತ ಪಕ್ಷದ ಸದಸ್ಯರ ಸಂಖ್ಯಾ ಬಲ ಅಧಿಕವಾಗಿದ್ದ ಕಾರಣ ಹಾಗೂ ಪಶ್ಚಿಮ ಬಂಗಾಳದ ಆಡಳಿತಾರೂಢ ಪಕ್ಷ ಎನಿಸಿರುವ ತೃಣ ಮೂಲ ಕಾಂಗ್ರೆಸ್ ಪಕ್ಷದ ಸದಸ್ಯರು ಚುನಾವಣೆಯಲ್ಲಿ ಪಾಲ್ಗೊಳ್ಳದೇ ತಟಸ್ಥರಾದ ಹಿನ್ನೆಲೆಯಲ್ಲಿ ಜಗದೀಪ್ ಧನಕರ್ ಅವರು ಉಪ ರಾಷ್ಟ್ರಪತಿ ಸ್ಥಾನಕ್ಕೆ ಅತ್ಯಧಿಕ ಬಹುಮತದಿಂದ ಚುನಾಯಿತರಾದರು.

ತಮ್ಮ ವೃತ್ತಿ ಜೀವನದಲ್ಲಿ ನ್ಯಾಯವಾದಿಯಾಗಿ ಕಕ್ಷಿಗಾರರಿಗೆ ನ್ಯಾಯವನ್ನು ದೊರಕಿಸಿಕೊಡಲು ನ್ಯಾಯಾಲಯಗಳ ಅಂಗಳದಲ್ಲಿಯೇ ನಡೆದಾಡಿದ ಜಗದೀಪ್ ಧನಕರ್ ಅವರು ಉಪ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಸರ್ವೋಚ್ಚ ನ್ಯಾಯಾಲಯದ ವಕೀಲರ ಸಂಘವು ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸಾರ್ವಜನಿಕ ವಲಯದಲ್ಲಿ ನ್ಯಾಯಾಧೀಶರನ್ನು ಟೀಕಿಸಿದರೆ ನ್ಯಾಯ ವ್ಯವಸ್ಥೆಗೇ ಚ್ಯುತಿ ಬರುತ್ತದೆ ಎಂದು ಎಚ್ಚರಿಸಿದರು. ನ್ಯಾಯಾಧೀಶರ ಘನತೆ ಹಾಗೂ ನ್ಯಾಯಾಂಗದಲ್ಲಿ ಗೌರವಕ್ಕೆ ಎಂದೂ ಯಾರೂ ಧಕ್ಕೆ ತರಬಾರದು. ಬಲಿಷ್ಠ ಪ್ರಜಾಪ್ರಭುತ್ವಕ್ಕೆ ನಾವು ನ್ಯಾಯಾಂಗದ ಸ್ವಾತಂತ್ರ್ಯವನ್ನು ರಕ್ಷಿಸಬೇಕು ಎಂದು ತಮ್ಮ ಎಂದಿನ ದಿಟ್ಟತನದಿಂದ ಕರೆ ನೀಡಿದರು. ಇವೆಲ್ಲವನ್ನೂ ಕಂಡಾಗ ಕಿಸಾನ್ ಪುತ್ರ ಎಂದೇ ಕರೆಯಲ್ಪಡುವ ಜಗದೀಪ್ ಧನಕರ್ ಅವರು ಒಂದೆಡೆ ಭಾರತದ ಉಪ ರಾಷ್ಟ್ರಪತಿಯಾಗಿ ಮತ್ತೊಂದೆಡೆ ರಾಜ್ಯಸಭೆಯ ಸಭಾಪತಿಯಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂಬ ವಿಶ್ವಾಸ ನಮ್ಮೆಲ್ಲರದ್ದಾಗಿದೆ. ■



Downloaded From:www.kpscvaani.com




# ಕಾಶಿ ಯಾತ್ರೆಗೆ

## ರಾಜ್ಯ ಸರ್ಕಾರದಿಂದ ಸಹಾಯಧನ

**ರಾಜ್ಯ ಸರ್ಕಾರವು ಹಿಂದೂಗಳ ಪವಿತ್ರ ಸ್ಥಳವಾದ ಕಾಶಿಗೆ ಯಾತ್ರೆ ಕೈಗೊಳ್ಳುವ ಭಕ್ತರಿಗೆ ಸಹಾಯಧನ ನೀಡುವ ಯೋಜನೆಗೆ ಚಾಲನೆ ನೀಡಿದೆ.**

ಆರ್. ಸ್ಮಿತಾ

**ಕಾ**ಶಿ ಕ್ಷೇತ್ರವು ಪರಮ ಪವಿತ್ರ ಸ್ಥಳವಾಗಿದೆ. ಕಾಶಿ ಕ್ಷೇತ್ರವು ಭಕ್ತಿ, ಭಾವ ನಂಬಿಕೆ ವಿಶ್ವಾಸ ಶ್ರದ್ಧೆಯಿಂದ ಕೂಡಿದ ಸ್ಥಳವಾಗಿರುವುದರಿಂದ ಜೀವನದಲ್ಲಿ ಒಮ್ಮೆಯಾದರೂ ಕಾಶಿ ಯಾತ್ರೆಗೆ ತೆರಳಬೇಕು ಎನ್ನುವುದು ಹಿಂದುಗಳ ಬಯಕೆಯಾಗಿರುತ್ತದೆ. ಅದರಲ್ಲೂ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮುತುವರ್ಜಿಯಿಂದ ಕಾಶಿ ಕ್ಷೇತ್ರವನ್ನು ಭವ್ಯವಾಗಿ, ದಿವ್ಯವಾಗಿ ಅಭಿವೃದ್ಧಿಗೊಳಿದ್ದಾರೆ. ಇಲ್ಲಿ ಹರಿಯುವ ಗಂಗಾ ನದಿಯ ಸ್ನಾನದಿಂದ ಪಾಪವು ನಾಶವಾಗುತ್ತದೆ ಎಂಬ ಪ್ರತೀತಿ ಇದೆ.

ರಾಜ್ಯದ ದೇವಸ್ಥಾನಗಳ ಅಭಿವೃದ್ಧಿಗೆ ಕಳೆದ 10 ವರ್ಷಗಳಿಗೆ ಹೋಲಿಸಿದರೆ ಅತಿ ಹೆಚ್ಚು ಅನುದಾನವನ್ನು ಈ ಆರ್ಥಿಕ ವರ್ಷದಲ್ಲಿ ನೀಡಲಾಗಿದೆ. ಒಂದು ವರ್ಷದಲ್ಲಿ ಮುಜರಾಯಿ ಇಲಾಖೆಯಿಂದ ಹಲವಾರು ನೂತನ ಯೋಜನೆಗಳು ಪ್ರಾರಂಭವಾಗಿದೆ. ದೈವ ಸಂಕಲ್ಪ, ಇಂಟಿಗ್ರೇಟೆಡ್ ಟೆಂಪಲ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಅಳವಡಿಕೆ, ಕಾಯಕಲ್ಪ, ಕಾಶಿ ಯಾತ್ರೆಗೆ ಸಹಾಯಧನ, ಕಾಶಿ ಪ್ರವಾಸಕ್ಕೆ ಅನುಕೂಲ ಒದಗಿಸಲು ಭಾರತ್ ಗೌರವ್ ಯೋಜನೆಯ ಮೂಲಕ ರೈಲು ಸೇವಾಸೌಲಭ್ಯ, ಇಲಾಖೆಯ ನೌಕರರು ಹಾಗೂ ಅರ್ಚಕರುಗಳಿಗೆ ವಿಮಾ ಸೌಲಭ್ಯ, ತಸ್ತಿಕ್ ಹಣ ಪ್ರಮುಖವಾದ ಯೋಜನೆಗಳಾಗಿದೆ.

ಕಾಶಿಯಾತ್ರೆ ತೆರಳುವ ಯಾತ್ರಾರ್ಥಿಗಳಿಗೆ ರೂ.5000 ಸಹಾಯಧನ ನೀಡಲು ಸರ್ಕಾರ ಮುಂದಾಗಿದೆ. ರಾಜ್ಯದಿಂದ ಕಾಶಿಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಸಹಾಯಧನವನ್ನು ನೇರವಾಗಿ ಡಿಬಿಟಿ ಮೂಲಕ ಆನ್‌ಲೈನ್‌ನಲ್ಲಿ ವರ್ಗಾಯಿಸುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಇದೇ ಜುಲೈ 14 ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಚಾಲನೆ ನೀಡಿದರು.

ಇನ್ನು ಮುಂದೆ ಕಾಶಿ ಯಾತ್ರೆಯನ್ನು



Downloaded From:www.kpscvaani.com



ಕೈಗೊಂಡು ಸರ್ಕಾರದ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವ ಯಾತ್ರಾರ್ಥಿಗಳು ಸರ್ಕಾರದ ಮಾರ್ಗಸೂಚಿಯ ಅನ್ವಯ ಸಂಬಂಧಿಸಿದ ದಾಖಲಾತಿಗಳನ್ನು ಸೇವಾ ಸಿಂಧು ಮೂಲಕ ವೆಬ್ ಪೋರ್ಟ್‌ನಲ್ಲಿ (https://sevasindhu.karnataka.gov.in) ಅಪ್‌ಲೋಡ್ ಮಾಡಬೇಕು.

ಈ ರೀತಿಯಾಗಿ ಅಪ್‌ಲೋಡ್ ಮಾಡಲಾದ ದಾಖಲೆಗಳನ್ನು ಪರಿಶೀಲಿಸಿ, ಅರ್ಜಿದಾರರ ಆಧಾರ್ ಲಿಂಕ್ ಹೊಂದಿರತಕ್ಕಂತಹ ಬ್ಯಾಂಕ್ ಖಾತೆಗೆ ರೂ. 5000 ಗಳ ಸಹಾಯಧನವನ್ನು ನೇರವಾಗಿ ಡಿ.ಬಿ.ಟಿ. ಮೂಲಕ ಜಮಾ ಮಾಡಲಾಗುವುದು. ಆನ್‌ಲೈನ್ ಲಿಂಕ್ ಮೂಲಕ ನೊಂದಣಿ ಮಾಡಿಕೊಳ್ಳುವ ಯಾತ್ರಾರ್ಥಿಗಳು ಕಾಶಿಯಲ್ಲಿರುವ ಕರ್ನಾಟಕ ಛತ್ರದಲ್ಲೂ ತಮ್ಮ ಗುರುತನ್ನು ನೊಂದಾಯಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ https://itms.kar.nic.in/hrcehome/index.php ಮೂಲಕ ಪಡೆದುಕೊಳ್ಳಬಹುದು.

**ಕಾಶಿಯಾತ್ರೆ ಕೈಗೊಳ್ಳಲು ಅನುಸರಿಸಬೇಕಾದ ಮಾರ್ಗಸೂಚಿಗಳು:**

ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಂಡ ಅರ್ಹ ಯಾತ್ರಾರ್ಥಿಗಳಿಗೆ ತಲಾ ರೂ. 5000/-ಗಳನ್ನು ಸಹಾಯ ಧನವಾಗಿ ನೀಡಲಾಗುವುದು. ಕರ್ನಾಟಕದ ಖಾಯಂ ನಿವಾಸಿಗಳು ಮಾತ್ರ ಈ ಧನಸಹಾಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಕರ್ನಾಟಕ ರಾಜ್ಯ ಚುನಾವಣಾ ಆಯೋಗ ನೀಡಿರುವ "ಗುರುತಿನ ಚೀಟಿ" ಅಥವಾ ಆಧಾರ್ ಗುರುತಿನ ಚೀಟಿ ಅಥವಾ ರೇಷನ್ ಕಾರ್ಡ್ ಯಾವುದಾದರೂ ಒಂದು ದಾಖಲೆಗಳನ್ನು ಕಡ್ಡಾಯವಾಗಿ ಒದಗಿಸಬೇಕಾಗುತ್ತದೆ.

ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳು ಆಯಾ ಆರ್ಥಿಕ ವರ್ಷದ ಮೊದಲ ದಿನಕ್ಕೆ ಅನ್ವಯಿಸುವಂತೆ ಏಪ್ರಿಲ್ 1 ಕ್ಕೆ 18 ವರ್ಷಗಳ ಮೇಲ್ಪಟ್ಟವರಾಗಿರಬೇಕು. 18 ವಯಸ್ಸಿನ ಕೆಳಗಿನವರ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 18 ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ವಯಸ್ಸಿಗೆ ಸಂಬಂಧಿಸಿದ ಸೂಕ್ತ ದಾಖಲೆಗಳನ್ನು ನೀಡಬೇಕು.

ದಿನಾಂಕ 01-07-2022 ರಿಂದ ಅನ್ವಯವಾಗುವಂತೆ ಯಾತ್ರಾರ್ಥಿಗಳು ಕಾಶಿ ಯಾತ್ರೆ ಕೈಗೊಂಡಿರುವ ಬಗ್ಗೆ, ಸಂಬಂಧಿಸಿದ ದಾಖಲೆಗಳನ್ನು ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಛತ್ರ, ವಾರಣಾಸಿ ಇವರ ಕಛೇರಿಯಿಂದ ಬಯೋಮೆಟ್ರಿಕ್ ದೃಢೀಕರಣದೊಂದಿಗೆ, ಆನ್‌ಲೈನ್,ಮುದ್ದಾಂ ಅಥವಾ ನೊಂದಾಯಿತ ಅಂಚೆ ಮೂಲಕ, ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಇವರ ಕಛೇರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಛತ್ರ, ವಾರಣಾಸಿ ಇವರ ದೃಢೀಕರಣ ಇಲ್ಲದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಯಾತ್ರಾರ್ಥಿಗಳು ಸಹಾಯಧನವನ್ನು ಒಂದು ಬಾರಿ ಪಡೆದ ನಂತರ ಅದೇ ವ್ಯಕ್ತಿಗೆ ಎರಡನೇ ಬಾರಿ ಅನುದಾನ ನೀಡಲು ಪರಿಗಣಿಸಲಾಗುವುದಿಲ್ಲ. ಸರ್ಕಾರದ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವ ಯಾತ್ರಾರ್ಥಿಗಳ ಬ್ಯಾಂಕ್ ಖಾತೆಯು ರಾಷ್ಟ್ರೀಕೃತ ಬ್ಯಾಂಕಿನ ಖಾತೆಯಾಗಿರಬೇಕು ಮತ್ತು ಕಡ್ಡಾಯವಾಗಿ ಆಧಾರ್ ಲಿಂಕ್ ಆಗಿರಬೇಕು.

**ಅರ್ಜಿಯೊಂದಿಗೆ ಒದಗಿಸಬೇಕಾದ ದಾಖಲೆಗಳು**

ಈ ಯಾತ್ರೆಗೆ ಅರ್ಜಿಸಲ್ಲಿಸುವವರು ಕಡ್ಡಾಯವಾಗಿ ಪಾಸ್ ಪೋರ್ಟ್ ಸೈಜಿನ ಒಂದು ಭಾವಚಿತ್ರ, ಆಧಾರ್ ಗುರುತಿನ ಚೀಟಿ (ಬ್ಯಾಂಕ್ ಖಾತೆಗೆ ಲಿಂಕ್ ಆಗಿರಬೇಕು). ರೇಷನ್ ಕಾರ್ಡ್(ಇದ್ದಲ್ಲಿ), ಚುನಾವಣಾ ಗುರುತಿನ ಚೀಟಿ, ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಛತ್ರ ವಾರಣಾಸಿರವರ ದೃಢೀಕರಣ ಪತ್ರ, ರೂ. 20 ಗಳ ಛಾಪಾ ಕಾಗದದಲ್ಲಿ ಸ್ವ-ದೃಢೀಕರಣ, ಕಾಯ್ದಿರಿಸಿರುವ ಟಿಕೆಟ್‌ಗಳು (ಯಾತ್ರೆಗೆ ತೆರಳಿದ ಹಾಗೂ ಮರಳಿ ಬಂದ), ಮತ್ತು ಉಳಿದುಕೊಂಡಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಬೇಕು.

ಸದರಿ ಸಹಾಯಧನವನ್ನು ಯಾತ್ರೆ ಪೂರ್ಣಗೊಳಿಸಿ ಸಂಬಂಧಿಸಿದ ದಾಖಲೆಗಳನ್ನು ನಿಗದಿತ ನಮೂನೆ ಅರ್ಜಿಯನ್ನು ಭರ್ತಿ ಮಾಡಿ ಒದಗಿಸಿದ ನಂತರ ಸದರಿ ಅರ್ಜಿಗಳನ್ನು ಧಾರ್ಮಿಕ ದತ್ತಿ ಆಯುಕ್ತರು ಸ್ವೀಕರಿಸಿ, ಪರಿಶೀಲಿಸಿ ಅನುದಾನ ಮಂಜೂರು ಮಾಡಲು ಕ್ರಮ ಕೈಗೊಳ್ಳುವರು.

ಕಾಶಿ ಯಾತ್ರೆ ಪೂರ್ಣಗೊಳಿಸಿದ ಗರಿಷ್ಠ 30 ಸಾವಿರ ಯಾತ್ರಾರ್ಥಿಗಳ ಅರ್ಜಿಗಳು ಸ್ವೀಕೃತವಾಗುವವರೆಗೆ ಸಹಾಯಧನ ಮಂಜೂರು ಮಾಡಲು ಪರಿಗಣಿಸಲಾಗುವುದು. ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸದರಿ ಸಹಾಯಧನವನ್ನು ಆಯಾ ಆರ್ಥಿಕ ಸಾಲಿನಲ್ಲಿ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಮಾತ್ರ ಮಂಜೂರು ಮಾಡಲಾಗುವುದು.

ಸರ್ಕಾರದಿಂದ ಮಂಜೂರು ಮಾಡಿರುವ ಅನುದಾನದ ಲಭ್ಯತೆಗನುಗುಣವಾಗಿ ಯಾತ್ರಾರ್ಥಿಗಳಿಗೆ ಸಹಾಯಧನವನ್ನು ನೀಡಲಾಗುವುದರಿಂದ ಮೊದಲು ಬಂದ ಯಾತ್ರಾರ್ಥಿಗಳಿಗೆ ಆದ್ಯತೆಯನ್ನು ನೀಡಲಾಗುತ್ತದೆ.

ಇದುವರೆವಿಗೆ ಸುಮಾರು 500 ಅರ್ಜಿಗಳಷ್ಟೇ ಬಂದಿರುವುದರಿಂದ ಈ ಸೌಲಭ್ಯಕ್ಕಾಗಿ ಆಸಕ್ತ ಭಕ್ತರು ಅರ್ಜಿ ಸಲ್ಲಿಸಿ ಕಾಶಿ ಯಾತ್ರೆ ಕೈಗೊಳ್ಳಬಹುದು.


Downloaded From:www.kpscvaani.com









ಈ ಬಾರಿ 76 ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಲಾಲ್‌ಬಾಗ್‌ನ ಸಸ್ಯೋದ್ಯಾನದಲ್ಲಿ ಡಾ.ರಾಜ್ ಕುಮಾರ್ ಮತ್ತು ಪುನೀತ್ ರಾಜ್ ಕುಮಾರ್ ಅವರ ಸ್ಮರಣಾರ್ಥ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿತ್ತು. ವಿದೇಶಿ ಹೂಗಳು ಸೇರಿದಂತೆ ಸುಮಾರು 500 ಕ್ಕೂ ಹೆಚ್ಚು ವಿವಿಧ ಪುಷ್ಪಗಳನ್ನು ಬಳಸಲಾಗಿತ್ತು. ಈ ಫಲಪುಷ್ಪ ಪ್ರದರ್ಶನದಲ್ಲಿ ವಿಶೇಷವಾಗಿ ಡಾ.ರಾಜ್‌ಕುಮಾರ್ ಹುಟ್ಟಿದ ಊರು ಗಾಜನೂರಿನ ಮನೆ ಹಾಗೂ ಮೈಸೂರಿನ ಶಕ್ತಿಧಾಮದ ಪ್ರತಿರೂಪವನ್ನು ನಿರ್ಮಿಸಲಾಗಿತ್ತು. ಅಂದಾಜು 10 ಲಕ್ಷಕ್ಕೂ ಹೆಚ್ಚು ಜನರು ಈ ಫಲಪುಷ್ಪ ಪ್ರದರ್ಶನವನ್ನು ವೀಕ್ಷಣೆ ಮಾಡಿದ್ದಾರೆ.












Downloaded From:www.kpscvaani.com



# ಮೌನಕ್ಕೆ ಜಾರಿದ ಕಾಡು ಕುದುರೆ....

ಕೆ.ಟಿ.ರಮ್ಯ ಗೌಡ

**ಕಾ**ಡು ಕುದುರೆ ಓಡಿ ಬಂದಿತ್ತಾ...ಆಆಆಆ....ಈ ಹಾಡನ್ನು ಕೇಳದ ಕನ್ನಡಿಗನಿಲ್ಲ..ಪ್ರತಿಯೊಬ್ಬ ಕನ್ನಡಿಗನ ಬಾಯಾಲ್ಲೂ ಈ ಹಾಡು ಗುನುಗುವಂತೆ ಮಾಡಿದವರು ಶಿವಮೊಗ್ಗ ಸುಬ್ಬಣ್ಣ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರು ಬರೆದ ಹಾಡಿಗೆ ಧ್ವನಿಗೂಡಿಸಿ ವಿಶ್ವದಾದ್ಯಂತ ಕನ್ನಡದ ಹಾಡನ್ನು ಪಸರಿಸುವಂತೆ ಮಾಡಿದವರು ಸುಬ್ಬಣ್ಣ. ಕನ್ನಡ ಸುಗಮ ಸಂಗೀತ ಕ್ಷೇತ್ರದಲ್ಲಿ ಮುಂಚೂಣಿ ಗಾಯಕರಲ್ಲೊಬ್ಬರಾದ ಶಿವಮೊಗ್ಗ ಸುಬ್ಬಣ್ಣ ಇನ್ನು ನೆನಪು ಮಾತ್ರ. ಆಗಸ್ಟ್ 11ರ (ಗುರುವಾರ) ರಾತ್ರಿ ಶಿವಮೊಗ್ಗ ಸುಬ್ಬಣ್ಣ ಇಹಲೋಕ ತ್ಯಜಿಸಿದರು. ಮೂಲತಃ ವಕೀಲರಾದರೂ ರಕ್ತಗತವಾಗಿ ಬಂದ ಸಂಗೀತವನ್ನೇ ಉಸಿರಾಗಿಸಿಕೊಂಡು ಬೆಳೆದವರು ಸುಬ್ಬಣ್ಣ.

ಗಣೇಶ್ ರಾವ್ ಹಾಗೂ ರಂಗನಾಯಕಮ್ಮ ಅವರ ಮಗನಾದ ಸುಬ್ಬಣ್ಣ ಶಿವಮೊಗ್ಗ ಜಿಲ್ಲೆಯ ನಗರ ಗ್ರಾಮದಲ್ಲಿ 1938ರಲ್ಲಿ ಜನಿಸಿದ್ದರು. ಮನೆಯಲ್ಲಿ ಪ್ರತಿದಿನ ಪೂಜೆ, ಪುನಸ್ಕಾರ, ವೇದ-ಮಂತ್ರಗಳ ಝೇಂಕಾರ ಕೇಳಿ ಬೆಳೆದವರು. ಇವರ ತಾತ ಶಾಮಣ್ಣ ಸಂಗೀತದಲ್ಲಿ ಘನ ವಿದ್ವಾಂಸರಾಗಿದ್ದರು. ಅವರ ಬಳಿಯಲ್ಲಿಯೇ ಪ್ರಾಥಮಿಕ ಸಂಗೀತಾಭ್ಯಾಸ ಆರಂಭಿಸಿದರು. ಅವರ ನಿಜನಾಮಧೇಯ ಜಿ.ಸುಬ್ರಹ್ಮಣ್ಯಂ ಎಂದಿತ್ತು. ಸುಬ್ಬಣ್ಣ ಬಿ.ಎ., ಬಿ.ಕಾಂ., ಎಲ್.ಎಲ್.ಬಿ ಪದವೀದರರು. ವಕೀಲರಾಗಿ ವೃತ್ತಿ ಬದುಕು ಆರಂಭಿಸಿದ ಅವರು ಬಳಿಕ ನೋಟರಿಯಾಗಿ ನೇಮಕಗೊಂಡು ಕೆಲವು ವರ್ಷಗಳ ಕಾಲ ಸಂಗೀತದ ಕಡೆ ಮುಖ ಮಾಡದಿದ್ದರೂ, ರಕ್ತಗತವಾಗಿದ್ದ ಸಂಗೀತ ಆಗಾಗ ಇವರನ್ನು ಎಚ್ಚರಿಸಿ ಕೆಲವು ಸಮಾರಂಭಗಳಲ್ಲಿ ಹಾಡುವಂತೆ ಪ್ರೇರೇಪಿಸುತ್ತಿತ್ತು. ಇದರಿಂದಾಗಿ ಶಾಲಾ ದಿನಗಳಲ್ಲಿ ಹಲವಾರು ಪ್ರಶಸ್ತಿ ಪಡೆದು, 'ಹಾಡಿನ ಸುಬ್ಬಣ್ಣ' ಎಂದೆನಿಸಿಕೊಂಡರು.

ಮುಂದೆ ಕನ್ನಡ ಗಾಯನ ಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಂಡ ಸುಬ್ಬಣ್ಣ ಅವರು, 1963ರಲ್ಲಿ ಆಕಾಶವಾಣಿಯ ಗಾಯಕರಾಗಿಯೂ ಆಯ್ಕೆಯಾದರು. ನಾಟಕಕಾರ, ಚಿತ್ರ ನಿರ್ದೇಶಕ ಕವಿ ಚಂದ್ರಶೇಖರ ಕಂಬಾರರ 'ಕರಿಮಾಯಿ' ಮೂಲಕ ಸಿನಿಮಾ ರಂಗಕ್ಕೆ ಸುಬ್ಬಣ್ಣ ಹಿನ್ನೆಲೆ ಗಾಯಕರಾಗಿ ಪ್ರವೇಶಿಸಿದರು. ಚಂದ್ರಶೇಖರ ಕಂಬಾರರ ನಿರ್ದೇಶನದ ಕಾಡುಕುದುರೆ ಚಿತ್ರದ ಕಾಡುಕುದುರೆ ಹಾಡಿಗಾಗಿ 1978 ರಲ್ಲಿ ರಜತ ಕಮಲ ರಾಷ್ಟ್ರಪ್ರಶಸ್ತಿ ಪಡೆದ ಪ್ರಥಮ ಕನ್ನಡಿಗರೆಂಬ ಹೆಗ್ಗಳಿಕೆ ಅವರದು. ಅಂದಿನ ರಾಷ್ಟ್ರಪತಿ ನೀಲಂ ಸಂಜೀವ ರೆಡ್ಡಿ ಅವರಿಂದ ರಜತ ಕಮಲ ಪ್ರಶಸ್ತಿ ಸ್ವೀಕರಿಸಿದ ಸುಬ್ಬಣ್ಣ ಯಶಸ್ಸಿನ ಕುದುರೆಯೇರಿ ನಡೆದರು.

ಆಕಾಶವಾಣಿ ಎಂಎಸ್ಐಎಲ್ ಪ್ರಾಯೋಜಕತ್ವದಲ್ಲಿ ಪ್ರಸಾರವಾಗುತ್ತಿದ್ದ ಜನಪ್ರಿಯ ಕಾರ್ಯಕ್ರಮದಲ್ಲಿ ಕೋಡಗನ ಕೋಳಿ ನುಂಗಿತ್ತಾ.., ಅಳಬೇಡಾ ತಂಗಿ ಅಳಬೇಡ... ಬಿದ್ದೀಯಬ್ಬೇ ಮುದುಕಿ..

### ಪ್ರಧಾನಿ ಮೋದಿ ಸಂತಾಪ

**ಶ್ರೇಷ್ಠ ಗಾಯಕ ಶಿವಮೊಗ್ಗ ಸುಬ್ಬಣ್ಣ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದರು. ತಮ್ಮ ಕನ್ನಡ ಹಾಡುಗಳಿಂದಾಗಿ ಸಂಗೀತಾಭಿಮಾನಿಗಳ ಮನೆಮಾತಾಗಿದ್ದರು. ಅಪಾರ ಮೆಚ್ಚುಗೆ ಪಡೆದಿರುವ ಅವರ ಹಾಡುಗಳು ಕನ್ನಡ ಕಾವ್ಯದ ಮುತ್ತುಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ಪ್ರಯತ್ನಗಳಾಗಿವೆ. ಅವರ ನಿಧನದಿಂದ ತೀವ್ರ ದುಃಖವಾಗಿದೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿ ನೀಡಲಿ ಓಂ ಶಾಂತಿ ಎಂದು ಟ್ವೀಟ್ ಮಾಡಿದ್ದರು.**



Downloaded From:www.kpscvaani.com



**ಸುಬ್ಬಣ್ಣ ಅವರ ಪರಂಪರೆ ಮುಂದುವರೆಯಬೇಕು**

ಎಂಥ ಕಷ್ಟಕರವಾದ ಸಂಗೀತವನ್ನು ಅತ್ಯಂತ ಸರಳ, ಸುಲಭವಾಗಿ ಹಾಡುವ ಕಲೆಯನ್ನು ಎಲ್ಲಾ ಕಲಾವಿದರಿಗೆ ತೋರಿಸಿಕೊಟ್ಟಿದ್ದಾರೆ. 'ಸುಬ್ಬಣ್ಣ ಅವರು ಸಂಗೀತದ ದೊಡ್ಡ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ. ಅವರು ಬಿಟ್ಟು ಹೋಗಿರುವ ಕಲಾ ಪರಂಪರೆ ಯುವ ಜನರ ಮೂಲಕ ಮುಂದುವರಿಸುವ ನಿಟ್ಟಿನಲ್ಲಿ ಅವರ ನೆನಪಿನಲ್ಲಿ ಸ್ಮಾರಕ ಇಲ್ಲವೆ ಪ್ರತಿಷ್ಠಾನ ಮಾಡಲು ಸರ್ಕಾರ ಎಲ್ಲಾ ರೀತಿಯಲ್ಲೂ ನೆರವನ್ನು ನೀಡಲಿದೆ.

**–ಬಸವರಾಜ ಎಸ್ ಬೊಮ್ಮಾಯಿ,**
**ಮುಖ್ಯಮಂತ್ರಿಗಳು**

ಮೊದಲಾದ ಶಿಶುನಾಳ ಷರೀಫರ ಗೀತೆಗಳನ್ನು ಹಾಡುವ ಮುಖೇನ ಸುಬ್ಬಣ್ಣ ಮನೆಮಾತಾದರು. ಅವರ ಸಾಧನೆಯನ್ನು ಗುರುತಿಸಿ ರಾಜ್ಯ ಸರ್ಕಾರ ಸಂತ ಶಿಶುನಾಳ ಶರೀಫ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸಂಗೀತ ಅಕಾಡಮಿಯ ಕರ್ನಾಟಕ ಕಲಾ ತಿಲಕ ಪ್ರಶಸ್ತಿ ನೀಡಿ ಗೌರವಿಸಿದರೆ, ಅಭಿಮಾನಿಗಳು ನೂರಾರು ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಿದ್ದಾರೆ.







ಕಾಲೇಜು ದಿನಗಳಲ್ಲಿ ಬರೀ ಹಿಂದಿ ಚಿತ್ರಗೀತೆಗಳನ್ನು ಹಾಡುತ್ತಿದ್ದವರು, ಗಾಯನ ಸ್ಪರ್ಧೆಯಲ್ಲಿ ಅಡಿಗರ 'ಮೋಹನ ಮುರಳಿ' ಹಾಡಿಗೆ ಗಿಟ್ಟಿಸಿದ ಬಹುಮಾನದಿಂದ ಭಾವಗೀತೆ ಹಾಡುವ ನಿರ್ಧಾರ ಕೈಗೊಂಡಿದ್ದರು. ಕುವೆಂಪು ಅವರ ಭಾವಗೀತೆಗಳ ಹಲವಾರು ಕ್ಯಾಸೆಟ್ಟುಗಳಿಗೆ ಹಾಡಿರುವುದಲ್ಲದೆ ಕರ್ನಾಟಕದ ಪ್ರತಿ ಹಳ್ಳಿಯ ಮೂಲೆಮೂಲೆಗೂ ಸಂಚರಿಸಿ ಸುಗಮಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದರು. ಹಲವಾರು ಸಿ.ಡಿ. ಕ್ಯಾಸೆಟ್ಟುಗಳು ಬಿಡುಗಡೆ ಆಗಿದ್ದವು. ಕುವೆಂಪು, ಬೇಂದ್ರೆ, ನಿಸಾರ್ ಅಹಮದ್, ಕೆ.ಎಸ್.ನ., ಶಿವರುದ್ರಪ್ಪ, ಲಕ್ಷ್ಮೀನಾರಾಯಣ ಭಟ್ಟ ಮುಂತಾದ ಪ್ರಮುಖರ ಕವನಗಳಿಗೆ ರಾಗದ ರೂಪಕೊಟ್ಟು ಪ್ರಶಂಸೆ ಗಿಟ್ಟಿಸಿದ್ದರು.

**ವಿದೇಶಿ ನೆಲದಲ್ಲೂ ಕನ್ನಡದ ಕಂಪು**

ಅಮೇರಿಕ, ಸಿಂಗಾಪುರ ಸೇರಿದಂತೆ ಹಲವು ದೇಶಗಳಲ್ಲಿ ಸುಗಮ ಸಂಗೀತದ ಕಂಪು ಹರಡಿದ ಕೀರ್ತಿ ಸುಬ್ಬಣ್ಣ ಅವರಿಗೆ ಸಲ್ಲುತ್ತದೆ. ಅವರ ನೂರಾರು ಧ್ವನಿಸುರುಳಿಗಳು ನಾಡಿನ ಮೂಲೆಮೂಲೆ ತಲುಪಿವೆ. ಎರಡು ಬಾರಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿದ್ದ ಅವರು, ಆಕಾಶವಾಣಿ ನಡೆಸುವ ವಾರ್ಷಿಕ ಸಂಗೀತ ಸ್ಪರ್ಧೆಗಳ ತೀರ್ಪುಗಾರರಾಗಿಯೂ ಕಾರ್ಯನಿರ್ವಹಿಸಿದ್ದರು. ರಾಜ್ಯ ಚಲನಚಿತ್ರ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದಾರೆ.

**ಸರ್ಕಾರಿ ಗೌರವದೊಂದಿಗೆ ಸುಬ್ಬಣ್ಣ ಅಂತ್ಯಕ್ರಿಯೆ**

ಸಕಲ ಸರ್ಕಾರಿ ಗೌರವಗಳೊಂದಿಗೆ ಸುಗಮ ಸಂಗೀತ ಗಾಯಕ ಶಿವಮೊಗ್ಗ ಸುಬ್ಬಣ್ಣ (83) ಅವರ ಅಂತ್ಯಕ್ರಿಯೆ ನೆರವೇರಿತು. ಗಣ್ಯರು, ಕುಟುಂಬದ ಸದಸ್ಯರು ಸೇರಿ ಅಪಾರ ಅಭಿಮಾನಿಗಳು ಈ ವೇಳೆ ಹಾಜರಿದ್ದರು. ಇದಕ್ಕೂ ಮುನ್ನ ಸುಬ್ಬಣ್ಣ ಅವರ ನಿವಾಸದಿಂದ ಶುಕ್ರವಾರ (ಆ.12) ಬೆಳಗ್ಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಅವರ ಪಾರ್ಥಿವ ಶರೀರವನ್ನು ಕರೆತರಲಾಯಿತು. ಅಲ್ಲಿ ಸುಬ್ಬಣ್ಣ ಅವರ ಹಾಡಿದ ಹಾಡುಗಳನ್ನು ಮೆಲುಕು ಹಾಕಲಾಯಿತು. ಈ ವೇಳೆ ಬಸವರಾಜ ಬೊಮ್ಮಾಯಿ, ಯಡಿಯೂರಪ್ಪ, ಸಚಿವರಾದ ಆರ್. ಅಶೋಕ್, ಅಗರ ಜ್ಞಾನೇಂದ್ರ, ಪಿ.ಜಿ.ಆರ್. ಸಿಂಧ್ಯಾ, ಕಲಾವಿದರಾದ ಮುಖ್ಯಮಂತ್ರಿ ಚಂದ್ರು, ನಾಗತಿಹಳ್ಳಿ ಚಂದ್ರಶೇಖರ್, ಟಿ.ಎಸ್.ನಾಗಾಭರಣ, ಟಿ.ಎನ್.ಸೀತಾರಾಮ್ ಸೇರಿದಂತೆ ರಾಜಕೀಯ ಮತ್ತು ಸಿನಿಮಾ ಕ್ಷೇತ್ರದ ಸಾವಿರಾರು ಮಂದಿ ಅವರ ಅಂತಿಮ ದರ್ಶನ ಪಡೆದರು.



Downloaded From:www.kpscvaani.com



# ನಿವೃತ್ತಿಯಾದರೂ ಪ್ರವೃತ್ತಿ ಬಿಡದ ಶ್ಯಾಮಣ್ಣ ಮೇಷ್ಟ್ರು

**ದಾರಿಯಲ್ಲಿ ಮೇಷ್ಟ್ರ ಕಂಡರೆ ಕಣ್ತಪ್ಪಿಸಿಕೊಂಡು ಓಡಾಡುವ ಮಕ್ಕಳು ಈ ಮೇಷ್ಟ್ರ ಮನೆಗೆ ತಾವೇ ಹೋಗುವುದಲ್ಲದೆ ದಿನ ಪೂರ್ತಿ ಮೈಮರೆತು ಮೇಷ್ಟ್ರೊಂದಿಗೆ ಕಾಲ ಕಳೆಯುತ್ತಾರೆ.**

ಕಿಶನರಾವ್ ಕುಲಕರ್ಣಿ

ಶ್ಯಾಮಣ್ಣ ಮೇಷ್ಟ್ರು ಮನೆಗೆ ಅಂದ್ರೆ ಮಕ್ಕಳು ಖುಷ್ ಖುಷಿಯಾಗಿ ಓಡೋಡಿ ಬರುತ್ತಾರೆ, ಹಾಗೆ ಬಂದವರಿಗೆ ಮರಳಿ ಮನೆಗೆ ಹೋಗುವ ಮನಸ್ಸೇ ಬಾರದು. ಪಾಲಕರು ಕರೆಯಲು ಬಂದಾಗಲೇ ಮಕ್ಕಳಿಗೆ ತಮ್ಮ ಮನೆಯ ನೆನಪಾಗುವುದು. ಸೆಪ್ಟೆಂಬರ್ 5 ರ ಶಿಕ್ಷಕರ ದಿನಾಚರಣೆ ಹಿನ್ನೆಲೆಯಲ್ಲಿ ಈ ನಿವೃತ್ತ ಶಿಕ್ಷಕರ ಶೈಕ್ಷಣಿಕ ಸೇವಾ ಮನೋಭಾವವನ್ನು ತಿಳಿಯೋಣ.

ಅಂದ ಹಾಗೆ, ಈ ನಿವೃತ್ತ ಮೇಷ್ಟ್ರು ಮನೆಯಲ್ಲಿ ಮಕ್ಕಳಿಗೆ ಆಕರ್ಷಕವಾಗುವ ಅದೆಂತಹ ವಾತಾವರಣವಿದೆ ಎಂಬುದನ್ನು ತಿಳಿಯಲು ನಾವು ಶ್ಯಾಮಣ್ಣ ಮೇಷ್ಟ್ರು ಮನೆಗೆ ಹೋಗಿ ಬರೋಣ. ಮೂಲತಃ ಬಾಗಲಕೋಟೆ ಜಿಲ್ಲೆ ಹುನಗುಂದ ಪಟ್ಟಣದವರಾದ 67ರ ಹರೆಯದ ಶ್ಯಾಮರಾವ್ ಕುಲಕರ್ಣಿ ಅವರು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ, ಪ್ರೌಢ ಶಾಲಾ ಶಿಕ್ಷಕರಾಗಿ ಪದೋನ್ನತಿ ಹೊಂದಿ ಈಗ ನಿವೃತ್ತಿ ಜೀವನ ನಡೆಸುತ್ತಿದ್ದಾರೆ. ಸದ್ಯ ಅವರ ಶ್ರೀಮತಿ ಕುಷ್ಟಗಿ ತಾಲೂಕಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿರುವ ಕಾರಣ ಕುಷ್ಟಗಿಯಲ್ಲಿಯೇ ವಾಸವಾಗಿದ್ದಾರೆ.


Downloaded From:www.kpscvaani.com

2016 ರಲ್ಲಿಯೇ ಸೇವೆಯಿಂದ ನಿವೃತ್ತಿಯಾದರೂ ಪ್ರವೃತ್ತಿಯಿಂದ ಮಾತ್ರ ನಿವೃತ್ತರಾಗದೇ ಪ್ರತಿ ದಿನ ಶೈಕ್ಷಣಿಕ ಬೆಳವಣಿಗೆಗಾಗಿ ಏನಾದರೊಂದು ಪ್ರಯೋಗ ಮಾಡುತ್ತಲೇ ಇರುತ್ತಾರೆ. ಶಾಲೆ ಇರುವಾಗ ನಿತ್ಯ ಒಂದೊಂದು ಶಾಲೆಗೆ ಹೋಗಿ ವಿಜ್ಞಾನ ಬೋಧನೆಯ ಜತೆಗೆ ಮಕ್ಕಳ ತಾರ್ಕಿಕ ಜ್ಞಾನಕ್ಕೆ ಇಂಬುಕೊಟ್ಟು ಬರುತ್ತಾರೆ. ಮನೆಯಲ್ಲಿದ್ದಾಗ ಅಕ್ಕರೆಯಿಂದ ಬರುವ ಮಕ್ಕಳೊಂದಿಗೆ ತಾವು ಮಗುವಾಗಿ ಆಟವಾಡುತ್ತಾ ಮಕ್ಕಳಿಗೆ ಅವರಿಗರಿವಿಲ್ಲದಂತೆ ವಿಜ್ಞಾನ ವಿಷಯವನ್ನು ಕಲಿಸುತ್ತಾರೆ. ಈ ಕಾರ್ಯಕ್ಕೆ ಅವರ ಶ್ರೀಮತಿಯವರ ಸಹಕಾರವೂ ಇದೆ.

ಮನೆ ತುಂಬ ವೈವಿಧ್ಯಮಯ ಬೊಂಬೆಗಳು:

ಇವರ ಮನೆಯಲ್ಲಿ ಯಾವ ಭಾಗ ನೋಡಿದರೂ ಬೊಂಬೆಗಳು, ಆಟಿಕೆಗಳು, ತಾವೇ ವಿಜ್ಞಾನ ಕಲಿಕೆಗೆ ನೆರವಾಗುವಂತೆ ತಯಾರಿಸಿದ ಸಾಧನಗಳು, ಸಾಧನ ತಯಾರಿಸುವುದಕ್ಕಾಗಿ ಸಂಗ್ರಹಿಸಿಟ್ಟ ರಟ್ಟು, ಬಿದಿರು, ಅಂಟು, ಥರ್ಮೋಕೋಲ್, ಹಳೆಯ ಬಟ್ಟೆ, ಹತ್ತಿ... ಮುಂತಾದ ಕಚ್ಚಾ ವಸ್ತುಗಳು ತುಂಬಿಕೊಂಡಿವೆ.

ಬೊಂಬೆಗಳೆಂದರೆ ಸಣ್ಣಮಟ್ಟ ಸಾಮಾನ್ಯ ಬೊಂಬೆಗಳಲ್ಲ, ಕೀಲಿಬೊಂಬೆ, ಮಾತನಾಡುವ ಬೊಂಬೆ, ನಗಿಸುವ ಬೊಂಬೆ, ಮಾತನಾಡಿಸುವ ಬೊಂಬೆ, ವಿಜ್ಞಾನದ ತಾರ್ಕಿಕ ತಿಳಿಸುವ ಬೊಂಬೆ, ಒತ್ತಡ, ಗಾಳಿ, ಬೆಳಕು, ಗುರುತ್ವಾಕರ್ಷಣೆ, ಬೆಳಕಿನ ಸಂಯೋಜನೆ... ಹೀಗೆ ವಿವಿಧ ವಿಷಯಗಳನ್ನು ಕಲಿಸುವ ಬೊಂಬೆಗಳು ಇವರ ಬಳಿ ಇವೆ.  ವಿವಿಧ ರಾಜ್ಯಗಳಿಗೆ ಶ್ಯಾಮಣ್ಣ ಮೇಷ್ಟ್ರು ಹೋದಾಗ, ಅಲ್ಲಿ ಸಿಗುವ ಬೊಂಬೆಗಳಲ್ಲಿ





ಮನರಂಜನೆಯಲ್ಲದೆ ವಿಜ್ಞಾನದ ಕುತೂಹಲ ಮೂಡಿಸುವಂತಹ ವಿಷಯಗಳಿದ್ದರೆ  ಖರೀದಿಸಿ ತರುತ್ತಾರೆ. ಅಲ್ಲದೆ ಕೆಲವೊಂದು ಬೊಂಬೆಗಳನ್ನು ತಮ್ಮ ಇಷ್ಟದ ಪ್ರಕಾರ ತಾವೇ ತಯಾರಿಸಿಕೊಂಡಿದ್ದಾರೆ. ಇದರ ಜೊತೆಗೆ ಮಾಡಿ ನೋಡು, ಆಡಿ ನೋಡು, ಮುಟ್ಟಿ ನೋಡು, ಅರಿತು ನೋಡು... ಎನ್ನುವ ರೀತಿಯಲ್ಲಿ ಮಕ್ಕಳಿಗೆ ಕುತೂಹಲ ಮೂಡಿಸುವಂತಹ ಮೂಟೆಗಟ್ಟಲೆ ವಿಜ್ಞಾನ ಸಲಕರಣೆಗಳನ್ನು ತಯಾರಿಸಿದ್ದಾರೆ.

ಹೀಗಾಗಿಯೇ ಮಕ್ಕಳಿಗೆ ಶ್ಯಾಮಣ್ಣ ಮೇಷ್ಟ್ರು ಅವರ ಮನೆಗೆ ಬಂದರೆ ಹೊರಗೆ ಹೋಗಲು  ಮನಸ್ಸೇ ಆಗದು. ಈ ಬೊಂಬೆಗಳನ್ನು ಇಡುವುದಕ್ಕಾಗಿಯೇ ಒಂದು ಬಾಡಿಗೆ ಮನೆ ಹಿಡಿದಿದ್ದಾರೆ.

ಮನೆ ತುಂಬಿ ಇನ್ನುಳಿದ ಬೊಂಬೆಗಳನ್ನು ರಟ್ಟಿನ ಬಾಕ್ಸ್‌ನಲ್ಲಿ ಹಾಕಿ ಅಟ್ಟದ ಮೇಲೆ ಇಟ್ಟಿದ್ದಾರೆ. ಇಡೀ ದಿನ ಬೊಂಬೆಗಳೊಂದಿಗೆ ಕಾಲ ಕಳೆಯುತ್ತಾರೆ. ಹೆಚ್ಚು ಕಡಿಮೆ 12 ಲಕ್ಷ ಮೊತ್ತದ ಬೊಂಬೆಗಳು ಇವರ ಸಂಗ್ರಹದಲ್ಲಿವೆ. ಅಂದ ಹಾಗೆ ಈ ಬೊಂಬೆಗಳೇ ಇವರ ಮಕ್ಕಳು. ತಮ್ಮ ಮಾಸಿಕ ನಿವೃತ್ತಿ ವೇತನದ ಅರ್ಧ ಭಾಗ ಬೊಂಬೆ, ವಿಜ್ಞಾನ ಸಲಕರಣೆಗಳಿಗಾಗಿಯೇ ವೆಚ್ಚ ಮಾಡುತ್ತಾರೆ.

**ಕಲಾ ಶಿಕ್ಷಕರಾದರೂ ವಿಜ್ಞಾನದ ಆಸಕ್ತಿ:**

ಶ್ಯಾಮರಾವ್ ಕುಲಕರ್ಣಿ ಕನ್ನಡ ಕಲಾ ಶಿಕ್ಷಕರಾದರೂ ವಿಜ್ಞಾನ ಹಾಗೂ ಇಂಗ್ಲಿಷ್ ವಿಷಯದಲ್ಲಿ ಅವರಿಗೆ ತುಂಬಾ ಆಸಕ್ತಿ. ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಶಿಕ್ಷಕರಾಗಿದ್ದ ಸಮಯದಲ್ಲಿ ಇವರು ವಿಜ್ಞಾನ ಹಾಗೂ ಇಂಗ್ಲಿಷ್ ವಿಷಯಗಳನ್ನೇ ಬೋಧಿಸುತ್ತಿದ್ದರು. ಮಕ್ಕಳು ಒಂದು ದಿನ, ಇಲ್ಲವೆ ಒಂದು ಗಂಟೆ ಶ್ಯಾಮಣ್ಣ ಅವರ ಸಹವಾಸ ಮಾಡಿದರೆ, ಅವರು ವಿಜ್ಞಾನ ಹಾಗೂ ಇಂಗ್ಲಿಷ್ ವಿಷಯದಲ್ಲಿ ಸ್ವಲ್ಪ ಮಟ್ಟಿಗಾದರೂ ಜ್ಞಾನಗಳಿಸುವುದರಲ್ಲಿ ಸಂದೇಹವೇ ಇಲ್ಲ. ಮಕ್ಕಳ ಮನಸ್ಸನ್ನು ತಮ್ಮೆಡೆಗೆ ಸೆಳೆಯುವ ಹಾಗೂ ಅವರಲ್ಲಿ ಏಕಾಗ್ರತೆ ಮೂಡಿಸುವ ಕೌಶಲ್ಯ ಈ ಮೇಷ್ಟ್ರು ಅವರ ಹೃದಯದಲ್ಲಿ ಅಡಗಿದೆ. "ವಿಜ್ಞಾನ ವಿಷಯವನ್ನು ಸರಳವಾಗಿ


Downloaded From:www.kpscvaani.com





ಬೋಧಿಸುತ್ತೇನೆ ಬನ್ನಿರಿ... ಎಂದರೆ ಮಕ್ಕಳು ಬರುವುದಿಲ್ಲ, 'ಮಕ್ಕಳೇ ನಿಮ್ಮ ಕೈಗೆ ಬೊಂಬೆಗಳನ್ನು ನೀಡುತ್ತೇನೆ ಆಟವಾಡಲು ಬರ್ರಿ" ಎಂದರೆ ಓಡೋಡಿ ಬರುತ್ತಾರೆ.

ಹೀಗೆ ಬಂದವರು ಈ ಬೊಂಬೆ ಹೀಗೇಕೆ ಮಾಡುತ್ತದೆ, ಅದೇಕೆ ಓಲಾಡುತ್ತದೆ, ಇದೇಕೆ ಬೀಳುವುದಿಲ್ಲ, ಅದೇಕೆ ಬಾಗಿ ನಿಂತಿದೆ... ಇಂತಹ ತರಹೆವಾರಿ ಪ್ರಶ್ನೆಗಳನ್ನು ಕೇಳಲು ಆರಂಭಿಸುತ್ತಾರೆ. ಅವರು ಕೌತುಕವಾಗಿ ಕೇಳುವ ಪ್ರಶ್ನೆಗಳಿಗೆ ಉತ್ಸಾಹದಿಂದ ನನ್ನ ಉತ್ತರ ಬರುತ್ತದೆ, ಅದೇ ಮಕ್ಕಳಿಗೆ ಸರಳ ಕಲಿಕೆಯ ಪಾಠವಾಗುತ್ತದೆ' ಎಂದು ಶ್ಯಾಮಣ್ಣ ಮೇಷ್ಟ್ರು ಖುಷಿಯಿಂದ ಹೇಳುತ್ತಾರೆ. ವಿಜ್ಞಾನ ಹಾಗೂ ಇಂಗ್ಲಿಷ್ ಸರಳ ಕಲಿಕೆಗೆ ತಾವೇ ಚಾರ್ಟ್‌ಗಳನ್ನು ಮಾಡಿದ್ದು ಮಕ್ಕಳಿಗೆ ನೀಡುತ್ತಾರೆ. ಇದೆಲ್ಲ ಉಚಿತವಾಗಿ ನಡೆಯುವ ಕಲಿಕೆ ಅಷ್ಟೆ.

**ಶಾಲಾ ಶಿಕ್ಷಕರಿಗೆ ತರಬೇತಿ:**

ವರ್ಗದ ಕೋಣೆಯಲ್ಲಿ ಸರಳ ಬೋಧನೆಯ ವಿಧಾನ ಹೇಗಿರಬೇಕು, ಪಾಠೋಕರಣಗಳು ಬೋಧನೆಯಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತವೆ, ನಾವೇ ಹೇಗೆ ಕಲಿಕೋಪಕರಣಗಳನ್ನು ತಯಾರಿಸಿಕೊಳ್ಳಬಹುದು? ಎಂಬೆಲ್ಲಾ ವಿಷಯವಾಗಿ ವಿವಿಧ ಶಾಲಾ ಶಿಕ್ಷಕರಿಗೆ ಅವರ ಶಾಲೆಗೆ ಹೋಗಿಯೇ ತರಬೇತಿ ನೀಡಿ ಬರುತ್ತಾರೆ. ಅಲ್ಲದೆ ಶಿಕ್ಷಕರ ಮುಂದೆ ಮಕ್ಕಳಿಗೆ ಪ್ರಾತ್ಯಕ್ಷಿಕೆಗಾಗಿ ತಾವೇ ಒಂದು ಮಾದರಿ ಪಾಠ ಮಾಡಿ ಬರುತ್ತಾರೆ. ಸೇವಾ ಅವಧಿಯಲ್ಲೂ ಇವರು ರಾಜ್ಯಮಟ್ಟದ ಸಂಪನ್ಮೂಲ ಶಿಕ್ಷಕರಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ತರಬೇತಿ ನೀಡಿದ್ದರು. ಆದರೆ ನಿವೃತ್ತಿಯಾದ ಬಳಿಕ ಈಗ ಹೆಚ್ಚಾಗಿದೆ. ಲಸಾಅ, ಮಸಾಅ, ಪೈಥಾಗೋರಸ್ ಸಿದ್ಧಾಂತ, ಪ್ರಮೇಯಗಳು ಹಾಗೂ ನ್ಯೂಟನ್ ನಿಯಮಗಳನ್ನು ತಾವೇ ತಯಾರಿಸಿದ ಸಾಧನಗಳ ಮೂಲಕ ಹೇಳುವುದು ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿವೆ. ಇಲ್ಲಿಯವರೆಗೆ ನಾನು ಹೆಚ್ಚು ಕಡಿಮೆ 850 ಶಾಲೆಗಳಿಗೆ ಭೇಟಿ ಕೊಟ್ಟಿದ್ದೇನೆ. ಒಂದು ಬಾರಿ ಹೋಗಿ ಬಂದರೆ ಮತ್ತೆ ಮತ್ತೆ ಅದೇ ಶಾಲೆಯವರು ಕರೆಯುತ್ತಾರೆ. ಇವರ ಸೇವೆಯನ್ನು ಶಾಲಾ ಶಿಕ್ಷಕರು, ಸಂಸ್ಥೆಗಳು ಕೋವಿಡ್ ಸಂದರ್ಭದಲ್ಲಿ ಹೆಚ್ಚು ಬಳಕೆ ಮಾಡಿಕೊಂಡಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಂತೂ ಇವರು ಭೇಟಿ ನೀಡದ ಶಾಲೆಗಳೇ ಇಲ್ಲ ಎನ್ನಬಹುದಾಗಿದೆ.

ವಿಜ್ಞಾನ ವಿಷಯದಲ್ಲಿ ತುಂಬಾ ಆಸಕ್ತಿ ಹೊಂದಿರುವ ಇವರು ಬಿಡುವಿನ ಸಮಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಹಂತದ ಪಠ್ಯಗಳನ್ನು ಹಿಡಿದುಕೊಂಡು ಯಾವ ಅಭ್ಯಾಸಕ್ಕೆ ಎಂತಹ ಪಾಠೋಪಕರಣಗಳನ್ನು ತಯಾರಿಸಬೇಕು ಎಂಬ ಯೋಜನೆಯನ್ನು ಹಾಕಿಕೊಳ್ಳುತ್ತಿರುತ್ತಾರೆ.

ಹೀಗಾಗಿಯೇ ಕಳೆದ 35 ವರ್ಷಗಳಿಂದ ಶೈಕ್ಷಣಿಕ ಸೇವೆಯಲ್ಲಿ ಆಟಿಕೆಗಳ ಮೂಲಕ ಬೋಧಿಸಿ ಕಠಿಣ ವಿಷಯಗಳನ್ನು ಸರಳೀಕರಿಸುವ ವಿಧಾನ ಮೈಗೂಡಿಸಿಕೊಂಡಿದ್ದಾರೆ. ಆಟಿಕೆಗಳು ಮನರಂಜನೆಗೆ ಮಾತ್ರವಲ್ಲ ಬೋಧನಾ ಉಪಕರಣಗಳನ್ನಾಗಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ನಿರೂಪಿಸಿದ್ದಾರೆ. ಸ್ಥಳೀಯ ಕಚ್ಚಾವಸ್ತು ಬಳಸಿ ತಾವೇ ವಿಜ್ಞಾನ, ಗಣಿತದ ಮಾದರಿಗಳನ್ನು ತಯಾರಿಸಿರುವುದು ಇಲ್ಲಿ ಗಮನಾರ್ಹ. ಇದೆಲ್ಲವನ್ನು ಮಕ್ಕಳಿಗಾಗಿಯೇ ನಿರ್ವಹಿಸಿದ್ದು.





Downloaded From:www.kpscvaani.com

ನಿವೃತ್ತರಾದರೂ ತಮ್ಮ ಆತ್ಮತೃಪ್ತಿಗಾಗಿ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಮಕ್ಕಳಿಗೆ ಇವರ ಮನೆ ಮಿನಿ ವಿಜ್ಞಾನ ಪ್ರಯೋಗಾಲಯವು ಹೌದು, ಆಟಿಕೆ ಮನೆಯೂ ಹೌದು.

ಶಾಲಾ ಮಕ್ಕಳಿಗೆ ವಿಜ್ಞಾನ, ಗಣಿತ ವಿಷಯಗಳನ್ನು ಆಟಿಕೆಗಳಿಂದ ಬೋಧಿಸುವ ಕಾಯಕವನ್ನು 31 ವರ್ಷಗಳಿಂದ ನಿರಂತರವಾಗಿ ಅನುಸರಿಸುತ್ತಾ ಬಂದಿದ್ದಾರೆ. ವಿಜ್ಞಾನ, ಗಣಿತ ಕಲಿಕಾ ಉಪಕರಣಗಳ ಸಂಖ್ಯೆಗಳನ್ನು ಲೆಕ್ಕ ಇಟ್ಟಿಲ್ಲ. ಈ ಬೋದನಾ ಉಪಕರಣ ಮತ್ತು ಆಟಿಕೆಗಳನ್ನು ಮನೆಯಲ್ಲಿ ಓರಣವಾಗಿ ಒಪ್ಪವಾಗಿ ಜೋಡಿಸಿಟ್ಟಿದ್ದಾರೆ, ಅಷ್ಟೇ ಜತನದಿಂದ ಕಾಯ್ದುಕೊಂಡಿದ್ದಾರೆ. ವಿದ್ಯಾರ್ಥಿಗಳು ಇಚ್ಛಿಸುವ ವಿಷಯಗಳನ್ನು ಆಟಿಕೆಗಳ ಮೂಲಕ ಮನದಟ್ಟು ಮಾಡುವ ಕಲಿಕಾ ವಿಧಾನದಿಂದಾಗಿಯೇ ಮಕ್ಕಳ ಪ್ರೀತಿಯನ್ನು ಇವರು ಸಂಪಾದಿಸಿದ್ದಾರೆ.

**ಪವಾಡಗಳನ್ನು ಬಯಲು ಮಾಡುತ್ತಾರೆ:**

ಮೌಢ್ಯತೆಯನ್ನು ಆಧಾರವಾಗಿಟ್ಟುಕೊಂಡು ಜನರನ್ನು ಮಾಯ, ಮಾಟ, ಮಂತ್ರ, ದೆವ್ವ, ಭೂತ, ಪಿಶಾಚಿ, ಭಾನಾಮತಿ ಎಂದು ಭಯಭೀತಗೊಳಿಸಿ, ಪವಾಡಗಳ ಹೆಸರಿನಿಂದ ವಂಚಿಸುತ್ತಿರುವ ಅನೇಕ ಢೋಂಗಿ ಪವಾಡ ಪುರುಷರ ವಂಚನೆಗಳನ್ನೂ ಇವರು ಬಯಲಿಗೆಳೆಯುತ್ತಾರೆ. ತಮ್ಮ ಸ್ವಾರ್ಥಕ್ಕೆ, ಉಪಜೀವನಕ್ಕೆ, ಹಣಗಳಿಸುವಿಕೆಗೆ ಅಥವಾ ಕೀರ್ತಿಗಾಗಿ ಢೋಂಗಿ ಬಾಬಾಗಳು ಹುಡುಕಿಕೊಂಡ ಅಕ್ರಮ ಮಾರ್ಗಗಳನ್ನು ಶ್ಯಾಮಣ್ಣ ಮೇಷ್ಟ್ರು ಪ್ರಾತ್ಯಕ್ಷಿಕೆಯೊಂದಿಗೆ ತೋರಿಸಿಕೊಡುತ್ತಾರೆ.

ಇವರು ತೋರುವ ರಹಸ್ಯಗಳನ್ನು ನೂರಾರು ವಿದ್ಯಾರ್ಥಿಗಳು, ಉಪನ್ಯಾಸಕರು, ಶಿಕ್ಷಕರು, ಪ್ರೇಕ್ಷಕರು ಕುತೂಹಲ ಮತ್ತು ರೋಮಾಂಚಿತರಾಗಿ ತುದಿಗಾಲ ಮೇಲೆ ನಿಂತು ವೀಕ್ಷಿಸುತ್ತಾರೆ. ನೋಡ ನೋಡುತ್ತಿದ್ದಂತೆಯೇ ವೇದಿಕೆಯ ಮೇಲೆ ಮಾಯ-ಮಂತ್ರ, ಪವಾಡ ಎಂದುಕೊಂಡಿದ್ದ ತಂತ್ರಗಳೆಲ್ಲವೂ ಕೇವಲ ಕುತಂತ್ರ ಎಂದು ನಿರೂಪಿಸಿದಾಗ ಢೋಂಗಿ ಬಾಬಾಗಳ ಬಂಡವಾಳ ಇಷ್ಟೇನಾ ಎಂಬ ನಿರ್ವಿಕಾರ ಪ್ರಜ್ಞೆ ಮಕ್ಕಳಲ್ಲಿ ಮೂಡುತ್ತದೆ.

ಶೂನ್ಯದಿಂದ ವಿಭೂತಿ ಸೃಷ್ಟಿ, ನೀರಿನಿಂದ ದೀಪ ಉರಿಯುವುದು, ತೆಂಗಿನ ಕಾಯಿಯಿಂದ ಅಂತರ್ಜಲ ನೋಡುವುದು, ಖಾಲಿ ಬಾಟಲಿಯಲ್ಲಿ ದೆವ್ವಗಳನ್ನು ಬಂಧಿಸುವುದು, ನಾಲಿಗೆಯ ಮೇಲೆ ಕರ್ಪೂರ ಹೊತ್ತಿಸುವುದು, ಕೆಂಡದ ಮೇಲಿನ ನಡಿಗೆ, ಹಾಲಿನಿಂದ ಭವಿಷ್ಯ ಹೇಳುವುದು, ಚಾಕುವಿನಿಂದ ಅಕ್ಕಿ ತುಂಬಿದ ತಂಬಿಗೆ ಎತ್ತುವುದು, ಬಾಯಿಯಲ್ಲಿ ಶಿವಲಿಂಗ ದರ್ಶನ, ತಲೆಯಲ್ಲಿ ಚಾಕು ಚುಚ್ಚುವುದು... ಮುಂತಾದ ಪವಾಡಗಳ ರಹಸ್ಯವನ್ನು ತಮ್ಮ ಕೈಚಳಕದಿಂದ ಭೇದಿಸಿ ವಿದ್ಯಾರ್ಥಿಗಳಲ್ಲಿ ಬೆರಗು ಮೂಡಿಸುತ್ತಾರೆ. ಈ ರೀತಿಯ ಪವಾಡ ನಡೆಸಲು ಬರುವ ಮೋಸಗಾರರ ವಂಚನೆಗೆ ನೀವು ಬಲಿಯಾಗಬೇಡಿ ಎಂದು ಶ್ಯಾಮಣ್ಣ ಮೇಷ್ಟ್ರು ಮಕ್ಕಳನ್ನು ಎಚ್ಚರಿಸುತ್ತಾರೆ.

ಇವರು ಇದುವರೆವಿಗೂ ಸುಮಾರು 1200ಕ್ಕೂ ಹೆಚ್ಚು ಪವಾಡ ರಹಸ್ಯ ಬಯಲು ಮಾಡುವ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮಕ್ಕಳೊಂದಿಗೆ ಕಾಲ ಕಳೆಯುವುದರಿಂದ ನನಗೆ ಒಂಟಿತನ ದೂರವಾಗಿರುವ ಜೊತೆಗೆ ನನ್ನ ಆಯುಷ್ ವೃದ್ಧಿಗೂ ಸಹಾಯಕವಾಗಿದೆ ಎನ್ನುತ್ತಾರೆ. ಅನೇಕ ಶಿಕ್ಷಕರು ಆಸಕ್ತಿಯಿಂದ ನಮ್ಮ ಮನೆಗೆ ಬಂದು ವಿಜ್ಞಾನ, ಗಣಿತ ವಿಷಯಗಳ ಸರಳೀಕರಣ ವಿಧಾನ ಕೇಳಿಕೊಂಡು ತಮ್ಮ ಶಾಲಾ ಮಕ್ಕಳಿಗೂ ಬೋಧಿಸುತ್ತಿರುವುದು ನನಗೆ ಅತ್ಯಂತ ಸಂತಹ ತಂದಿದೆ ಎಂದು ಹೇಳುತ್ತಾರೆ.

ಈಗಿನ ಮಕ್ಕಳು ಆನ್‌ಲೈನ್ ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. ಆದರೆ ಆನ್‌ಲೈನ್ ಶಿಕ್ಷಣ ಮಕ್ಕಳ ಮೇಲೆ ಪ್ರಭಾವಶಾಲಿಯಾಗಿ ಪರಿಣಾಮ ಬೀರದು. ಹೀಗಾಗಿ ರಚನಾತ್ಮಕ ಕಲಾಕೃತಿ ಮೂಲಕ ಮಕ್ಕಳಿಗೆ ಪಾಠ ಹೇಳುತ್ತಿದ್ದೇನೆ. ಇದರಿಂದ ಮಕ್ಕಳಿಗೆ ಗ್ರಹಣ ಶಕ್ತಿ ಹೆಚ್ಚಾಗಲಿದೆ. ಸುಮಾರು 12 ಲಕ್ಷ ಮೌಲ್ಯದ ಗೊಂಬೆಗಳು ನನ್ನ ಬಳಿಯಿವೆ. ನಿವೃತ್ತಿಯ ನಂತರ ಮಕ್ಕಳು ಹಾಗೂ ಗೊಂಬೆಗಳ ಜೊತೆ ಕಾಲ ಕಳೆಯುವುದು ನನಗೆ ಸಂತೋಷ ಎಂದು ಶ್ಯಾಮಣ್ಣ ಕುಲಕರ್ಣಿ ಹರ್ಷ ವ್ಯಕ್ತಪಡಿಸುತ್ತಾರೆ.

ಬೊಂಬೆಗಳು, ಕಲಿಕೋಪಕರಣಗಳು ಮಕ್ಕಳ ಕಲಿಕೆಯಲ್ಲಿ ಉತ್ತಮ ಪಾತ್ರ ನಿರ್ವಹಿಸುತ್ತವೆ. ಇದರ ಫಲಿತಾಂಶ ವಿದ್ಯಾರ್ಥಿಗಳ ಜೀವನದ ಪ್ರತಿ ಹೆಜ್ಜೆ, ತೀರ್ಮಾನದಲ್ಲೂ ಪ್ರತಿಫಲಿಸಿ ಉತ್ತಮ ಮಾರ್ಗ ಕಂಡುಕೊಳ್ಳುವಲ್ಲಿ ಸಹಾಯಕವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳಲ್ಲಿನ ಚಿಂತನಶೀಲತೆಯನ್ನು ಬೆಳೆಸಿ, ಸೃಜನಶೀಲ ಅಭಿವ್ಯಕ್ತಿ ಮತ್ತು ಜ್ಞಾನವನ್ನು ಜಾಗೃತಿಗೊಳಿಸುವ ಸಂಕಲ್ಪ ಮಾಡಿರುವ ನಾನು, ನನ್ನ ಕೈಕಾಲುಗಳಲ್ಲಿ ಶಕ್ತಿ ಇರುವ ತನಕ ಈ ಕೆಲಸ ಮಾಡುತ್ತೇನೆ ಎನ್ನುತ್ತಾರೆ.

ತರಗತಿಗಳಲ್ಲಿ ವಿಭಿನ್ನ ಮನಸ್ಥಿತಿಯ ವಿದ್ಯಾರ್ಥಿಗಳು ಕಾಣಸಿಗುತ್ತಾರೆ. ಹಾಗಾಗಿ ವಿದ್ಯಾರ್ಥಿಗಳಿಗೆ ಅವರಲ್ಲಿರುವ ಸಾಮರ್ಥ್ಯ, ಆಸಕ್ತಿ ಕ್ಷೇತ್ರಗಳನ್ನು ಅರಿತು ಹುರಿದುಂಬಿಸುವ ಅವರ ಗುಣ ಅವಿಸ್ಮರಣೀಯವಾದುದು. ಮೌಲ್ಯಯುತವಾದ ಪರಿಶ್ರಮದ ಅಡಿಪಾಯದ ಅಗತ್ಯವನ್ನು ಮಕ್ಕಳಲ್ಲಿ ಮೂಡಿಸಿ, ಬೆಳೆಸುವ ಕಾರ್ಯದೊಂದಿಗೆ, ವಿದ್ಯಾರ್ಥಿಗಳಿಗೆ ನೀತಿಯುತ ಪ್ರಜ್ಞೆ, ಸಾಮಾಜಿಕ ಜವಾಬ್ದಾರಿಯ ಅರಿವನ್ನು ಶ್ಯಾಮಣ್ಣ ಮೇಷ್ಟ್ರು ಮೂಡಿಸುತ್ತಿದ್ದಾರೆ. ಈ ಶ್ಯಾಮಣ್ಣ ಮೇಷ್ಟ್ರನ್ನು 8970358483 ಮೂಲಕ ಸಂಪರ್ಕಿಸಬಹುದು.





Downloaded From:www.kpscvaani.com




## ಯಶಸ್ವಿಯಾದ

# ಎಲೆಕ್ಟ್ರಿಕ್ ವಾಹನ ಅಭಿಯಾನ

**ಪರಿಸರ ಸಂರಕ್ಷಣೆ ಹಿತದೃಷ್ಟಿಯಿಂದ ನಾಗರಿಕರಲ್ಲಿ ಎಲೆಕ್ಟ್ರಿಕ್ ವಾಹನ ಬಳಕೆಯನ್ನು ಉತ್ತೇಜಿಸಲು ಸರ್ಕಾರವು ಏರ್ಪಡಿಸಿದ್ದ ಎಲೆಕ್ಟ್ರಿಕ್ ವಾಹನ ಅಭಿಯಾನವು ಯಶಸ್ವಿಯಾಗಿ ಜರುಗಿತು.**

ಎಚ್. ಮಾರುತಿ

ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಉತ್ತೇಜನ ನೀಡಲು ದೇಶದಲ್ಲೇ ಮೊದಲ ಬಾರಿಗೆ ರಾಜ್ಯ ಸರಕಾರ ಇತ್ತೀಚೆಗೆ **ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ವಾಹನ ಅಭಿಯಾನ–2022** ಆಯೋಜಿಸಿತ್ತು. ಅರಮನೆ ಅವರಣದಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ಹಮ್ಮಿಕೊಂಡಿದ್ದ ಇವಿ ಅಭಿಯಾನಕ್ಕೆ ಅಭೂತ ಪೂರ್ವ ಪ್ರತಿಕ್ರಿಯೆ ವ್ಯಕ್ತವಾಯಿತು.

ಈ ಅಭಿಯಾನದಲ್ಲಿ ಎಲೆಕ್ಟ್ರಿಕ್ ಟ್ರ್ಯಾಕ್ಟರ್‌ನಿಂದ ಹಿಡಿದು ಮಡಚಿಡಬಹುದಾದ ಇ ಬೈಸಿಕಲ್ ತಯಾರಿಸುವ ದೇಶದ ಪ್ರತಿಷ್ಠಿತ ನೂರಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದವು. ಎಲೆಕ್ಟ್ರಿಕ್ ದ್ವಿಚಕ್ರ, ತಿಚಕ್ರ ಹಾಗೂ ಕಾರು ತಯಾರಿಕಾ ಕಂಪನಿಗಳು, ಬ್ಯಾಟರಿ ಮತ್ತಿತರ ಉಪ ಉತ್ಪನ್ನಗಳನ್ನು ತಯಾರಿಸುವ ಕಂಪನಿಗಳು ಮತ್ತು ಚಾರ್ಜಿಂಗ್ ವ್ಯವಸ್ಥೆ ಕಲ್ಪಿಸುವ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿದವು. ಈ ಎಕ್ಸ್ ಪೋ ವೀಕ್ಷಿಸಿದ ನೂರಾರು ನಾಗರಿಕರು ತಮ್ಮ ಮುಂದಿನ ವಾಹನ ಇವಿಯೇ ಆಗಿರುತ್ತದೆ ಎಂದು ನಿರ್ಧರಿಸಿದ್ದು ಅಭಿಯಾನದ ಯಶಸ್ಸನ್ನು ಬಿಂಬಿಸುತ್ತದೆ.

ಅಭಿಯಾನವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು “ಇಂಧನ ಆಧಾರಿತ ವಾಹನಗಳ ಬೆಲೆಗಿಂತ ಎಲೆಕ್ಟ್ರಿಕ್ ವಾಹನಗಳ ಬೆಲೆ ಹೆಚ್ಚಿರುವುದರಿಂದ ಜನಸಾಮಾನ್ಯರಿಗೆ ಇವಿ ವಾಹನಗಳನ್ನು ಖರೀದಿಸಲು ಕಷ್ಟವಾಗಬಹುದು. ಆದ್ದರಿಂದ ಎಲೆಕ್ಟ್ರಿಕ್ ವಾಹನಗಳ ಬೆಲೆ ಇಳಿಸಲು ಎಲೆಕ್ಟ್ರಿಕ್ ವಾಹನಗಳ ಉತ್ಪಾದಕರು ಚಿಂತನೆ ನಡೆಸಬೇಕು ಎಂದರು. ವಾಹನಗಳ



Downloaded From:www.kpscvaani.com



ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಚಾರ್ಜಿಂಗ್ ಸ್ಟೇಷನ್‌ಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದ್ದು, ಅದಕ್ಕೆ ರಾಜ್ಯ ಸರಕಾರ ಎಲ್ಲ ರೀತಿಯ ಪ್ರೋತ್ಸಾಹ ನೀಡಲಿದೆ" ಎಂಬ ಭರವಸೆ ನೀಡಿದರು.

"ಪರಿಸರ ಸಂರಕ್ಷಣೆಗಾಗಿ ಸಂಪ್ರದಾಯಿಕ ಇಂಧನ ಬಳಕೆಯ ವಾಹನಗಳನ್ನು ಕಡಿಮೆ ಮಾಡಬೇಕು. ಈ ನಿಟ್ಟಿನಲ್ಲಿ ಹಲವು ದಶಕಗಳಿಂದ ಸಂಶೋಧನೆಗಳು ನಡೆಯುತ್ತಿವೆ. ಇಂಧನ ಬಳಕೆ ಹೆಸರಿನಲ್ಲಿ ಪರಿಸರವನ್ನು ವಿನಾಶದ ಅಂಚಿನತ್ತ ಕೊಂಡೊಯ್ಯಬಾರದು. ಪಳೆಯುಳಿಕೆ ಇಂಧನ ಮೂಲಗಳನ್ನು ಕಡಿಮೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಇವಿ ಪ್ರಮುಖ ಪಾತ್ರ ವಹಿಸುತ್ತಿದೆ. ವಿದ್ಯುತ್ ಅನ್ನು ಸ್ಟೋರೇಜ್ ಮಾಡಿ ಬ್ಯಾಟರಿಗಳ ಮೂಲಕ ಬಳಕೆ ಮಾಡುವಂತಾದರೆ ಎಲೆಕ್ಟ್ರಿಕ್ ವಾಹನಗಳ ಬಳಕೆ ಸುಲಭವಾಗುತ್ತದೆ" ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಎಲೆಕ್ಟ್ರಿಕ್ ವಾಹನಗಳಲ್ಲಿ ಬಳಕೆ ಮಾಡುವ ಬ್ಯಾಟರಿ ಮತ್ತು ಮೋಟಾರ್‌ಗಳ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು ಎಂದು ಕರೆ ನೀಡಿದ ಮುಖ್ಯಮಂತ್ರಿಗಳು ಸರಕಾರಿ ಬಸ್‌ಗಳಿಗೆ ಎಲೆಕ್ಟ್ರಿಕ್ ಜೋಡಣೆ ಮಾಡಲು ಈಗಾಗಲೇ ನಿರ್ಣಯ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಗೆ ಹೆಚ್ಚು ಎಲೆಕ್ಟ್ರಿಕ್ ಬಸ್‌ಗಳನ್ನು ಒದಗಿಸಲಾಗುತ್ತದೆ. ಭವಿಷ್ಯದಲ್ಲಿ ಮಲ್ಟಿ ಆಕ್ಸೆಲ್ ಮತ್ತು ಹೆವಿ ಟ್ರಕ್‌ಗಳಿಗೂ ಎಲೆಕ್ಟ್ರಿಕ್ ಬಳಕೆ ಮಾಡುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ವಾಹನೋದ್ಯಮದಲ್ಲಿ ಎಲೆಕ್ಟ್ರಿಕಲ್ ವಾಹನಗಳು ಕ್ರಾಂತಿಕಾರಕ ಬದಲಾವಣೆಯನ್ನು ತರುವುದರಲ್ಲಿ ಅಚ್ಚರಿಯಿಲ್ಲ ಎಂದು ಮುಖ್ಯಮಂತ್ರಿಗಳು ಅಭಿಪ್ರಾಯಪಟ್ಟಿದ್ದಾರೆ.

ಇವಿ ಅಭಿಯಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಇಂಧನ ಸಚಿವ ವಿ. ಸುನಿಲ್ ಕುಮಾರ್ "2025ರ ವೇಳೆಗೆ 5 ಲಕ್ಷ ಇವಿ ವಾಹನಗಳು ರಸ್ತೆಗೆ ಇಳಿಯಲಿವೆ ಎಂದು ನಿರೀಕ್ಷಿಸಲಾಗಿದ್ದು, ಸರ್ಕಾರವು ಚಾರ್ಜಿಂಗ್ ಸ್ಟೇಷನ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ನಿರ್ಧರಿಸಿದೆ. ವಾಹನಗಳ ಸಂಖ್ಯೆಗೆ ಅನುಗುಣವಾಗಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವ ಅವಶ್ಯಕತೆಯಿದ್ದು, ಪ್ರತಿ 500 ರಿಂದ 1000 ಮೀಟರ್‌ಗೆ ಒಂದರಂತೆ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಲು ನಿರ್ಧರಿಸಲಾಗಿದೆ" ಎಂದು ತಿಳಿಸಿದರು.

**60 ದಿನಗಳಲ್ಲಿ 1008 ಚಾರ್ಜಿಂಗ್ ಸ್ಟೇಷನ್ ಸ್ಥಾಪನೆ**

ಮುಂದಿನ ಎರಡು ತಿಂಗಳಲ್ಲಿ 1008 ಚಾರ್ಜಿಂಗ್ ಸ್ಟೇಷನ್ ನಿರ್ಮಿಸುವ ಗುರಿಯನ್ನು ಹೊಂದಿದ್ದು, ಮುಂಬರುವ ದಿನಗಳಲ್ಲಿ ಹಸಿರು ಇಂಧನಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಎಲೆಕ್ಟ್ರಿಕ್ ವಾಹನ ವಲಯದಲ್ಲಿ ಗರಿಷ್ಠ ಬಂಡವಾಳ ಹೂಡಿಕೆಗೆ ಪೂರಕ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ.

ನಾಗರಿಕರಲ್ಲಿ ಎಲೆಕ್ಟ್ರಿಕ್ ವಾಹನ ಖರೀದಿಯನ್ನು ಉತ್ತೇಜಿಸುವುದು, ಸಾರ್ವಜನಿಕರಿಗೆ ಚಾರ್ಜಿಂಗ್ ಸ್ಟೇಷನ್‌ಗಳ ಮಾಹಿತಿ, ಇವಿ ಕ್ಷೇತ್ರದಲ್ಲಿ ಇತ್ತೀಚಿನ ತಂತ್ರಜ್ಞಾನ ಅಭಿವೃದ್ಧಿ ಕುರಿತು ಚರ್ಚೆ, ವಾಹನ ಉದ್ಯಮಕ್ಕೆ ಮಾರುಕಟ್ಟೆ ವಿಸ್ತಾರ ಹಾಗೂ ಹೊಸ ಮಾದರಿಯ ಇವಿ ವಾಹನಗಳ ಪರಿಚಯ ಮಾಡುವುದು ಈ ಇವಿ ಎಕ್ಸ್ ಪೋ ಉದ್ದೇಶವಾಗಿತ್ತು.

### ವಿಭಾಗ ಮಟ್ಟದಲ್ಲಿ ಇವಿ ಎಕ್ಸ್ ಪೋ

ಬೆಂಗಳೂರಿನಲ್ಲಿ ಯಶಸ್ವಿಯಾದ ಇವಿ ಎಕ್ಸ್ ಪೋದಿಂದ ಪ್ರೇರಣೆ ಪಡೆದ ಸರಕಾರ ಎಲೆಕ್ಟ್ರಿಕ್ ವಾಹನಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವಿಭಾಗ ಮಟ್ಟದಲ್ಲೂ ಇವಿ ಎಕ್ಸ್ ಪೋ ಹಮ್ಮಿಕೊಳ್ಳಲು ನಿರ್ಧರಿಸಿದೆ. ಆರಂಭದಲ್ಲಿ ಮಂಗಳೂರು, ಹುಬ್ಬಳ್ಳಿ, ಬೆಳಗಾವಿ ಮತ್ತು ಕಲಬುರಗಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ಅಭಿಯಾನ ನಿರಂತರವಾಗಿ ನಡೆಯಲಿದ್ದು ಇತರ ನಗರ ಪ್ರದೇಶಗಳಿಗೂ ವಿಸ್ತರಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ.

### ಚಾರ್ಜಿಂಗ್ ಸ್ಟೇಷನ್‌ಗೆ ಆರು ಕಂಪನಿಗಳ ಜತೆ ಒಪ್ಪಂದ

ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪನೆ ಮಾಡುವ ಕುರಿತು ಬೆಸ್ಕಾಂ ಆರು ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಈ ಕಂಪನಿಗಳು ಸ್ಥಳಾವಕಾಶವನ್ನು ಒದಗಿಸುತ್ತವೆ. ಬೆಸ್ಕಾಂ ತನ್ನ ವೆಚ್ಚದಲ್ಲಿ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಿ ನಿರ್ವಹಿಸುತ್ತದೆ. ಜಾಗದ ಮಾಲೀಕರಿಗೆ ಬರುವ ಆದಾಯದಲ್ಲಿ ಹಂಚಿಕೆ ಮಾಡಲಾಗುತ್ತದೆ. ಬೈಕ್ ಕೆಫೆ, ಮೈಲ್ ಬಾರ್ಕ್, ಬೋಲ್ಟ್, ಬೆನ್‌ಎಸ್‌ಸಿಎಲ್,ಮೈ ಇವಿ ಸ್ಟೋರ್, ಎಲ್‌ಎಲ್‌ಪಿ, ಚಾಮುಂಡಿ ಹೋಟೆಲ್ ಪ್ರೈ ಲಿ. ಕಂಪನಿಗಳು ಚಾರ್ಜಿಂಗ್ ಸ್ಟೇಷನ್ ಸ್ಥಾಪನೆಯ ಒಪ್ಪಂದಕ್ಕೆ ಸಹಿ ಹಾಕಿವೆ.

2025 ವೇಳೆಗೆ ಬೆಂಗಳೂರಿನಲ್ಲಿ ಅಂದಾಜು 5 ಲಕ್ಷ ಎಲೆಕ್ಟ್ರಿಕ್ ವಾಹನಗಳು ರಸ್ತೆಗಿಳಿಯುವ ನಿರೀಕ್ಷೆ ಇದೆ. ಹೀಗಾಗಿ ಎಲೆಕ್ಟ್ರಿಕ್ ವಾಹನಗಳ ಸಂಖ್ಯೆಗೆ ಅನುಗುಣವಾಗಿ ಚಾರ್ಜಿಂಗ್ ಸ್ಟೇಷನ್ ಮತ್ತಿತರ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಬೆಸ್ಕಾಂ ಎಲ್ಲ ಪ್ರಯತ್ನಗಳನ್ನು


Downloaded From:www.kpscvaani.com




ನಡೆಸುತ್ತಿದೆ. ಬೆಸ್ಕಾಂ ಬೃಹತ್ ಪ್ರಮಾಣದಲ್ಲಿ ಎಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್‌ಗಳನ್ನು ನಿರ್ವಹಿಸುತ್ತಿರುವ ದೇಶದ ಪ್ರಪ್ರಥಮ ಸರಕಾರಿ ಸ್ವಾಮ್ಯದ ವಿದ್ಯುತ್ ವಿತರಣಾ ಕಂಪನಿ ಎಂಬ ಹೆಗ್ಗಳಿಕೆಗೆ ಭಾಜನವಾಗಿದೆ. ಬೆಸ್ಕಾಂ ಭವಿಷ್ಯದಲ್ಲಿ ಪ್ರತಿ ಒಂದು ಕಿ.ಮಿ. ವ್ಯಾಪ್ತಿಗೆ ಒಂದು ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸುವ ಗುರಿ ಹೊಂದಿದೆ.

**ಗಮನ ಸೆಳೆದ ಇವಿ ವಾಹನಗಳ ರ‍್ಯಾಲಿ**

ಇವಿ ವಾಹನಗಳತ್ತ ಸಾರ್ವಜನಿಕರ ಗಮನವನ್ನು ಸೆಳೆಯಲು ಬೆಸ್ಕಾಂ ಎಲೆಕ್ಟ್ರಿಕ್ ವಾಹನಗಳ ರ‍್ಯಾಲಿ ಹಮ್ಮಿಕೊಂಡಿತ್ತು. ವಿಧಾನಸೌಧದಿಂದ ಎಕ್ಸ್ ಪೋ ನಡೆಯುತ್ತಿದ್ದ ಅರಮನೆ ಮೈದಾನದವರೆಗೆ ನಡೆದ ಈ ರ‍್ಯಾಲಿಯನ್ನು ಸಚಿವ ಸುನಿಲ್ ಕುಮಾರ್ ಉದ್ಘಾಟಿಸಿದರು. ಸ್ವತಃ ಇವಿ ದ್ವಿಚಕ್ರ ವಾಹನ ಚಲಾಯಿಸಿದ ಸಚಿವರು ಈ ಎಕ್ಸ್ ಪೋದಿಂದ ಉತ್ಪಾದಕರು, ಪೂರೈಕೆದಾರರು ಮತ್ತು ಗ್ರಾಹಕರನ್ನು ಒಂದೇ ವೇದಿಕೆಗೆ ಕರೆ ತರಲು ಸಹಾಯಕವಾಗಿದೆ. ಮುಂದೆಯೂ ಇವಿ ವಾಹನಗಳ ಉತ್ತೇಜನಕ್ಕೆ ಎಲ್ಲ ರೀತಿಯ ಪ್ರೋತ್ಸಾಹ ನೀಡಲಾಗುವುದು ಎಂದು ಭರವಸೆ ನೀಡಿದರು. ಈ ರ‍್ಯಾಲಿಯಲ್ಲಿ ಸುಮಾರು 300 ಇವಿ ವಾಹನಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ಹಸಿರು ಇಂಧನ ಬಳಕೆಯನ್ನು ಉತ್ತೇಜಿಸಲು ಬೆಸ್ಕಾಂ ಈ ರ‍್ಯಾಲಿಯನ್ನು ಹಮ್ಮಿಕೊಂಡಿತ್ತು.

**ಗಮನ ಸೆಳೆದ ಇವಿ ಟ್ರ್ಯಾಕ್ಟರ್**

ಎಕ್ಸ್ ಪೋದಲ್ಲಿ ಹೈದರಾಬಾದ್ ಮೂಲದ ಸೆಲೆಸ್ಟಿಯಲ್ ಇ- ಮೊಬಿಲಿಟಿ ಟ್ರ್ಯಾಕ್ಟರ್‌ಗಳು ಗಮನ ಸೆಳೆದವು. ಬ್ಯಾಟರಿ ಮೂಲಕ ಚಲಿಸಬಹುದಾದ ಟ್ರಾಕ್ಟರ್‌ಗಳ ಬಳಕೆಯಿಂದ ಡೀಸೆಲ್ ಬಳಕೆ ಉಳಿತಾಯವಾಗುತ್ತದೆ. ಅಲ್ಲದೆ ನಿರ್ವಹಣಾ ವೆಚ್ಚ ಕಡಿತವಾಗುತ್ತದೆ. ಯಶಸ್ವಿಯಾದರೆ ಈ ಪರಿಸರ ಸ್ನೇಹಿ ವಾಹನ ರೈತರಿಗೆ ವರದಾನವಾಗಲಿದೆ. ಮುಂದಿನ ಮೂರು ತಿಂಗಳಲ್ಲಿ ಇವುಗಳ ಮಾರಾಟ ಆರಂಭವಾಗಲಿದೆ ಎಂದು ಕಂಪನಿ ತಿಳಿಸಿದೆ.

ಈ ಎಲೆಕ್ಟ್ರಿಕ್ ಟ್ರ್ಯಾಕ್ಟರ್ ಪ್ರತಿ ಗಂಟೆಗೆ 25 ಕಿ.ಮಿ. ವೇಗದಲ್ಲಿ ಚಲಿಸಲಿದೆ. ಇದರ ಬೆಲೆ ಸದ್ಯ 6–8 ಲಕ್ಷ ರೂ.ಗೆ ನಿಗಧಿಯಾಗಿದೆ. ಡೀಸೆಲ್ ಟ್ರ್ಯಾಕ್ಟರ್ ಬೆಲೆ 4.5 ರೂ ಲಕ್ಷದಿಂದ 6.5 ಲಕ್ಷ ರೂಗಳ ಆಸುಪಾಸಿನಲ್ಲಿ ಲಭ್ಯವಾಗಲಿದೆ. ಎರಡು ಗಂಟೆ ಚಾರ್ಜಿಂಗ್ ಮಾಡಿದರೆ 6 ಗಂಟೆ ಚಲಾಯಿಸಬಹುದಾಗಿದೆ. 27 ಎಚ್‌ಪಿ ಟ್ರ್ಯಾಕ್ಟರ್‌ಗೆ ಒಂದು ಗಂಟೆಗೆ 2–3 ಲೀ. ಡೀಸೆಲ್ ಬೇಕಾಗುತ್ತದೆ. ಒಂದು ಗಂಟೆ ಓಡಿಸಲು 2 ಲೀಟರ್ ಡೀಸೆಲ್ ಅಂದರೆ 220 ರೂ.ಗಳು ಬೇಕಾಗುತ್ತದೆ. ಆದರೆ ಎಲೆಕ್ಟ್ರಿಕ್ ಟ್ರ್ಯಾಕ್ಟರ್‌ಗೆ ಕೇವಲ 10–12 ರೂ ಸಾಕಾಗುತ್ತದೆ. ಇದರಿಂದ ಅಪಾರ ಪ್ರಮಾಣದ ಹಣ ಮತ್ತು ಡೀಸೆಲ್ ಉಳಿತಾಯವಾಗುತ್ತದೆ. ಜೊತೆಗೆ ಎಲೆಕ್ಟ್ರಿಕ್ ಟ್ರ್ಯಾಕ್ಟರ್‌ಗಳ ನಿರ್ವಹಣೆ ಸುಲಭವಾಗಿದೆ. ಡೀಸೆಲ್ ಟ್ರ್ಯಾಕ್ಟರ್‌ಗಳಿಗೆ ಸಂಕೀರ್ಣ ಉಪಕರಣಗಳ ಅವಶ್ಯಕತೆಯಿದ್ದು, ಇವಿ ಟ್ರ್ಯಾಕ್ಟರ್‌ಗಳಲ್ಲಿ ಕಡಿಮೆ ಉಪಕರಣಗಳ ಬಳಕೆ ಇರುತ್ತದೆ. ಶಬ್ದ ಕಡಿಮೆ ವಾಯು ಮಾಲಿನ್ಯ ಶೂನ್ಯದ ಲಾಭವೂ ಉಂಟು. ಮನೆಯಲ್ಲೇ ಚಾರ್ಜಿಂಗ್ ಮಾಡಿಕೊಳ್ಳಬಹುದು ಇಲ್ಲವೇ ಬ್ಯಾಟರಿ ವಿನಿಮಯ ಮಾಡಿಕೊಳ್ಳುವ ಅವಕಾಶಗಳುಂಟು. ಬ್ಯಾಟರಿ ಬದಲಾಯಿಸುವುದು ತುಂಬಾ ಸುಲಭ. ಕೆಲವೇ ನಿಮಿಷಗಳಲ್ಲಿ ಬದಲಾಯಿಸುವಂತೆ ವಿನ್ಯಾಸ ಮಾಡಲಾಗಿದೆ.

ಒಟ್ಟಿನಲ್ಲಿ ದೇಶದಲ್ಲೇ ಮೊದಲ ಬಾರಿಗೆ ರಾಜ್ಯ ಸರ್ಕಾರವು ಇವಿ ನೀತಿಯನ್ನು ಜಾರಿಗೊಳಿಸಿದೆ. ಈ ಇವಿ ಅಭಿಯಾನಕ್ಕೆ ಬೆಸ್ಕಾಂ ಅನ್ನು ನೋಡಲ್ ಏಜೆನ್ಸಿಯಾಗಿ ನೇಮಕ ಮಾಡಲಾಗಿದ್ದು, ಉತ್ತಮ ಕೆಲಸ ಮಾಡುತ್ತಿದೆ. ಬ್ಯಾಟರಿ ವಿನಿಮಯ ಹೆಚ್ಚಳವಾದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ದೇಶದಲ್ಲೇ ಮಾಹಿತಿ ತಂತ್ರಜ್ಞಾನ ಸೇರಿದಂತೆ ಹಲವಾರು ವಿಷಯಗಳಲ್ಲಿ ಬೆಂಗಳೂರು ನಗರವು ಖ್ಯಾತಿಯನ್ನು ಗಳಿಸುತ್ತಿದೆ. ಈಗ ದೇಶದಲ್ಲೇ ಮೊದಲ ಬಾರಿಗೆ ಸಾರ್ವಜನಿಕ ಇವಿ ಸ್ಟೇಷನ್‌ಗಳನ್ನು ಸ್ಥಾಪಿಸುವ ಮೂಲಕ ಕರ್ನಾಟಕ ರಾಜ್ಯವು ಮಹತ್ತರ ಹೆಜ್ಜೆಯನ್ನಿಟ್ಟಿದೆ.

**ಮಡಚಿಡಬಹುದಾದ ಬೈಕ್ಸ್**

ಅಹಮದಾಬಾದ್ ಮೂಲದ ಸ್ವಿಚ್ ಬೈಕ್ಸ್ ಕಂಪನಿಯ ಮಡಚಿಡಬಹುದಾದ ಬೈಕ್‌ಗಳು ವೀಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿಯಾದವು. ಈ ಕಂಪನಿಯು ಮೂರು ಮಾದರಿಯ ಮಡಚಿಡಬಹುದಾದ ಬೈಕ್‌ಗಳನ್ನು ವಿನ್ಯಾಸಗೊಳಿಸಿದೆ. ಉತ್ತಮ ಗುಣಮಟ್ಟದ ಬ್ಯಾಟರಿ ವ್ಯವಸ್ಥೆ ಹೊಂದಿದ್ದು, ಪ್ರತಿ ಗಂಟೆಗೆ 40–110 ಕಿಮೀ. ವೇಗದಲ್ಲಿ ಚಲಿಸಲಿವೆ. ಇದರ ಬೆಲೆ 60,000 ರೂಗಳಿಂದ 1.1 ಲಕ್ಷ ರೂ.ಗಳು.



Downloaded From:www.kpscvaani.com

# ಸುಲಲಿತ ವ್ಯವಹಾರಗಳ ಶ್ರೇಯಾಂಕದಲ್ಲಿ ಕರ್ನಾಟಕಕ್ಕೆ ಅಗ್ರಸ್ಥಾನ

**ಸುಲಲಿತ ವ್ಯವಹಾರಗಳ ಶ್ರೇಯಾಂಕದಲ್ಲಿ 17ನೇ ಸ್ಥಾನದಿಂದ ಟಾಪ್ ಒನ್ ಅಚೀವರ್ ಆಗಿ ಕರ್ನಾಟಕ ರಾಜ್ಯವು ಹೊರಹೊಮ್ಮಿದೆ.**



ಟಿ. ಅನಿಲ್

ಸುಲಲಿತ ವ್ಯವಹಾರ (ease of doing business) ಕ್ಕೆ ಸಂಬಂಧಿಸಿದಂತೆ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ಬಿಡುಗಡೆ ಮಾಡಿರುವ ಶ್ರೇಯಾಂಕ ಪಟ್ಟಿಯಲ್ಲಿ ಕರ್ನಾಟಕ ಅಗ್ರಸ್ಥಾನ ಪಡೆದುಕೊಂಡಿದೆ.

2020ರ ಸೆಪ್ಟೆಂಬರ್‌ನಲ್ಲಿ ಬಿಡುಗಡೆಯಾಗಿದ್ದ ಕಳೆದ ಸಾಲಿನ ಶ್ರೇಯಾಂಕ ಪಟ್ಟಿಯಲ್ಲಿ 17ನೇ ಸ್ಥಾನದಲ್ಲಿದ್ದ ಕರ್ನಾಟಕ ಈಗ, "ಟಾಪ್ ಅಚೀವರ್" ಆಗಿ ಹೊರಹೊಮ್ಮಿರುವುದು ವಿಶೇಷ.

2020ರ ವಹಿವಾಟು ಸುಧಾರಣೆ ಕ್ರಿಯಾ ಯೋಜನೆಯ (ಎಸ್‌ಬಿಆರ್‌ಎಪಿ) ಅಡಿಯಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಾರ್ಷಿಕ ಸುಧಾರಣಾ ಕ್ರಮಗಳ ಪರಿಶೀಲನಾ ವರದಿಯು ಜೂನ್ 30 ರಂದು ಬಿಡುಗಡೆಯಾಗಿದೆ.

ಕಳೆದ ವರ್ಷ, ಡಿಪಿಐಐಟಿ ಸೂಚಿಸಿದ್ದ 187 ಸುಧಾರಣಾ ಕ್ರಮಗಳಲ್ಲಿ ಶೇ.100ರಷ್ಟು ಅನುಷ್ಠಾನಗೊಳಿಸಿದ್ದರೂ, ಕರ್ನಾಟಕ 2019 ರಲ್ಲಿ 17ನೇ ಸ್ಥಾನಕ್ಕೆ ಕುಸಿದಿತ್ತು. ಹಲವು ಸುಧಾರಣಾ ಕ್ರಮಗಳ ಅನುಷ್ಠಾನದ ಜತೆಗೆ, ರಾಜ್ಯದ 30ಕ್ಕೂ ಹೆಚ್ಚು ಇಲಾಖೆಗಳ ನಡುವಿನ ಸಮನ್ವಯತೆ ಮತ್ತು ಪೂರಕ ಪ್ರಯತ್ನಗಳಿಂದ ಪ್ರಸಕ್ತ ಸಾಲಿನಲ್ಲಿ ರಾಜ್ಯ ಈ ಶ್ರೇಣಿಗೆ ಏರಲು ಸಾಧ್ಯವಾಗಿದೆ.

ಆಂಧ್ರ ಪ್ರದೇಶ, ಗುಜರಾತ್, ಹರಿಯಾಣ, ಪಂಜಾಬ್, ತಮಿಳುನಾಡು, ತೆಲಂಗಾಣ ಸಹ "ಅಗ್ರ ಸಾಧಕ" ರಾಜ್ಯಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ.

ದೇಶದ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಮಿಕರ ನಿಯಂತ್ರಣ ಕಾಯ್ದೆ, ಪರಿಸರ ಪರವಾನಗಿ, ಪ್ರಕ್ರಿಯೆಗಳ ಸರಳೀಕರಣ, ಬಳಕೆದಾರರ ಸಂಪರ್ಕ, ಪ್ರತಿಕ್ರಿಯೆ, ಕುಂದುಕೊರತೆಗಳ ನಿವಾರಣೆ ಸೇರಿದಂತೆ ವಿವಿಧ ಅಂಶಗಳ ಸಮೀಕ್ಷೆ ನಡೆಸುವ ಮೂಲಕ ಡಿಪಿಐಐಟಿ ಶ್ರೇಯಾಂಕವನ್ನು ನಿರ್ಧರಿಸಲಾಗುತ್ತದೆ.

"ರಾಜ್ಯದಲ್ಲಿ ಸುಲಲಿತ ವ್ಯವಹಾರಕ್ಕೆ ಪೂರಕವಾದ ಸುಧಾರಣಾ ಕ್ರಮಗಳ ಅನುಷ್ಠಾನವನ್ನು ಖಾತ್ರಿಪಡಿಸುವ ನೋಡಲ್ ಏಜೆನ್ಸಿ 'ಕರ್ನಾಟಕ ಉದ್ಯೋಗ ಮಿತ್ರ' ಡಿಪಿಐಐಟಿ ಮಾಡಿದ ಶಿಫಾರಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವ ಫಲವಾಗಿ ರಾಜ್ಯ ಇಂದು ಅಗ್ರ ಶ್ರೇಯಾಂಕ ಪಡೆಯಲು ಸಾಧ್ಯವಾಗಿದೆ."

–ಡಾ.ಇ ವಿ ರಮಣರೆಡ್ಡಿ,
ಕೈಗಾರಿಕೆ ಇಲಾಖೆಯ ಹೆಚ್ಚುವರಿ
ಮುಖ್ಯ ಕಾರ್ಯದರ್ಶಿ

ಕೋವಿಡ್ ಸಾಂಕ್ರಾಮಿಕದ ನಡುವೆಯೂ ರಾಜ್ಯದಲ್ಲಿ ಉದ್ಯಮ ಸ್ನೇಹಿ ಕ್ರಮಗಳ ಜಾರಿ ಮತ್ತು ಕೈಗಾರಿಕಾ ಪೂರಕ ಸೌಲಭ್ಯ ಒದಗಿಸುವಲ್ಲಿ 'ಕರ್ನಾಟಕ ಉದ್ಯೋಗ ಮಿತ್ರ' ಸಫಲವಾಗಿದೆ. ವಿವಿಧ ಇಲಾಖೆಗಳ ನಡುವೆ ಸಮನ್ವಯತೆ ಸಾಧಿಸುವ ಮೂಲಕ ರಾಜ್ಯ ಅಗ್ರ ಶ್ರೇಯಾಂಕ ಪಡೆಯುವಂತಾಗಿದೆ ಎಂದು ಕೈಗಾರಿಕಾಭಿವೃದ್ಧಿ ಆಯುಕ್ತರಾದ ಗುಂಜನ್ ಕೃಷ್ಣ ಅವರು ಅಭಿಪ್ರಾಯಪಟ್ಟಿದ್ದಾರೆ.

ಸುಲಲಿತ ವ್ಯವಹಾರಗಳ ಶ್ರೇಯಾಂಕದಲ್ಲಿ ಮೊದಲ ಸ್ಥಾನವನ್ನು ಪಡೆದಿರುವುದರಿಂದಾಗಿ ನಮ್ಮ ರಾಜ್ಯದಲ್ಲಿ ಹೆಚ್ಚಿನ ಕೈಗಾರಿಕೆಗಳು ಸ್ಥಾಪನೆಯಾಗಲಿದೆ. ಇದು ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಪೂರಕವಾಗಲಿದೆ.

"ಸುಲಲಿತ ವ್ಯವಹಾರಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಅಫಿಡವಿಟ್ ಬೇಸ್ಡ್ ಕ್ಲಿಯರೆನ್ಸ್ ಯೋಜನೆಯನ್ನು ಜಾರಿಗೊಳಿಸಿದ್ದೇವೆ. ಕೈಗಾರಿಕಾ ಸೌಲಭ್ಯ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಕೈಗಾರಿಕೆಗಳ ಸ್ಥಾಪನೆಗೆ ಇದ್ದ ತೊಡಕು ನಿವಾರಿಸಲಾಗಿದೆ. ನಮ್ಮ ಸರ್ಕಾರ ಸುಲಲಿತ ವ್ಯವಹಾರಕ್ಕೆ ಹೆಚ್ಚು ಒತ್ತು ನೀಡಿರುವುದರಿಂದ ಹೂಡಿಕೆದಾರರು ನಮ್ಮ ರಾಜ್ಯದಲ್ಲಿ ಹೆಚ್ಚು ಬಂಡವಾಳ ಹೂಡುತ್ತಿದ್ದಾರೆ."

–ಡಾ. ಮುರುಗೇಶ್ ಆರ್. ನಿರಾಣಿ,
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು



Downloaded From:www.kpscvaani.com

ಯೋಜನೆ

# ಗೋವುಗಳ ಸಂರಕ್ಷಣೆಗಾಗಿ ಪುಣ್ಯಕೋಟಿ ದತ್ತು ಯೋಜನೆ



**ಗೋಹತ್ಯೆ ನಿಷೇಧ ಕಾಯಿದೆ ಜಾರಿ ನಂತರ ದೇಶದಲ್ಲೇ ಮೊದಲ ಬಾರಿಗೆ ರಾಜ್ಯ ಸರ್ಕಾರವು ಗೋವುಗಳ ಸಂರಕ್ಷಣೆಗಾಗಿ ಪುಣ್ಯಕೋಟಿ ದತ್ತು ಯೋಜನೆಯನ್ನು ಜಾರಿಗೊಳಿಸಿದೆ.**

ಡಾ. ಪಿ. ವಿ. ವರ ಪ್ರಸಾದ್ ರಾವ್

**ಗೋ**ವನ್ನು ವಿಶ್ವದ ತಾಯಿ ಎಂದು ಬಣ್ಣಿಸಲಾಗಿದೆ. ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ಗೋವು ಅವಿಭಾಜ್ಯ ಅಂಗವಾಗಿದೆ. ಗೋವಿನ ಪೂಜೆ ಮಾಡುವುದು ಭಾರತೀಯರ ಸಂಸ್ಕೃತಿ. ಹಾಗಾಗಿ ಗೋವಿನ ಸಂರಕ್ಷಣೆ ಮಾಡಿದರೆ ಕೃಷಿ ಹಾಗೂ ಕೃಷಿ ಕುಟುಂಬದ ಸಂರಕ್ಷಣೆ ಮಾಡಿದಂತೆ.

'ಗಾವೋ ರಕ್ಷತಿ ರಕ್ಷಿತಃ', ನಾವು ಗೋವುಗಳನ್ನು ರಕ್ಷಿಸಿದರೆ ಅವು ನಮ್ಮನ್ನು ರಕ್ಷಿಸುತ್ತವೆ ಎನ್ನುವುದು ಹಿಂದು ಧರ್ಮದ ನಂಬಿಕೆ. ಅದರಂತೆ ಭಾರತೀಯ ಪರಂಪರೆಯಲ್ಲಿ ಗೋವುಗಳಿಗೆ ದೈವಿಕ ಸ್ಥಾನ ನೀಡಲಾಗಿದ್ದು, ಗೋವುಗಳ ಸಂರಕ್ಷಣೆಗಾಗಿ ಮಠ ಮಾನ್ಯಗಳು, ಸೇವಾ ಸಂಸ್ಥೆಗಳು ಮತ್ತು ಕೆಲ ಗೋ ಶಾಲೆಗಳು ಶ್ರಮಿಸುತ್ತಿವೆ.

ಇದೀಗಾ ರಾಜ್ಯ ಸರಕಾರವು ಗೋ-ಸಂಪತ್ತನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಇಡೀ ದೇಶಕ್ಕೆ ಮಾದರಿಯಾಗಬಲ್ಲ "ಪುಣ್ಯಕೋಟಿ ದತ್ತು ಯೋಜನೆ'ಗೆ ಚಾಲನೆ ನೀಡಿದೆ. ಸರ್ಕಾರದ ಈ ಕಾರ್ಯಕ್ರಮದ ಅಡಿಯಲ್ಲಿ ನಮ್ಮ ಗೋವುಗಳನ್ನು ನೋಡಿಕೊಳ್ಳಲು ಮತ್ತು ಗೋಶಾಲೆಗಳನ್ನು ನಿರ್ವಹಿಸುವುದಕ್ಕೆ ಸರ್ಕಾರದೊಂದಿಗೆ ಜನರೂ ಸಹ ಕೈಜೋಡಿಸಲು ಅವಕಾಶ ತೆರೆದುಕೊಳ್ಳುತ್ತದೆ. ರಾಜ್ಯ ಸರಕಾರದ



Downloaded From:www.kpscvaani.com

ಈ ಮಹತ್ವಾಕಾಂಕ್ಷಿ ಯೋಜನೆಗೆ ಜುಲೈ 28ರಂದು ಅಧಿಕೃತ ಚಾಲನೆ ದೊರಕಿರುವುದರಿಂದ ರಾಜ್ಯದಲ್ಲಿ ಬಿಡಾಡಿ ಗೋವುಗಳ ಸಂರಕ್ಷಣೆಗೆ ಪರಿಹಾರ ದೊರಕಿದಂತ್ತಾಗಿದೆ.

ರಾಜ್ಯದಲ್ಲಿ ಗೋವುಗಳನ್ನು ಗೋಮಾತೆ ಎಂದು ಪೂಜಿಸಲಾಗುತ್ತದೆ. ಗೋವುಗಳ ಸೇವೆ ಪುಣ್ಯದ ಕೆಲಸವೆನ್ನುವ ಭಾವನೆ ನಮ್ಮಲ್ಲಿದೆ. ಈ ಯೋಜನೆಯಿಂದ ಗೋಶಾಲೆ ಹಾಗೂ ಗೋವುಗಳ ನಿರ್ವಹಣೆ ಸಾಧ್ಯವಾಗಲಿದೆ. ವಯಸ್ಸಾದ ಗೋವುಗಳ ನಿರ್ವಹಣೆಗೆ ಪರಿಹಾರ ಒದಗಿಸುವ ಸಕಾರಾತ್ಮಕ ಚಿಂತನೆಯಿಂದ ಈ ಯೋಜನೆಯನ್ನು ಸರ್ಕಾರ ರೂಪಿಸಿದೆ.

"ಗೋಹತ್ಯೆ ನಿರ್ಬಂಧಕ ಕಾಯ್ದೆ"ಯನ್ನು ಜಾರಿ ಮಾಡುವ ಮೂಲಕ ಹೆಸರಾಗಿರುವ ಕರ್ನಾಟಕ ರಾಜ್ಯದ ಪಶು ಸಂಗೋಪನಾ ಇಲಾಖೆ ಇದೀಗಾ ಮತ್ತೊಂದು ಮಹತ್ವದ ಯೋಜನೆಗೆ ಚಾಲನೆ ನೀಡಿದೆ.

ದೇಶದಲ್ಲೇ ಮೊದಲ ಬಾರಿಗೆ ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯಿದೆ ಜಾರಿಯಾದ ನಂತರ ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆಗಳು ಸ್ಥಾಪನೆಯಾಗಿದೆ. ಈಗ ಅದಕ್ಕೆ ಪೂರಕವಾಗುವಂತೆ ಪುಣ್ಯಕೋಟಿ ದತ್ತು ಯೋಜನೆಯನ್ನು ಜಾರಿಗೊಳಿಸಿದ ಮೊದಲ ರಾಜ್ಯ ಎಂದೆನಿಕೊಂಡಿದೆ. 2022-23ರ ಬಜೆಟ್‌ನಲ್ಲಿ ಪುಣ್ಯಕೋಟಿ ದತ್ತು ಯೋಜನೆ ಜಾರಿಗೊಳಿಸುವುದಾಗಿ ಘೋಷಣೆ ಮಾಡಲಾಗಿತ್ತು.

ಪುಣ್ಯಕೋಟಿ ದತ್ತು ಯೋಜನೆಯು ಕರ್ನಾಟಕ ಸರ್ಕಾರದ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪ್ರಮುಖ ಕಾರ್ಯಕ್ರಮವಾಗಿದ್ದು, ನಾಗರಿಕರಿಗೆ ಗೋವುಗಳ ಸೇವೆ ಮಾಡಲು ಗೋವುಗಳನ್ನು ದತ್ತು ತೆಗೆದುಕೊಳ್ಳಲು ಒಂದು ವೇದಿಕೆಯನ್ನು ರಚಿಸುವ ಗುರಿಯನ್ನು ಹೊಂದಿದೆ. ಹಾಗೆಯೇ ಸಾರ್ವಜನಿಕರ ಸಹಕಾರದೊಂದಿಗೆ ಗೋಶಾಲೆಗಳನ್ನು ಆರ್ಥಿಕವಾಗಿ ಸದೃಢಗೊಳಿಸುವುದು ಯೋಜನೆಯ ಉದ್ದೇಶವಾಗಿದೆ.



**ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಹುಟ್ಟುಹಬ್ಬದಂದು ಹನ್ನೊಂದು ಗೋವುಗಳನ್ನು ದತ್ತು ಪಡೆಯುವ ಮೂಲಕ ಗೋವು ಸಂಕುಲದ ಸಂರಕ್ಷಣೆಗೆ ಮುಂದಾಗಿದ್ದಾರೆ.**



ಕರ್ನಾಟಕದಲ್ಲಿ 200 ಕ್ಕೂ ಹೆಚ್ಚು ಖಾಸಗಿ ಮತ್ತು ಸರ್ಕಾರಿ ಗೋಶಾಲೆಗಳಿವೆ. ಈ ಗೋಶಾಲೆಗಳಿಂದ ಅಧಿಕ ಪರಿತ್ಯಕ್ತ ಹಸುಗಳು, ರಕ್ಷಿಸಲ್ಪಟ್ಟ, ವಯಸ್ಸಾದ ಅಥವಾ ಅನಾರೋಗ್ಯಕ್ಕೆ ಒಳಗಾದ ಸುಮಾರು 45,000 ಗೋವುಗಳ ಆರೈಕೆಯನ್ನು ಮಾಡಲಾಗುತ್ತಿದೆ. ಈ ಜಾನುವಾರುಗಳನ್ನು ನೋಡಿಕೊಳ್ಳಲು ಸರ್ಕಾರವು ಪ್ರತಿ ವರ್ಷ ಹಣವನ್ನು ವ್ಯಯಿಸುತ್ತಿದ್ದರೂ, ಹಸುಗಳ ಸಂಪೂರ್ಣ ಕಾಳಜಿಯನ್ನು ಖಚಿತಪಡಿಸಿಕೊಳ್ಳಲು ಸಾರ್ವಜನಿಕರ ಸಹಭಾಗಿತ್ವವು ಅವಶ್ಯಕವಾಗಿದೆ.

ಗೋಶಾಲೆಗಳ ಜಾನುವಾರುಗಳಿಗೆ ಇನ್ನೂ ಹೆಚ್ಚಿನ ಸೌಲಭ್ಯ ಒದಗಿಸುವುದು, ಗೋವುಗಳನ್ನು ಸಂರಕ್ಷಿಸಲು ಸಾರ್ವಜನಿಕರನ್ನು ಪ್ರೇರೇಪಿಸುವುದು, ಗೋಶಾಲೆಗಳನ್ನು ಆರ್ಥಿಕವಾಗಿ ಸದೃಢಗೊಳಿಸುವುದು ಮತ್ತು ಗೋಶಾಲೆಗಳನ್ನು ಸಾರ್ವಜನಿಕರ ಸಹಕಾರದಿಂದ ನಿರಂತರವಾಗಿ ಅಡಚಣೆ ರಹಿತವಾಗಿ ನಡೆಸುವುದು ಯೋಜನೆಯ ಉದ್ದೇಶ.

**ಒಂದು ಗೋವು ದತ್ತು ಪಡೆಯಲು ವಾರ್ಷಿಕ 11 ಸಾವಿರ:**

ಜಾನುವಾರುಗಳ ದತ್ತು

**ಈ ಪುಣ್ಯಕೋಟಿ ದತ್ತು ಯೋಜನೆಯ ಮುಖ್ಯ ಉದ್ದೇಶ:**

- ಈ ಯೋಜನೆಯು ಹಸುಗಳ ಸಂತಾನೋತ್ಪತ್ತಿ ಹೆಚ್ಚಿಸಲು ಮಾತ್ರವಲ್ಲದೆ ದನಗಳ ಹಿಂಡಿನ ಸಂರಕ್ಷಣೆಗೆ ಸಹಾಯವಾಗುತ್ತದೆ.
- ಸರ್ಕಾರಿ ಗೋಶಾಲೆಗಳ ಅಡಿಯಲ್ಲಿ ನಿರ್ಗತಿಕ ಹಸುಗಳು, ಪರಿತ್ಯಕ್ತ ಹಸುಗಳು, ಗಂಡು ಕರುಗಳು, ವೃದ್ಧ ಮತ್ತು ಅನಾರೋಗ್ಯಕ್ಕೆ ತುತ್ತಾಗಿರುವ ಹಸುಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಉದ್ದೇಶ.
- ಪ್ರತಿಯೊಂದು ಹಸುಗಳನ್ನು ಪ್ರತ್ಯೇಕವಾಗಿ ಕಾಳಜಿ ವಹಿಸುವ ಮೂಲಕ ಹೈನುಗಾರಿಕೆ ಉತ್ಪಾದನೆಯನ್ನು ಹೆಚ್ಚಿಸುವುದು.
- ಈ ಯೋಜನೆಯು ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳನ್ನು ಗೋಶಾಲೆಗಳಿಂದ ಗೋವುಗಳನ್ನು ದತ್ತು ಪಡೆಯಲು ಪ್ರೋತ್ಸಾಹಿಸುವುದಲ್ಲದೆ, ಗೋಶಾಲೆಗಳ ಹಸುಗಳಿಗೆ ಉತ್ತಮ ಸೌಕರ್ಯಗಳನ್ನು ಒದಗಿಸಲು ಸಾರ್ವಜನಿಕರನ್ನು ಉತ್ತೇಜಿಸುತ್ತದೆ.


Downloaded From:www.kpscvaani.com



ಗೋವುಗಳನ್ನು ಗೋಮಾತೆ ಎಂದು ಪೂಜಿಸಲಾಗುತ್ತದೆ. ಗೋವುಗಳ ಸೇವೆ ಪುಣ್ಯದ ಕೆಲಸವೆನ್ನುವ ಭಾವನೆ ನಮ್ಮಲ್ಲಿದೆ. ಈ ಯೋಜನೆಯಿಂದ ಗೋಶಾಲೆ ಹಾಗೂ ಗೋವುಗಳ ನಿರ್ವಹಣೆ ಸಾಧ್ಯವಾಗಲಿದೆ. ವಯಸ್ಸಾದ ಗೋವುಗಳ ನಿರ್ವಹಣೆಗೆ ಪರಿಹಾರ ಒದಗಿಸುವ ಸಕಾರಾತ್ಮಕ ಚಿಂತನೆಯಿಂದ ಮತ್ತು ಸಾರ್ವಜನಿಕರಿಗೆ ಪುಣ್ಯಕೋಟಿಯ ಸೇವೆಯಲ್ಲಿ ಅವಕಾಶ ಒದಗಿಸಿಕೊಡುವ ನಿಟ್ಟಿನಲ್ಲಿ ಈ ಯೋಜನೆಯನ್ನು ಸರ್ಕಾರ ರೂಪಿಸಿದೆ. ಸಾರ್ವಜನಿಕರು ಆನ್‌ಲೈನ್ ಮೂಲಕ ರಾಜ್ಯದ ಯಾವುದೇ ಗೋಶಾಲೆಗಳಿಂದ ಗೋವುಗಳನ್ನು ದತ್ತು ಪಡೆದು ತಮ್ಮ ಜನ್ಮದಿನ, ವಿವಾಹ ವಾರ್ಷಿಕೋತ್ಸವ ಮುಂತಾದ ಆಚರಣೆಗಳನ್ನು ಆಚರಿಸಿಕೊಳ್ಳುವಂತೆ ಮನವಿ ಮಾಡುವೆ.

–ಪ್ರಭು. ಬಿ ಚವ್ಹಾಣ್, ಪಶುಸಂಗೋಪನೆ ಸಚಿವರು

ಯೋಜನೆಯಡಿ ಪುಣ್ಯಕೋಟಿ ದತ್ತು ಪೋರ್ಟಲ್‌ನಲ್ಲಿರುವ ಯಾವುದೇ ಗೋಶಾಲೆಯ ಪ್ರತಿ ಜಾನುವಾರಿಗೆ ವಾರ್ಷಿಕ 11 ಸಾವಿರ ರೂ.ಗಳನ್ನು ಪಾವತಿಸಿ ದತ್ತು ಪಡೆಯಬಹುದು. ಅದೇ ರೀತಿ ಜಾನುವಾರುಗಳಿಗಾಗಿ "ಆಹಾರ' (ಫೀಡ್ ಎ ಕೌ) ಯೋಜನೆಯಡಿ ಸಾರ್ವಜನಿಕರು ತಮ್ಮ ಜೀವನದ ವಿಶೇಷ ಸಂದರ್ಭಗಳಲ್ಲಿ ಅಂದರೆ, ಹುಟ್ಟುಹಬ್ಬ, ಮದುವೆ ವಾರ್ಷಿಕೋತ್ಸವ ಇತ್ಯಾದಿಗಳ ಸಂದರ್ಭದಲ್ಲಿ ಪುಣ್ಯಕೋಟಿ ದತ್ತು ಪೋರ್ಟಲ್‌ನಲ್ಲಿರುವ ಯಾವುದೇ ಗೋಶಾಲೆಗಳಲ್ಲಿರುವ ರಾಸುಗಳಿಗೆ ಒಂದು ದಿನಕ್ಕೆ 70 ರೂ.ಗಳಂತೆ ತಮಗೆ ಇಷ್ಟವಾದಷ್ಟು ರಾಸುಗಳಿಗೆ ಆಹಾರಕ್ಕಾಗಿ ವಂತಿಗೆ ನೀಡಲು ಅವಕಾಶ ಕೂಡ ಕಲ್ಪಿಸಲಾಗಿದೆ.

ರಾಜ್ಯದಲ್ಲಿ ಒಟ್ಟು 200ಕ್ಕೂ ಹೆಚ್ಚಿನ ಖಾಸಗಿ ಗೋಶಾಲೆಗಳಲ್ಲಿ ಜಾನುವಾರುಗಳಿಗೆ ಆಶ್ರಯ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ 100 ಸರಕಾರಿ ಗೋಶಾಲೆಗಳನ್ನು ಹಂತಹಂತವಾಗಿ ಪ್ರಾರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಇವುಗಳಲ್ಲಿ



ದೇಶಿತಳಿ, ಮಿಶ್ರತಳಿ ಜಾನುವಾರಗಳು, ನಿರ್ಗತಿಕ, ನಿಶ್ಶಕ್ತ, ವಯಸ್ಸಾದ, ರೋಗಗ್ರಸ್ಥ, ರೈತರು ಸಾಕಲಾಗದೆ ತಂದು ಬಿಡುವ ಜಾನುವಾರುಗಳು, ಗಂಡು ಕರುಗಳು ಮತ್ತು ನ್ಯಾಯಾಲಯ ಹಾಗೂ ಪೊಲೀಸ್ ಠಾಣೆಗಳಿಂದ ಪಡೆದುಕೊಂಡ ಜಾನುವಾರುಗಳಿಗೆ ಆಶ್ರಯ ನೀಡಿ ಪೋಷಿಸಲಾಗುತ್ತದೆ.

ಸಾರ್ವಜನಿಕರು ಈ ಯೋಜನೆಯಲ್ಲಿ ಒಂದು ಹಸುವನ್ನು ದತ್ತು ಪಡೆದುಕೊಳ್ಳುವುದಕ್ಕೆ ಒಬ್ಬ ವ್ಯಕ್ತಿಯು ವಾರ್ಷಿಕ 11 ಸಾವಿರ ರೂ. ಪಾವತಿಸಬೇಕಾಗುತ್ತದೆ. ಅಲ್ಲದೆ 3 ರಿಂದ 5 ವರ್ಷಗಳ ಅವಧಿಗೆ ಕೂಡ ಗೋವನ್ನು ದತ್ತು ಪಡೆದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಮುಖ್ಯವಾಗಿ ಸಾರ್ವಜನಿಕರು ರಾಜ್ಯದ ಯಾವುದೇ ಗೋಶಾಲೆಗಳಿಗೆ ಭೇಟಿ ನೀಡಿ, ಅಥವಾ ಪುಣ್ಯಕೋಟಿ ದತ್ತು ಪೋರ್ಟಲ್ ಮೂಲಕ ದತ್ತು ಪಡೆಯಬಹುದಾಗಿದೆ. ಇನ್ನು ಗೋವುಗಳನ್ನು ದತ್ತು ಪಡೆಯಲು ಸಾಧ್ಯವಾಗದವರು ಗೋಶಾಲೆಗಳಿಗೆ ತಮ್ಮ ಕೈಲಾದಷ್ಟು ಹಣವನ್ನು ದಾನ ಮಾಡಬಹುದು.

ಈ ಯೋಜಯಡಿಯಲ್ಲಿ ಗೋವನ್ನು ದತ್ತು ಪಡೆಯಲು ಆಸಕ್ತಿ ಹೊಂದಿರುವವರು ಗುರುತಿನ ಚೀಟಿ (ಐಡಿ ಕಾರ್ಡ್), ಆಧಾರ್ ಕಾರ್ಡ್ ಮತ್ತು ಮೊಬೈಲ್ ಸಂಖ್ಯೆ ಮುಂತಾದ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ಗೋಶಾಲೆಗಳಿಗೆ ದೇಣಿಗೆ (Donation) ಯೋಜನೆಯಡಿ ಸಾರ್ವಜನಿಕರು ಪುಣ್ಯಕೋಟಿ ದತ್ತು ಪೋರ್ಟಲ್‌ನಲ್ಲಿರುವ ಯಾವುದೇ ಗೋಶಾಲೆಗಳ ಮೂಲಭೂತ ಸೌಕರ್ಯ ಹಾಗೂ ಇತರೆ ವೆಚ್ಚಗಳಿಗಾಗಿ ಕನಿಷ್ಠ ರೂ.10 ರಿಂದ ತಮ್ಮ ಶಕ್ತಿಅನುಸಾರ ಎಷ್ಟು ಬೇಕಾದರೂ ದೇಣಿಗೆ ನೀಡಬಹುದು. ದೇಣಿಗೆ ನೀಡಲು https://punyakoti.karahvs.in ಗೆ ಲಾಗಿನ್ ಆಗಬೇಕು.

ಇನ್ನು ಮುಂದೆ ನಮ್ಮ ಜನ್ಮದಿನದಂದು ಪುಣ್ಯಕೋಟಿ ದತ್ತು ಯೋಜನೆಗೆ ಕೈಲಾದಷ್ಟು ದೇಣಿಗೆ ನೀಡುವ ಮೂಲಕ ವೃದ್ಧ, ರೋಗಪೀಡಿತ ಹಾಗೂ ಗಂಡು ಕರುಗಳ ಪಾಲನೆ ಮಾಡುವ ಮುಖಾಂತರ ಪುಣ್ಯಕೋಟಿಯ ಸೇವೆಯಲ್ಲಿ ಭಾಗಿಯಾಗೋಣ.



Downloaded From:www.kpscvaani.com



# ಲಿಂಗತ್ವ ಅಲ್ಪಸಂಖ್ಯಾತರಿಗೂ ಆಸರೆಯಾದ ನರೇಗಾ

**ನರೇಗಾ ಯೋಜನೆಯಡಿ ಉದ್ಯೋಗ ಮಾಡುತ್ತಾ ಸ್ವಾಭಿಮಾನದಿಂದ ಬದುಕು ನಡೆಸುತ್ತಿರುವ ಲಿಂಗತ್ವ ಅಲ್ಪಸಂಖ್ಯಾತರ ಯಶೋಗಾಥೆ ಇತರರಿಗೆ ಮಾದರಿ.**

ಮರೆಪ್ಪ ಸಿ ಹರವಾಳ್ಕರ್

ಸಂಜೀವ ಕುಮಾರ್ ಹೆಸರಿನವನಾದ ನಾನು ಓದಿ ವಿದ್ಯಾವಂತನಾಗಬೇಕೆಂಬುದು ನಮ್ಮ ತಂದೆ ತಾಯಿ ಅವರ ಮಹಾದಾಶಯವಾಗಿತ್ತು. ಆದರೆ ವಿಧಿ ಆಟವೇ ಬೇರೆಯಾಯಿತು. 5ನೇ ತರಗತಿವರೆಗೆ ಅಭ್ಯಾಸ ಮಾಡಿದ್ದ ನನಗೆ ಆಗ 11 ವರ್ಷಗಳು ತುಂಬಿತ್ತು. ಲಿಂಗತ್ವ ಅಲ್ಪಸಂಖ್ಯಾತರಾದ (ತೃತೀಯ ಲಿಂಗಿ) ಕಾರಣ ನನಗೆ ಶಾಲೆಗೆ ಹೋಗಲು ಮುಜುಗುರವಾಗುತ್ತಿತ್ತು. ಅಲ್ಲದೆ ಶಾಲೆಯ ಸಹಪಾಠಿಗಳು ನನ್ನನ್ನು ಆಡಿಕೊಳ್ಳುತ್ತಿದ್ದರು. ಆದ್ದರಿಂದ ಶಾಲೆ ಕಲಿಯಬೇಕೆಂಬ ನನ್ನ ತಂದೆ ತಾಯಿಯ ಮಹಾದಾಶಯವು ದೂರವಾಯಿತು.

ಹಾಗಾಗಿ ಐದನೇ ತರಗತಿಗೆ ನನ್ನ ವಿದ್ಯಾಭ್ಯಾಸ ಕೊನೆಗೊಂಡಿತು. ಬೆಳೆದು ದೊಡ್ಡವನಾದ ನನಗೆ ಆತ್ಮೀಯ ಸ್ನೇಹಿತನಾಗಿ ಪ್ರಭು ಸಿಕ್ಕನು. ಆತ ಕೂಡ ನನ್ನ ವರ್ಗದವನೇ ಆಗಿದ್ದನು. ಪ್ರಭು ಮೊದಲಿನಿಂದ ಶಾಲೆಗೆ ಹೋದವನಲ್ಲ. ಇಬ್ಬರು ಕೂಡ ಒಂದೇ ಸಮುದಾಯದವರಾಗಿದ್ದರಿಂದ ಜೊತೆಯಾದೆವು. ಜೀವನ ನಡೆಸಲು ಎಲ್ಲರಂತೆ ರಸ್ತೆಗಳಲ್ಲಿ ಹಣ ಕೇಳುವುದು ಇಬ್ಬರಿಗೂ ಇಷ್ಟವಿರಲಿಲ್ಲ. ದೇವರು ಕೈ ಕಾಲಿಗೆ ಶಕ್ತಿ ನೀಡಿದ್ದಾನೆ, ಹಾಗಾಗಿ ದುಡಿದು ಬದುಕುವುದು ಎಂದು ನಿರ್ಧರಿಸಿದೆವು. 'ನಿನಗೆ ನಾನು, ನನಗೆ ನೀನು' ಎಂಬಂತೆ ಇಬ್ಬರು ಜೊತೆಯಾಗಿ ಉದ್ಯೋಗಖಾತ್ರಿ ಹಾಗೂ ದಿನಗೂಲಿ ಕೆಲಸದಲ್ಲಿ ಕೂಲಿ ಮಾಡಿ ಜೀವನ ನಡೆಸುತ್ತಿದ್ದೇವೆ.

ಬೀದರ್ ಜಿಲ್ಲೆಯ ಸಿರ್ಸಿ(ಎ) ಗ್ರಾಮ ಪಂಚಾಯತ್‌ನ ವ್ಯಾಪ್ತಿಯಲ್ಲಿ ನಾವಿಬ್ಬರು ನರೇಗಾ ಯೋಜನೆಯಡಿ ಕೂಲಿ ಉದ್ಯೋಗ ಮಾಡಿ ಜೀವನ ಸಾಗಿಸುತ್ತಿದ್ದೇವೆ. ಕಾಯಕ ಬಂಧುಗಳ ಮೂಲಕ 2019 ರಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸಮುದಾಯ ಕೆಲಸದಲ್ಲಿ ತೊಡಗಿಕೊಂಡ ಪ್ರಭು, 2019 ರಲ್ಲಿ 80 ದಿನಗಳು, 2020 ರಲ್ಲಿ 85 ದಿನಗಳು, 2021 ರಲ್ಲಿ 75 ದಿನಗಳು, ಪ್ರಸ್ತುತ ದಿನಗಳಲ್ಲಿ ಎರಡು ವಾರ ಕೂಲಿ ಕೆಲಸ ಮಾಡಿದ್ದಾನೆ.



Downloaded From:www.kpscvaani.com



ನರೇಗಾ ಯೋಜನೆಯಡಿ ನಮಗೆ ಕೆಲಸ ನೀಡಿದ್ದರಿಂದ ಮೂಲ ವೃತ್ತಿ ನಿಲ್ಲಿಸಿದ್ದೇವೆ. ನಾವು ಕೆಲಸ ಮಾಡಿ ಕೂಲಿ ಹಣ ಪಡೆದು ಜೀವನ ನಡೆಸುವುದರಿಂದ ನಮಗೆ ಹೆಚ್ಚಿನ ಗೌರವ ಸಿಗುತ್ತದೆ. ಸದ್ಯ ಈಗ ಬದುಕಿನ ಬಗ್ಗೆ ಆತ್ಮವಿಶ್ವಾಸವೂ ಹೆಚ್ಚಿದೆ.

**–ಪ್ರಭು ಮತ್ತು ಸಂಜೀವ ಕುಮಾರ.**

ನಾನು ಕೂಡ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ, ಸಮುದಾಯ ಕಾಮಗಾರಿಗಳಾದ ನಾಲಾ ಹೂಳೆತ್ತುವುದು, ಚೆಕ್‌ಡ್ಯಾಂ ಹೂಳೆತ್ತುವುದು, ಕೆರೆ ಹೂಳೆತ್ತುವುದು ಹಾಗೂ ಇತರೆ ಕಾಮಗಾರಿಗಳಲ್ಲಿ ಕೆಲಸ ಮಾಡಿದ್ದು, 2019 ರಲ್ಲಿ 70 ದಿನಗಳು, 2020 ರಲ್ಲಿ 85 ದಿನಗಳು, 2021 ರಲ್ಲಿ 80 ದಿನಗಳು ಹಾಗೂ ಪ್ರಸ್ತುತ ದಿನಗಳಲ್ಲಿ ಎರಡುವಾರ ಕೂಲಿ ಕೆಲಸ ಮಾಡಿದ್ದೇನೆ.

ಇನ್ನು ನರೇಗಾ ಯೋಜನೆಯಡಿ ನಾವಿಬ್ಬರೂ ನಾಲ್ಕು ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಸ್ವ-ಸ್ವಹಾಯ ಸಂಘ ನಡೆಸುತ್ತಿರುವ ಜನರಿಗೆ ಸ್ವಲ್ಪ ಹಣವನ್ನು ಸಾಲದ ರೂಪದಲ್ಲಿ ನೀಡುವ ಮೂಲಕ ಹಣವನ್ನು ಹೂಡಿಕೆ ಮಾಡಿದ್ದೇವೆ. ಹಾಗೆಯೇ ಇದರಿಂದ ದೊರೆತ ಹಣವು ನಮ್ಮ ಉಪ ಜೀವನ ಸೇರಿದಂತೆ ಇತರೆ ಖರ್ಚುಗಳಿಗೂ ಕೂಡ ಬಳಕೆ ಮಾಡಿಕೊಳ್ಳಲು ಉಪಯೋಗವಾಗಿದೆ. ಒಟ್ಟಿನಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯು ನಮ್ಮಂತಹ ಅನೇಕ ತೃತೀಯ ಲಿಂಗಿಗಳಿಗೆ ಉಪಯೋಗವಾಗುತ್ತಿದೆ. ಆದ್ದರಿಂದ ಗ್ರಾಮೀಣ ಭಾಗದ ನಮ್ಮಂತಹ ಜನರು ನರೇಗಾ ಯೋಜನೆಯ ಲಾಭ ಪಡೆದು, ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳಬಹುದು.

ಇದು ನರೇಗಾ ಯೋಜನೆಯಡಿ ತಮ್ಮ ಜೀವನವನ್ನು ಕಟ್ಟಿಕೊಂಡಿರುವ ಸಂಜೀವ್ ಕುಮಾರ್ ಅವರ ಮನದಾಳದ ಮಾತು.

ಕ್ಷೇತ್ರ ಕಾರ್ಯಗಳಿಗೆ ಭೇಟಿ ನೀಡಿ ಮಹಾತ್ಮಗಾಂಧಿ ನರೇಗಾ ಯೋಜನೆಯ ಕುರಿತು ಜಿಲ್ಲೆಯಾದ್ಯಂತ ಮಾಹಿತಿ ಪ್ರಚಾರ ಚುರುಕಾಗಿ ಕೈಗೊಂಡಿದ್ದು, ಯೋಜನೆಯಲ್ಲಿರುವ ವೈಯಕ್ತಿಕ ಹಾಗೂ ಸಮುದಾಯ ಕಾಮಗಾರಿಗಳನ್ನು ಜನರಿಗೆ ತಿಳಿಸುವಲ್ಲಿ ಐಇಸಿ ಸಂಯೋಜಕರು ಯಶಸ್ವಿಯಾಗಿದ್ದಾರೆ. ವಿಶೇಷ ವರ್ಗದವರನ್ನು ಗುರುತಿಸಿ ಕಾಮಗಾರಿಗಳಲ್ಲಿ ತೊಡುವಂತೆ ಮಾಡುತ್ತಿರುವುದು ಜನ ಮೆಚ್ಚಿದ ಕಾರ್ಯವಾಗಿದೆ.

ಮಹಾತ್ಮಗಾಂಧಿ ನರೇಗಾ ಯೋಜನೆ ಇದೀಗ ತೃತೀಯ ಲಿಂಗಿಗಳೂ ಗೌರವಯುತ ಜೀವನ ನಡೆಸಲು ನೆರವಾಗುವ ಮೂಲಕ ವಿಶಿಷ್ಟ ಹೆಜ್ಜೆ ಇರಿಸಿದೆ. ಬೀದರ್ ಜಿಲ್ಲಾ ಪಂಚಾಯಿತಿ ಆಡಳಿತದ ಕಳಕಳಿಯಿಂದ ಲಿಂಗತ್ವ ಅಲ್ಪಸಂಖ್ಯಾತರ ಸ್ವಾಭಿಮಾನದ ಬದುಕಿಗೂ ನರೇಗಾ ರಹದಾರಿಯಾಗಿದೆ. ಜಿಲ್ಲೆಯಲ್ಲಿರುವ ಆಯ್ದ ಲಿಂಗತ್ವ ಅಲ್ಪಸಂಖ್ಯಾತರ ಮನವೊಲಿಸುವಲ್ಲಿ ಯಶಸ್ವಿಯಾದ ಜಿಲ್ಲಾ ಪಂಚಾಯಿತಿ ಉದ್ಯೋಗ ಖಾತ್ರಿ ಚೀಟಿ ನೀಡಿದೆ. ಸಮಾಜದ ಅವಗಣನೆಗೆ ಗುರಿಯಾಗಿದ್ದ ಇವರ ಮೊಗದಲ್ಲಿ ಈಗ ಮಂದಹಾಸ ಮೂಡಿಸಿದೆ.

ಹಾಗಾಗಿ ಪ್ರಭು ಮತ್ತು ಸಂಜೀವ ಕುಮಾರ ಅವರು ಸಿರ್ಸಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಕೂಲಿ ಕೆಲಸ ಪಡೆದು, ಗೌರವಯುತ ಜೀವನ ನಡೆಸುತ್ತಿದ್ದಾರೆ. ಭಿಕ್ಷಾಟನೆಗೆ ಹೋಗದೆ, ವಲಸೆ ಬದುಕು ತೊರೆದು, ಹುಟ್ಟೂರಿನಲ್ಲೇ ನೆಲೆಸಿ ಜೀವನ ನಡೆಸುವ ಕನಸಿನೊಂದಿಗೆ ಕೆಲಸ ಮಾಡುತ್ತಾ ಸ್ವಾಭಿಮಾನದಿಂದ ಬದುಕುವ ಮೂಲಕ ಇತರೆ ಲಿಂಗತ್ವ ಅಲ್ಪಸಂಖ್ಯಾತರಿಗೂ ಮಾದರಿಯಾಗಿದ್ದಾರೆ.

ಪ್ರತಿ ದಿನ 309 ರೂ.ಕೂಲಿ ಪಡೆದು ಆರ್ಥಿಕ ವರ್ಷದಲ್ಲಿ 100 ದಿನಗಳ ಕೆಲಸ ಪೂರೈಸುವ ವಿಶ್ವಾಸ ಹೊಂದಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರಿಗೂ, ವಿಧವೆಯರು, ಒಂಟಿ ಮಹಿಳೆಯರು, ವೃದ್ಧರಿಗೆ ನೀಡುವ ವಿಶೇಷ ಚೀಟಿಯಡಿ ನಿಗದಿತ ಕೆಲಸಕ್ಕಿಂತ ಅರ್ಧದಷ್ಟು ಕೆಲಸ ಮಾಡಿದರೆ ಸಾಕು ಎಂಬ ಮಾನದಂಡದಡಿಯಲ್ಲಿ ಅವಕಾಶವನ್ನು ಒದಗಿಸಿರುವುದು ವಿಶೇಷ. ಇಂತಹ ಅವಕಾಶದಿಂದಾಗಿ ನರೇಗಾ ಯೋಜನೆಯಡಿ ಲಿಂಗತ್ವ ಅಲ್ಪಸಂಖ್ಯಾರು ಜೀವನ ನಡೆಸಲು ಅನುಕೂಲವಾಗಿದೆ. ಸದ್ಯ ನರೇಗಾದಡಿ ಕೆಲಸ ಮಾಡಿ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ.

ಲಿಂಗ ತಾರತಮ್ಯದ ಶೋಷಣೆ ಹಾಗೂ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿದ್ದ ಲಿಂಗತ್ವ ಅಲ್ಪಸಂಖ್ಯಾತರು, ಆತ್ಮ ಬಲ ಕಳೆದುಕೊಂಡು ಸಮಾಜದಿಂದ ದೂರ ಉಳಿದಿದ್ದರು. ಇವರು ನರೇಗಾದಡಿ ಕೆಲಸ ಮಾಡುತ್ತಿರುವುದು ತುಂಬಾ ಖುಷಿಯ ವಿಚಾರ. ಸಮಾಜದೊಂದಿಗೆ ಬೆರೆತು ಬದುಕು ನಡೆಸಿದಾಗ ಆತ್ಮಗೌರವ ಹೆಚ್ಚುತ್ತದೆ. ಮಹಾತ್ಮಗಾಂಧಿ ನರೇಗಾ ಯೋಜನೆಯು ಸಮಾಜದಲ್ಲಿ ಕಳಂಕಿತಕ್ಕೆ ಒಳಗಾಗಿರುವ ಜನರಿಗೂ ಬದುಕು ಕಲ್ಪಿಸಿದ್ದು, ಯೋಜನೆಯ ಲಾಭ ಪಡೆದು ಸಮಾಜದಲ್ಲಿ ಸ್ವಾವಲಂಬಿಗಳಾಗಿ ಬದುಕು ಸಾಗಿಸಲು ಅವಕಾಶ ನೀಡಿದೆ.

**ಶಿಲ್ಪಾ ಎಂ**

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಬೀದರ್



Downloaded From:www.kpscvaani.com

# ಮೈಸೂರಿನಲ್ಲಿ ವಿದ್ಯುತ್ ದೀಪ ಬೆಳಗಿದ ಇತಿಹಾಸ



**ಸೆಪ್ಟೆಂಬರ್ 26 ಅರಮನೆ ನಗರಿ ಮೈಸೂರಿನಲ್ಲಿ ಮೊಟ್ಟ ಮೊದಲ ಬಾರಿಗೆ ವಿದ್ಯುತ್ ದೀಪಗಳು ಬೆಳಗಿದ ಇತಿಹಾಸವನ್ನು ನೆನಪಿಸುತ್ತದೆ.**

ವೇಮಗಲ್ ಸೋಮಶೇಖರ್

ದಕ್ಷಿಣ ಭಾರತದಲ್ಲಿ ವಿದ್ಯುತ್ ಉತ್ಪಾದನೆಗೆ ನಾಂದಿ ಹಾಡಿದ ರಾಜ್ಯ ಕರ್ನಾಟಕ. 1902ರ ಜೂನ್ 30 ರಂದು ಮೊದಲ ಬಾರಿಗೆ ಕೋಲಾರದ ಚಿನ್ನದಗಣಿಗೆ ಶಿವನ ಸಮುದ್ರದಿಂದ ವಿದ್ಯುತ್ ಸರಬರಾಜು ಆರಂಭವಾಯಿತು. 1905ರ ಆಗಸ್ಟ್ 5 ರಂದು ಬೆಂಗಳೂರು ನಗರದ ಮಾರುಕಟ್ಟೆ ಪ್ರದೇಶದಲ್ಲಿ ವಿದ್ಯುತ್ ದೀಪಗಳು ಬೆಳಗಿದರೆ ಮೈಸೂರಿನಲ್ಲಿ 1908 ರ ಸೆಪ್ಟೆಂಬರ್ 26 ರಂದು ವಿದ್ಯುತ್ ದೀಪಗಳು ಬೆಳಗಿತು.

ಮೈಸೂರು ಕರ್ನಾಟಕದ ಹೆಮ್ಮೆಯ ಮಾದರಿ ನಗರವಾಗಿದ್ದು, ಜಗತ್ತಿನ ಸುಂದರ ನಗರಗಳಲ್ಲಿ ಒಂದಾಗಿದೆ ಹಾಗೂ ಕರ್ನಾಟಕದ ಸಂಸ್ಕೃತಿಯ ಕೇಂದ್ರವಾಗಿದೆ. ವಿಶ್ವದಲ್ಲೇ ಬಹು ಪ್ರಸಿದ್ಧವಾದ ಇಲ್ಲಿನ ಅರಮನೆ ವಿದ್ಯುತ್ ದೀಪಗಳಿಂದ ಬೆಳಗಿದರೆ ನೋಡುವುದಕ್ಕೆ ಎರಡು ಕಣ್ಣುಗಳು ಸಾಲದು. ಇಂತಹ ಮೈಸೂರಿಗೆ ವಿದ್ಯುಚ್ಛಕ್ತಿ ಪ್ರವೇಶಿಸಿದ ಇತಿಹಾಸ ಕುತೂಹಲಕರವಾಗಿದೆ.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ 1908ರ ಸೆಪ್ಟೆಂಬರ್ 26ನೇ ಶನಿವಾರ ನವರಾತ್ರಿ ಹಬ್ಬದ ಕಟ್ಲೆಯ ಉತ್ಸವಗಳು ಪ್ರಾರಂಭವಾದವು. ( ಈಗಿನ ಅರಮನೆಯ ನಿರ್ಮಾಣದ ಕಾರ್ಯ ಮುಗಿಯುವ ಹಂತದಲ್ಲಿತ್ತು) ಆ ದಿನ ಪ್ರಾತಃಕಾಲ ಮಹಾರಾಜ ಶ್ರೀ ನಾಲ್ವಡಿಕೃಷ್ಣರಾಜ ಒಡೆಯರ್‌ರವರು ಮಂಗಳ ಸ್ನಾನ ಆಹ್ನಿಕಗಳನ್ನೂ, ಪೂಜಾದಿಗಳನ್ನೂ ನೆರವೇರಿಸಿ, ಮಹಾಮಾತೃಶ್ರೀಯವರ ಮತ್ತು ಅರಮನೆ ಗುರುಗಳ ಆಶೀರ್ವಾದಗಳನ್ನು ಸ್ವೀಕರಿಸಿ, ದರ್ಬಾರ್ ಪೋಷಾಕಿನೊಡನೆ ಪಲ್ಲಕ್ಕಿಯಲ್ಲಿ ಕುಳಿತು ವಾದ್ಯ, ಓಲಗ, ತಾಳ ಮೇಳಗಳ ಸಮೇತ ಕರಿಕಲ್ಲು ತೊಟ್ಟಿಯಿಂದ ಜಗನ್ಮೋಹನ ಬಂಗಲೆಗೆ ಮೆರವಣಿಗೆಯಲ್ಲಿ ಚಿತ್ತೈಸಿದರು. ದರ್ಬಾರ್ ಮಂದಿರದಲ್ಲಿ ಋತ್ವಿಕ್ಕರು,



Downloaded From:www.kpscvaani.com



ಶಾಸ್ತ್ರಿಗಳು, ಜೋಯಿಸರು, ಪಂಡಿತರು, ಪುರೋಹಿತರು ಮೊದಲಾದ ವೈದಿಕ ಮಂಡಲಿಯವರು, ಹಾಗೂ ರಾಜಒಡೆಯರು, ದಿವಾನರು, ಕೌನ್ಸಿಲ್ ಮೆಂಬರುಗಳು, ಮುನಿಸಿಪಲ್ ಕೌನ್ಸಿಲರುಗಳು, ಕಾರ್ಯದರ್ಶಿಗಳು, ನ್ಯಾಯಾಧೀಶರುಗಳು, ವಕೀಲರುಗಳು, ಎಲ್ಲಾ ಕೋಮುಗಳ ಮತ್ತು ಕಸುಬುಗಳ ಪ್ರತಿನಿಧಿಗಳು ಮೊದಲಾದವರು ಹಾಜರಿದ್ದರು.

ಕೃಷ್ಣರಾಜ ಒಡೆಯರ್‌ರವರು ಯುವರಾಜ ಕಂಠೀರವ ನರಸಿಂಹರಾಜ ಒಡೆಯರ ಸಮೇತ ಬೆಳಗ್ಗೆ 11.30 ಕ್ಕೆ ದರ್ಬಾರ್ ಮಂದಿರಕ್ಕೆ ದಯಮಾಡಿಸಿ ವೈದಿಕರ ಮುಖೇನ ಶಾಸ್ತ್ರೋಕ್ತವಾದ ಪೂಜೆ ಮುಂತಾದದ್ದನ್ನೂ, ದಾನಾದಿಗಳನ್ನೂ ಮಾಡಿ, ಸಿಂಹಾಸನಕ್ಕೆ ಮೂರಾವರ್ತಿ ಪ್ರದಕ್ಷಿಣೆ ಮಾಡಿ ಸಮಸ್ತ ದರ್ಬಾರಿಗಳು, ಸೈನಿಕರು ಮಾಡಿದ ಮುಜರೆಗೆ ಪ್ರತಿಯನ್ನಿತ್ತು ಸಿಂಹಾಸನದಲ್ಲಿ ಕುಳಿತುಕೊಂಡರು. ಕೂಡಲೇ ಕಹಳೆ, ವಾದ್ಯ, ಓಲಗ ತಾಳಮೇಳಗಳೂ ಮೊಳಗಿದವು. ನಂತರ ಗೌರವಾರ್ಥವಾಗಿ 21 ತೋಪುಗಳು ಹಾರಿಸಲ್ಪಟ್ಟವು. ತರುವಾಯ ಪಟ್ಟದಾನೆ ಹಾಗೂ ಕುದುರೆಗಳ ಮೆರವಣಿಗೆ ಹೊರಟಿತು, ಗುರುಪೀಠಗಳಿಂದ ಕಳುಹಿಸಲ್ಪಟ್ಟಿದ್ದ ಆಶೀರ್ವಾದಪೂರ್ವಕವಾದ ಬಿಲ್ವಪತ್ರೆ ಫಲಮಂತ್ರಾಕ್ಷತೆಯನ್ನು ವೈದಿಕ ಮಂಡಲಿಯವರು ಮಹಾರಾಜರಿಗೆ ಒಪ್ಪಿಸಿದ ನಂತರ ಅಕ್ಷತೆಯನ್ನು ಅವರ ಶಿರಸ್ಸಿನ ಮೇಲೆ ಮಹಾರಾಜರು ಪ್ರೋಕ್ಷಿಸಿದರು. ಅರಸುಗಳು, ಲೌಕಿಕ ಮಂಡಲಿಯವರು ಸಾಲಾಗಿ ಬಂದು, ವಂದನೆ ಸಲ್ಲಿಸಿ, ಮಹಾರಾಜರವರಿಗೆ ನಜರು(ಕಪ್ಪ)ಗಳನ್ನೊಪ್ಪಿಸಿದರು. ಮಹಾರಾಜರು ನಜರುಗಳನ್ನು ಮುಟ್ಟಿ ವಾಪಸ್ಸು ದಯಪಾಲಿಸಿದರು. ಕಡೆಯಲ್ಲಿ ಸೈನಿಕರೆಲ್ಲಾ "ಶ್ರೀಮನ್ಮಹಾರಾಜಾ ನಾಲ್ವಡಿ ಕೃಷ್ಣರಾಜಒಡೆಯರ್ ಬಹದೂರ್ ಕಿ ಜೈ" ಎಂದು ಧ್ವನಿಯೆತ್ತಿ ಜಯಘೋಷ ಮಾಡಿದರು. ಪಟ್ಟದಾನೆ, ಕುದುರೆಗಳು ಮೆರವಣಿಗೆಯಲ್ಲಿ ಬಂದು ಮಹಾರಾಜರಿಗೆ ಮುಜರೆ ಸಲ್ಲಿಸಿದ ಮೇಲೆ ದರ್ಬಾರ್ ಮಂದಿರದಲ್ಲಿ ಮಹಾರಾಜರು ವೈದಿಕ ಲೌಕಿಕರುಗಳಿಗೆ ಹೂವಿನ ಹಾರ ಹಾಕಿ ತಾಂಬೂಲ ವಿನಿಯೋಗ ಮಾಡಿದರು. ದರ್ಬಾರಿಗಳೆಲ್ಲಾ ಎದ್ದು ಮುಜರೆ ಸಲ್ಲಿಸಿ ತೆರಳಿದರು. ಕೊನೆಯಲ್ಲಿ ಮಹಾರಾಜರು ಎಲ್ಲರಿಗೂ ಪ್ರಸಾದವನ್ನು ನೀಡಿದರು.

ನವರಾತ್ರಿಯ ಪ್ರಥಮ ದಿನದ ಈ ಎಲ್ಲಾ ಕಾರ್ಯಕ್ರಮಗಳು ಮುಗಿಯುವ ಹೊತ್ತಿಗೆ ಸಂಜೆಯಾಗಿತ್ತು. ಆ ಸಮಯಕ್ಕೆ ಮೋಡ ಕವಿದು ಮಳೆ ಸುರಿಯುತ್ತಿದ್ದರಿಂದ ಅಂಧಕಾರವು ಬಹಳ ಹೆಚ್ಚಾಗಿತ್ತು. ರಾತ್ರಿ 7 ಗಂಟೆ 20 ನಿಮಿಷಕ್ಕೆ ಸರಿಯಾಗಿ ನಾಲ್ವಡಿಯವರು ಪುನಃ ದರ್ಬಾರ್ ಮಂದಿರಕ್ಕೆ ಚಿತ್ತೈಸಿ ವಾದ್ಯಗಳು ಮೊಳಗುತ್ತಿರಲು ಮೆಟ್ಟಲುಗಳನ್ನು ಹತ್ತಿ ಸಿಂಹಾಸನದ ಮೇಲೆ ಆಸೀನರಾದರು. ಕರ್ಜನ್ ಪಾರ್ಕಿನ ಪೂರ್ವ ದಿಕ್ಕಿನಲ್ಲಿ ನಿರ್ಮಿಸಿದ್ದ ಟ್ರಾನ್ಸ್‌ಫಾರ್ಮರ್ ಹೌಸ್‌ನಿಂದ ಜಗನ್ಮೋಹನ ಅರಮನೆಯ ದರ್ಬಾರ್ ಮಂದಿರಕ್ಕೆ ತಂತಿಯನ್ನು ತಂದು ಆರು ದೀಪಗಳುಳ್ಳ ಎರಡು ಕಂಬಗಳಿಗೆ ವಿದ್ಯುತ್ ಸಂಚರಿಸುವ ಹಾಗೆ ವ್ಯವಸ್ಥೆ ಮಾಡಲಾಗಿತ್ತು. ದಿವಾನ್ ವಿ.ಪಿ.ಮಾಧವರಾಯರು ಪುಷ್ಪಗಳ ಮಧ್ಯೆ ಒಂದು ಚಂಡನ್ನಿಟ್ಟಿದ್ದ ಚಿನ್ನದ ತಟ್ಟೆಯನ್ನು ಹಿಡಿದು ತಂದು ಮಹಾರಾಜರಿಗೆ ಒಪ್ಪಿಸಿದರು. ಮಹಾರಾಜರು ಚಂಡಿನಲ್ಲಿದ್ದ ಗುಂಡಿಯನ್ನು ಒತ್ತಿದಕೂಡಲೆ ಅದರ ಅಡಿಯಿಂದ ಹೊರಟಿದ್ದ ತಂತಿಯ ಮೂಲಕ ವಿದ್ಯುಚ್ಛಕ್ತಿಯ ಟ್ರಾನ್ಸ್‌ಫಾರ್ಮರ್ ಹೌಸ್‌ಗೆ ವರ್ತಮಾನ ತಲುಪಿ ಅಲ್ಲಿಂದ ದರ್ಬಾರ್ ಮಂದಿರದ ದೀಪದ ಕಂಬಗಳಿಗೆ ಬಂದು ದಿವ್ಯವಾದ ಹನ್ನೆರಡು ದೀಪಗಳು ಉರಿಯಲಾರಂಭಿಸಿತು.


ಅದೇ ಸಂದರ್ಭದಲ್ಲಿ ಟ್ರಾನ್ಸ್‌ಫಾರ್ಮರ್ ಹೌಸ್‌ನಲ್ಲಿ ಯಂತ್ರಗಳ ಗುಂಡಿಯನ್ನು ಒತ್ತಿ ಪಟ್ಟಣಕ್ಕೆಲ್ಲಾ ವಿದ್ಯುತ್ ದೀಪಗಳು ಏಕಕಾಲದಲ್ಲಿ ಪ್ರಕಾಶಿಸುವಂತೆ ಮಾಡಿದರು. ಈ ದೀಪಗಳಿಂದ ಜಗನ್ಮೋಹನ ಅರಮನೆಯಲ್ಲಿ ಪ್ರಕಾಶಮಾನವಾದ ಬೆಳಕು ಉಂಟಾದದ್ದು ಮೈಸೂರಿನ ಜನರಲ್ಲಿ ಪರಮಾಶ್ಚರ್ಯವನ್ನುಂಟುಮಾಡಿತು. ಈ ರೀತಿಯಾಗಿ 1908ರ ನವರಾತ್ರಿ ಹಬ್ಬದ ಪ್ರಾರಂಭದ ದಿನದಂದು ನಾಲ್ವಡಿ ಕೃಷ್ಣರಾಜ ಒಡೆಯರು ವಿದ್ಯುತ್ ದೀಪಗಳ ಪ್ರಾರಂಭೋತ್ಸವವನ್ನು ನೆರವೇರಿಸಿದರು. (ಆನಂತರ ನಾಲ್ವಡಿಯವರು ಅಂದಿನ ರಾಜಧಾನಿಯಾದ ಮೈಸೂರಿಗೆ ನವೀನವಾದ ವಿದ್ಯುತ್ ದೀಪಗಳನ್ನು ತರಿಸಿದರು.) ಅಂದಿನಿಂದ 'ಶ್ರೀಕೃಷ್ಣರಾಜಭೂಪ ಮನೆಮನೆಗೂ ದೀಪ' ಎಂದು ಮೈಸೂರು ಜನರ ಮನೆಮಾತಾಯಿತು.

1908ಕ್ಕೂ ಮುಂಚೆ ಮೈಸೂರು ನಗರದ ಮುಖ್ಯ ರಸ್ತೆಗಳಲ್ಲಿ ಮರ, ಕಲ್ಲು ಅಥವಾ ಕಬ್ಬಿಣದ ಕಂಬಗಳನ್ನು ನೆಟ್ಟು ಅದರ ಮೇಲೆ ಸೀಮೆಎಣ್ಣೆ ದೀಪಗಳನ್ನಿಡಲಾಗಿತ್ತು. ಸಂಜೆ ಆದೊಡನೆ ಅದಕ್ಕಾಗಿ ನಿಯಮಿಸಲ್ಪಟ್ಟ ನೌಕರನೊಬ್ಬ ಏಣಿಯೊಡನೆ ಬಂದು ದೀಪದ ಸುತ್ತಲಿನ ಗಾಜುಗಳನ್ನು ಶುಚಿ ಮಾಡಿ ಹೋಗುತ್ತಿದ್ದರೆ, ಇನ್ನೊಬ್ಬ ನೌಕರ ಅದೇ ರೀತಿ ಬಂದು ಸೀಮೆಎಣ್ಣೆ ಹಾಕಿ ದೀಪವನ್ನು ಹಚ್ಚುತ್ತಿದ್ದ. ಈ ಕಾರ್ಯವನ್ನು ಮಾಡುತ್ತಿದ್ದ ವ್ಯಕ್ತಿಗೆ 'ದೀಪಪ್ಪ' ಎಂದು ಕರೆಯುತ್ತಿದ್ದರು. ಮನೆಗಳಲ್ಲಿ ಮತ್ತು ವ್ಯಾಪಾರ ಸ್ಥಳಗಳಲ್ಲಿ ದೀಪಕ್ಕೆ ಹರಳೆಣ್ಣೆ ಅಥವಾ ಸೀಮೆ ಎಣ್ಣೆ ಬಳಕೆಯಾಗುತ್ತಿತ್ತು.

ಸೆಪ್ಟೆಂಬರ್ 26 ಕ್ಕೆ ಮೈಸೂರಿಗೆ ವಿದ್ಯುತ್ ಸರಬರಾಜು ಆಗಿ ಒಂದು ಶತಮಾನ ಕಳೆದು 15 ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಇತಿಹಾಸವನ್ನು ನೆನಪಿಸುವಂತೆ ಮಾಡಿದೆ. ■



Downloaded From:www.kpscvaani.com



# ಬೀದಿ ನಾಯಿಗಳಿಗೊಂದು ನೆಮ್ಮದಿಯ ನೆಲೆ

ರಾಮಕೃಷ್ಣ ಶಾಸ್ತ್ರಿ

**ಅಂ**ಗವೈಕಲ್ಯ ನಾಯಿಗಳು ಮತ್ತು ಹೆಣ್ಣು ನಾಯಿ ಮರಿಗಳಿಗೊಂದು ನೆಮ್ಮದಿಯ ನೆಲೆಯನ್ನು ಒದಗಿಸಿಕೊಟ್ಟಿದೆ ಬಜಗೋಳಿ ಪೇಟೆಯಲ್ಲಿರುವ ಶ್ವಾನ ರಕ್ಷಣೆಯ ತಾಣ.

ಅಲ್ಲಿದೆ ಮಾನವೀಯ ಹೃದಯದ ಭಾವಸ್ಪರ್ಶ. ಎಲ್ಲೋ ಹುಟ್ಟಿದ ನಾಯಿಗಳು, ಹೆಣ್ಣುಮರಿ ಎಂಬ ಕಾರಣಕ್ಕೆ ನಿರ್ದಯವಾಗಿ ಸಾಕಿದ ಯಜಮಾನನಿಂದಲೇ ಬೀದಿ ಸೇರಿ ತಬ್ಬಲಿಯಾದಂಥವು. ವಾಹನವೊಂದು ಮಲಗಿದ್ದ ನಾಯಿಯ ಕಾಲಿನ ಮೇಲೆಯೇ ಚಲಿಸಿಕೊಂಡು ಹೋಗಿ ಕಾಲನ್ನು ತುಂಡು ಮಾಡಿ, ಎಂದಿಗೂ ನಡೆದಾಡದಂತೆ ಮಾಡಿದೆ. ಸಾಕಿದ ಯಜಮಾನನ ಮನೆಯನ್ನು ವಿಶ್ವಾಸದಿಂದ ಕಾವಲು ಕಾಯುವ ನಾಯಿಗಿಂತ ನಂಬುಗೆಯ ಪ್ರಾಣಿ ಇನ್ನೊಂದಿಲ್ಲ. ಮನುಷ್ಯನ ಆಸರೆ ಬಿಟ್ಟರೆ ಅದು ಬದುಕಲಾರದು. ಇಂತಹ ನಂಬುಗೆಯ ಬಂಟನನ್ನೇ ಮನುಷ್ಯ ಬೀದಿಪಾಲು ಮಾಡಲು ಹೇಸುವುದಿಲ್ಲ. ಹೀಗಿರುವ ಅನಾಥ ನಾಯಿಗಳನ್ನು ಕರೆತಂದು ನೆಲೆಸಲು ಬೆಚ್ಚಗಿನ ಗೂಡುಗಳನ್ನು, ಮಲಗಲು ಮರದ ಮಂಚಗಳನ್ನು ಒದಗಿಸಿ, ಹೊಟ್ಟೆತುಂಬ ಅನ್ನ ನೀಡಿ ಸಾಕುವ ಮೂಲಕ ನಿಷ್ಠಾವಂತ ನಾಯಿಗೂ ಮಾನವೀಯ ಭಾವನೆಯ ಸುಖ ಹಂಚಬಲ್ಲ ಅಪರೂಪದ ಪ್ರಾಣಿ ಹಿತರಕ್ಷಣಾ ಕೇಂದ್ರವೊಂದು ಜನ ಮೆಚ್ಚುಗೆಯ ಕೆಲಸ ಮಾಡುತ್ತಿದೆ.

ಕಾರ್ಕಳ ತಾಲೂಕು ಕೇಂದ್ರದಿಂದ ಬೆಳ್ತಂಗಡಿಗೆ ಬರುವ ದಾರಿಯಲ್ಲಿ ಏಳೆಂಟು ಕಿಮೀ ದೂರ ಸಾಗಿದಾಗ ಸಿಗುತ್ತದೆ ಬಜಗೋಳಿ ಪೇಟೆ. ಇಲ್ಲಿಂದ ಹೊರನಾಡು–ಶೃಂಗೇರಿಗೆ ಹೋಗುವ ರಸ್ತೆಯಲ್ಲಿ ಒಂದಿಷ್ಟು ದೂರ ಕ್ರಮಿಸಿದರೆ ಸಿಗುತ್ತದೆ ಮುಡಾರುವಿನ ಸುಮ್ಮ ಬಂಡಸಾಲೆ ಮನೆ. ಇಲ್ಲಿದೆ ಅಹಿಂಸಾ ಎನಿಮಲ್ ಕೇರ್ ಟ್ರಸ್ಟ್ ನಡೆಸುವ ಶ್ವಾನ ರಕ್ಷಣೆಯ ತಾಣ. ಒಂದೆಕರೆ ವಿಶಾಲ ಸ್ಥಳದಲ್ಲಿ ಸುತ್ತಲೂ ಕೆಂಪುಕಲ್ಲಿನ ಗೋಡೆ ಕಟ್ಟಿ ಅನಾಥ ನಾಯಿಗಳನ್ನು ಸಂರಕ್ಷಿಸುವ ಮಹತ್ಕಾರ್ಯವನ್ನು ವ್ಯವಸ್ಥಿತವಾಗಿ ಇಲ್ಲಿ ಕೈಗೊಳ್ಳಲಾಗಿದೆ. ಗೋಡೆಯ ಹೊರಗೆ ಗಟ್ಟಿಯಾದ ಬಾಗಿಲಿದೆ. ಇಲ್ಲಿವೆ ಪುಟ್ಟ ಪುಟ್ಟ ಕಟ್ಟಡಗಳು, ಸಾಲು ಸಾಲು ಕಬ್ಬಿಣದ ಸರಳಿನ ಗೂಡುಗಳು ಎಲ್ಲಿ ಕಣ್ಣು ಹಾಯಿಸಿದರೂ ನಾಯಿಗಳೇ ಕಾಣುತ್ತವೆ.

ಇಲ್ಲಿರುವ ನಾಯಿಗಳಲ್ಲಿ ಹೆಚ್ಚಿನವು ಹೆಣ್ಣುನಾಯಿಗಳು. ಒಂದೊಂದು ನಾಯಿಗೂ ಒಂದೊಂದು ಕರುಣ ಕಥೆಯಿದೆ. ನಾಯಿಗಳ ಶುಶ್ರೂಷೆಯನ್ನು ನೋಡಿಕೊಳ್ಳುತ್ತಿರುವ ನಾಲ್ವರು ಕೆಲಸಗಾರರ ಪೈಕಿ ಯುವತಿಯೊಬ್ಬರು ಒಂದೊಂದಾಗಿ ನಾಯಿಗಳ ಕರುಣಕಥೆ ಏನೆಂಬುದನ್ನು ಹೇಳುತ್ತಾರೆ, 'ನೋಡಿ, ಆ ನಾಯಿ ಉಂಟಲ್ಲ, ಅದರ ಒಂದು ಹಿಂಗಾಲನ್ನು ಬುಡದಿಂದಲೇ ಕತ್ತರಿಸಿದ್ದಾರೆ. ಕಾಲಿನ ಮೇಲೆ ಲಾರಿ ಹರಿದಿತ್ತಂತೆ. ಇಲ್ಲಿಗೆ ತಂದು ಆರೈಕೆ ಮಾಡಿದ ಮೇಲೆ ಮೂರು ಕಾಲಿನಲ್ಲೇ ಹೇಗೆ ನಡೀತಿದ್ದಾನೆ ನೋಡಿ' ಆ ನಾಯಿಯನ್ನು ಎದೆಗವಚಿಕೊಂಡು ಬಂದು ತೋರಿಸುತ್ತಾರೆ. ಹಾಗೆಯೇ ಹುಟ್ಟುವಾಗಲೇ ಕೈಕಾಲುಗಳಲ್ಲಿ ಬಲವಿಲ್ಲದ ನಾಯಿಯೊಂದರ ಕಡೆಗೆ ಗಮನ ಸೆಳೆಯುತ್ತಾರೆ. ದೇಹ ಗಟ್ಟಿಮುಟ್ಟಾಗಿದ್ದರೂ ಕೈಕಾಲು ಬಲಹೀನವಾಗಿರುವ ಕಾರಣ ಅದು ಕಷ್ಟಪಟ್ಟು ತೆವಳುತ್ತ ಬರುವ ದೃಶ್ಯ ಕಂಡಾಗ ಮನ ಕಲಕುತ್ತದೆ.

ಕೆಲವು ನಾಯಿಗಳಿಗೆ ಮೈಯಲ್ಲಿ ಗಡ್ಡೆಗಳಿವೆ. ಅದು ಕ್ಯಾನ್ಸರ್ ಎಂದಿದ್ದಾರೆ ಪಶುವೈದ್ಯರು. ಇಂತಹ ನಾಯಿಗಳನ್ನು ಪ್ರತ್ಯೇಕವಾಗಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಕೆಲವಕ್ಕೆ ಕೂದಲು ಉದುರುವ ಚರ್ಮ ರೋಗವಿದೆ. ಲಿವರ್ ಸಮಸ್ಯೆ, ಡಿಸ್ಟೆಂಪರ್ ಕಾಯಿಲೆಯಿರುವ ನಾಯಿಗಳಿವೆ. ಆದರೆ ಯಾವುದರ ಬಗೆಗೂ ಅನಾದರವಿಲ್ಲ. ಎಲ್ಲವನ್ನೂ ಸಮಾನ ಪ್ರೀತಿಯಿಂದ ನೋಡಿಕೊಳ್ಳುವ ಹೆಂಗರುಳಿನ ಕೆಲಸಗಾರರಿದ್ದಾರೆ. ಕಾಯಿಲೆಯಿರುವ ನಾಯಿಗಳಿಗೆ ಒಂದು ವಿಭಾಗವಾದರೆ ಆರೋಗ್ಯವಾಗಿರುವ ನಾಯಿಗಳಿಗೆ ಸ್ವಚ್ಛವಾದ ಗೂಡುಗಳು, ಮಲಗಲು ಮರದ ಮಂಚಗಳು, ದಿನದಲ್ಲಿ ಎರಡು ಸಲ ಹೊಟ್ಟೆತುಂಬ ಮೊಸರನ್ನವನ್ನು ಪುಷ್ಕಳವಾಗಿ ಬಡಿಸುತ್ತಾರೆ. ಆರೋಗ್ಯ ವಿಚಾರಿಸಲು ಆಗಾಗ ವೈದ್ಯರು ಬರುತ್ತಾರೆ. ನಾಯಿಗಳ ಗೂಡು ತೊಳೆದ ನೀರು


Downloaded From:www.kpscvaani.com



ಕೊಳವೆ ಮೂಲಕ ಬಹು ದೂರದ ಕೊಳಚೆಗುಂಡಿಗೆ ಸೇರುವಂತೆ ಮಾಡಿದ್ದಾರೆ.

ಈ ನಾಯಿ ಸಂರಕ್ಷಣೆಯ ಮನೆಯನ್ನು ಕಟ್ಟಿದವರು ವೀರಂಜಯ ಹೆಗ್ಡೆ. ಊರವರಿಗೆ ವೀರು ಎಂದೇ ಪರಿಚಿತರು. ಪಿಯುಸಿ ತನಕ ಓದಿದ್ದಾರೆ. ಒಳ್ಳೆಯ ಬ್ಯಾಡ್ಮಿಂಟನ್ ಮತ್ತು ಷಟಲ್ ಆಟಗಾರ. ಬಾಲ್ಯದಲ್ಲಿಯೇ ನಾಯಿ ಮತ್ತಿತರ ಸಾಕುಪ್ರಾಣಿಗಳೆಂದರೆ ಅವರಿಗೆ ತುಂಬ ಪ್ರೀತಿ. ಶಾಲೆಗೆ ಹೋಗುವಾಗ ಬೀದಿಯಲ್ಲಿ ಅಳುತ್ತ ದಿಕ್ಕು ಸಿಕ್ಕದೆ ಅಲೆದಾಡುತ್ತಿರುವ ಪುಟ್ಟ ಪುಟ್ಟ ನಾಯಿಮರಿಗಳನ್ನು ಯಾರೋ ತಂದು ಬಿಟ್ಟುಹೋಗುತ್ತಿದ್ದ ದೃಶ್ಯವನ್ನು ಕಾಣುತ್ತಿದ್ದರು. ಮರಿ ಹೆಣ್ಣಾದರೆ ಯಾರಿಗೂ ಬೇಡ. ಅನ್ನಾಹಾರವಿಲ್ಲದೆ, ತಾಯಿಯ ಎದೆಹಾಲು ಸಿಗದೆ ಅನಾಥವಾದ ಮರಿಗಳು ಹಸಿವು, ದಾಹಗಳಿಂದ ಬಳಲಿ ಕೃಶವಾಗಿ, ವಾಹನಗಳ ಕೆಳಗೆ ಸಿಲುಕಿ ಸಾವನ್ನಪ್ಪುತ್ತಿರುವ ದೃಶ್ಯ ಕಂಡು ಅವರ ಮನ ಕರಗುತ್ತಿತ್ತು. ಇನ್ನೂ ಕಣ್ಣು ಬಿಡದ ಮರಿಗಳನ್ನು ಬೀದಿ ಪಾಲು ಮಾಡುವವರ ನಿಷ್ಕರುಣೆಯ ಪ್ರವೃತ್ತಿ ಕಂಡು ಬೇಸರವಾಗುತ್ತಿತ್ತು. ಅಂತಹ ನಾಯಿಗಳಿಗೆ ಅಂತಃಕರಣದಿಂದ ಮೋರಿಯ ಕೆಳಗೆ ಎಲ್ಲಾದರೂ ಸುರಕ್ಷಿತ ಜಾಗವಿದ್ದರೆ ಅಲ್ಲಿ ಮಲಗಲು ವ್ಯವಸ್ಥೆ ಮಾಡಿಕೊಡುತ್ತಿದ್ದರು.

ವಿದ್ಯಾರ್ಥಿ ದಿಸೆಯಲ್ಲಿರುವಾಗಲೇ ವೀರಂಜಯ ಹೆಗ್ಡೆ ಮನದಲ್ಲಿ ಮೂಡಿದ ಆಕಾಂಕ್ಷೆ ಪರಿತ್ಯಕ್ತ ನಾಯಿಗಳಿಗೆ ನೆಮ್ಮದಿಯ ಮನೆ ಕಟ್ಟುವುದು. ಬೀದಿಗಳಲ್ಲಿ ಅಲೆಯುತ್ತಿದ್ದ ಅನಾಥ ಮರಿಗಳನ್ನು ಮನೆಗೆ ತಂದಾಗ ಅಪ್ಪ ಅಮ್ಮ, 'ಇದನ್ಯಾಕೆ ತಂದದ್ದು?' ಎಂದು ಬೇಸರಿಸಲಿಲ್ಲ. ಮಗನ




ಹೃದಯವಂತಿಕೆಗೆ ಅವರು ಬೆನ್ನು ತಟ್ಟಿದರು. ನೆಂಟರಿಷ್ಟರ ಪ್ರೋತ್ಸಾಹ, ಸ್ನೇಹಿತರ ಬೆಂಬಲ ಹೀಗೊಂದು ಕಾಯಕವನ್ನು ಮುಂದುವರೆಸಲು ಪ್ರೇರೇಪಿಸಿತು. ಹನ್ನೆರಡು ವರ್ಷಗಳಿಂದ ಈ ಕೆಲಸವನ್ನು ಶ್ರದ್ಧೆಯಿಂದ ಮಾಡಿಕೊಂಡು ಬಂದಿದ್ದಾರೆ. ನಾಯಿಗಳ ಸಂಗ್ರಹ ಹೆಚ್ಚುತ್ತಾ ಹೋಯಿತು. ಕೆಲವರು ಹೆಣ್ಣುಮರಿಗಳನ್ನು ತಾವಾಗಿಯೇ ತಂದುಕೊಡಲಾರಂಭಿಸಿದರು. ಮನೆಯಂಗಳ ಸಾಕಾಗುವುದಿಲ್ಲ ಎನಿಸಿದಾಗ ತಮ್ಮದೇ ಒಂದೆಕರೆ ಖಾಲಿ ಜಾಗವನ್ನು ಸಮತಟ್ಟು ಮಾಡಿಸಿ ಕಟ್ಟಡಗಳನ್ನು ಕಟ್ಟಿಸಿದರು. ನಾಯಿಗಳು ಹೊರಗೆ ಹೋಗದಂತೆ ಸುತ್ತಲೂ ಗೋಡೆ ನಿರ್ಮಿಸಿದರು. 2021ರ ಸ್ವಾತಂತ್ರ್ಯ ದಿನೋತ್ಸವದಂದು ನಾಯಿ ಮನೆಯ ಉದ್ಘಾಟನೆಯೂ ನಡೆದಿದೆ. ಇವರ ಕೈಂಕರ್ಯ ಕಂಡು ಖುಷಿಯಾದವರು ಕಬ್ಬಿಣದ ಸರಳುಗಳಿರುವ ಮೂವತ್ತಕ್ಕಿಂತ ಹೆಚ್ಚು ಪಂಜರಗಳನ್ನು ದಾನವಾಗಿ ಕೊಟ್ಟರು. ಆಸರೆ ಬೇಡಿ ಬಂದ ಯಾವ ನಾಯಿಗೂ ಇಲ್ಲವೆನ್ನಲಿಲ್ಲ. ಗೂಡುಗಳಲ್ಲಿ ಜಾಗ ಸಾಲದೆ ಹೋದಾಗ ವಿಶಾಲವಾದ ಕಟ್ಟಡಗಳಲ್ಲೇ ಕಟ್ಟಿ ಹಾಕಿ, ಮಲಗಿಕೊಳ್ಳಲು ಮರದ ಮಂಚಗಳನ್ನು ಹಾಕಿಕೊಟ್ಟರು. ಎಲ್ಲೇ ಆಗಲಿ ಅನಾಥ ನಾಯಿ ಕಾಣಿಸಿದರೆ ಕರೆತಂದು ಇಲ್ಲಿಗೆ ಸೇರಿಸಿದರು.

ರಾತ್ರಿ ನಾಯಿಗಳಿಗೆ ಬಂಧನವಿಲ್ಲ. ಆವರಣದ ಒಳಗೆ ಮುಕ್ತವಾಗಿ ತಿರುಗಾಡಬಹುದು. ನಾಲ್ಕು ಮಂದಿ ಕೆಲಸಗಾರರು ಅವುಗಳಿಗೆ ಸ್ನಾನ ಮಾಡಿಸುವುದು, ಗೂಡುಗಳನ್ನು ನೀರಿನಿಂದ ತೊಳೆದು ಸ್ವಚ್ಛಗೊಳಿಸುವುದು, ಆರೋಗ್ಯ ಕೆಟ್ಟಿದರೆ ವೈದ್ಯರಿಗೆ ಕರೆ ಮಾಡುವುದು ಈ ಕೆಲಸಗಳನ್ನು ಮಾಡುತ್ತಾರೆ. ಇವುಗಳ ಆಹಾರ ತಯಾರಿಕೆಗೆ ಪ್ರತ್ಯೇಕ ಒಲೆ ಮತ್ತು ಪಾತ್ರೆಗಳಿವೆ. ಸದ್ಯಕ್ಕೆ ಇವರ ಆಶ್ರಯದಲ್ಲಿ 260 ನಾಯಿಗಳಿವೆ. ಇವುಗಳಲ್ಲಿ ನಾಲ್ಕೋ ಐದೋ ಗಂಡಿರಬಹುದು, ಉಳಿದುದೆಲ್ಲ ಹೆಣ್ಣು. ಅಪಘಾತದಿಂದ ಕಾಲು ಕಳೆದುಕೊಂಡ 18 ನಾಯಿಗಳಿವೆ. ಎಲ್ಲೋ ಬೀದಿ ನಾಯಿಗೆ ಅಪಘಾತವಾಗಿ, ನಡೆಯಲಾಗದೆ ಒದ್ದಾಡುತ್ತಿದೆ ಎಂದು ಗೊತ್ತಾದರೆ ಹೆಗ್ಡೆಯವರು ಹೋಗಿ ಅದನ್ನು ತಂದು ಆರೈಕೆ ಮಾಡಿ ಬದುಕಿಸಲು ಮುಂದಾಗುತ್ತಾರೆ. 12 ನಾಯಿಗಳಿಗೆ ಚರ್ಮರೋಗವಿದೆ. 20



Downloaded From:www.kpscvaani.com

ನಾಯಿಗಳಿಗೆ ಕ್ಯಾನ್ಸರ್ ಇದೆ. ಇವುಗಳಿಗೆ ನಿತ್ಯವೂ ಎರಡು ಸಲ ಮಾತ್ರೆ ಕೊಡಬೇಕು, ಮಾತ್ರೆಗಳ ಬೆಲೆಯೂ ದುಬಾರಿಯಾಗಿದೆ. ಹುಟ್ಟುವಾಗಲೇ ಕೈಕಾಲಿನ ನ್ಯೂನತೆಯಿಂದ ಕೂಡಿ ಬದುಕಿದಷ್ಟೂ ದಿನ ಬೇರೆಯವರನ್ನೇ ಅವಲಂಬಿಸಬೇಕಾದ ದುಃಸ್ಥಿತಿ ಕೆಲವು ನಾಯಿಗಳಿಗಿದೆ. ಎಲ್ಲಾ ನಾಯಿಗಳಿಗೂ ಸಮಾನ ಪ್ರೀತಿ, ಸಮಾನ ಆರೈಕೆ, ವಾರಕ್ಕೊಮ್ಮೆ ಸ್ನಾನ.

ಅನೇಕರು ತಮ್ಮ ಹುಟ್ಟುಹಬ್ಬವನ್ನು ಈ ನಾಯಿಗಳ ಜೊತೆಗೆ ಆಚರಿಸಲು ಇಷ್ಟಪಡುವುದುಂಟು. ಆಗ ಅವುಗಳಿಗೂ ಕೇಕ್, ರಸ್ಕ್, ಬಿಸ್ಕೆಟ್ ಇತ್ಯಾದಿ ತಿಂಡಿಗಳೂ ದೊರೆಯುತ್ತವೆ. ಅನೇಕ ದಾನಿಗಳು ನಾಯಿಗಳ ಸಲುವಾಗಿ ಅಕ್ಕಿ, ಹಾಲು ತಂದುಕೊಡುವುದೂ ಇದೆ. ಎರಡು ತಿಂಗಳಿಗೊಮ್ಮೆ ನಿಟ್ಟೆಯಿಂದ ಪಶುವೈದ್ಯ ಡಾ. ವಾಸುದೇವ ಪೈಯವರು ತಮ್ಮ ತಂಡದ ಆರು ಮಂದಿ ವೈದ್ಯರೊಂದಿಗೆ ಬರುತ್ತಾರೆ. ಇಲ್ಲಿ ನಿರ್ಮಿಸಲಾಗಿರುವ ಆಪರೇಷನ್ ಥಿಯೇಟರ್‌ನಲ್ಲಿ ಹೆಣ್ಣುನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಿ ಹೋಗುತ್ತಾರೆ. ಇದು ಸೇವಾ ಮನೋಭಾವದ ಕೊಡುಗೆ, ಬಿಡಿಗಾಸಿನ ಪ್ರತಿಫಲವೂ ಬೇಡ ಎನ್ನುವ ಮೂಲಕ ವೀರಂಜಯ ಹೆಗ್ಡೆ ಕೈಗೊಂಡ ಸತ್ಕಾರ್ಯದಲ್ಲಿ ಭಾಗಿಯಾಗುತ್ತಾರೆ. ಇದರಿಂದಾಗಿ ಇಲ್ಲಿರುವ ನಾಯಿಗಳ ವಂಶಾಭಿವೃದ್ಧಿಯಾಗುವ ಭಯ ದೂರವಾಗಿದೆ.

ಇಲ್ಲಿರುವ ನಾಯಿ ಮನೆಗೆ ಯಾರು ಬೇಕಿದ್ದರೂ ಅನಾಥ ನಾಯಿಗಳನ್ನು ತಂದುಕೊಡಬಹುದು. ಊರ ನಾಯಿಗಳ ಜೊತೆಗೆ ಭಿನ್ನ ತಳಿಯ ಕೆಲವು ನಾಯಿಗಳು ಇಲ್ಲಿಗೆ ಬಂದಿವೆ. ಉದಾರ ಹೃದಯದಿಂದ ಯಾರಾದರೂ ಇವರ ಕೆಲಸ ಕಾರ್ಯ ಮೆಚ್ಚಿ ನೆರವಾಗುವುದಾದರೆ ವೀರಂಜಯ ಹೆಗ್ಡೆ ಬೇಡ ಎನ್ನುವುದಿಲ್ಲ. ಇಷ್ಟು ಕೊಡಿ ಎಂದು ಬೇಡುವುದಿಲ್ಲ. ಆದರೆ ತಂದುಕೊಡುವ ನಾಯಿ ಮರಿಗಳಿಗೆ ರೇಬಿಸ್ ಲಸಿಕೆ ಹಾಕಿಸಿ ತರಬೇಕು. ಇಲ್ಲವಾದರೆ ಲಸಿಕೆ ಹಾಕಿಸುವ ವೆಚ್ಚ (ಸುಮಾರು ಏಳುನೂರು ರೂಪಾಯಿ) ಕೊಡಬೇಕು. ಇಲ್ಲಿರುವ ನಾಯಿಗಳನ್ನು ಇಷ್ಟವಿದ್ದವರು ದತ್ತು ಸ್ವೀಕರಿಸಬಹುದು. ಮನೆಯಲ್ಲಿ ಪ್ರೀತಿಯಿಂದ ಸಾಕುತ್ತೇವೆ ಎಂದವರಿಗೆ ಯಾವ ನಿರ್ಬಂಧವೂ ಇಲ್ಲದೆ ಉಚಿತವಾಗಿ ಕೊಟ್ಟುಬಿಡುತ್ತಾರೆ. ಆಮೇಲೆ



ಅವರಿಗೆ ಅದು ಬೇಡವೆನಿಸಿ ಮರಳಿ ತಂದುಕೊಡುತ್ತೇನೆ ಎಂದರೂ ಬೇಡ ಎಂದು ತಡೆಯುವ ಮಾತಿಲ್ಲ. ಹೀಗೆಯೇ ಹಲವಾರು ಅನಾಥ ಬೆಕ್ಕುಗಳಿಗೂ ಹೆಗ್ಡೆ ಆಸರೆ ನೀಡಿದ್ದಾರೆ. ಮುಂದೆ ಪರಿತ್ಯಕ್ತ ಹಸು ಮುಂತಾದ ಪ್ರಾಣಿಗಳನ್ನೂ ಸಲಹಬೇಕೆಂಬ ಯೋಚನೆ ಅವರಲ್ಲಿದೆ.

ಅನಾಥ ನಾಯಿಗಳ ಪೋಷಣೆಗೆ ಕಡಿಮೆ ಎಂದರೂ ದಿನಕ್ಕೆ ಐದು ಸಾವಿರಕ್ಕಿಂತ ಹೆಚ್ಚು ಖರ್ಚು ಬರುತ್ತದೆ. ನಾಯಿಗಳ ಸಂಖ್ಯೆ ಏರಿದಂತೆ ಖರ್ಚು ವೆಚ್ಚಗಳೂ ಏರುತ್ತಿವೆ. ಪ್ರಾಣಿ ಸಂರಕ್ಷಣೆಯ ದೃಷ್ಟಿಯಿಂದಲೇ ಮಾಡಿರುವ ಅಹಿಂಸಾ ಅನಿಮಲ್ ಕೇರ್ ಟ್ರಸ್ಟ್‌ನಲ್ಲಿ ಅವರದೇ ಸೇವಾ ಮನೋಭಾವದ ಸದಸ್ಯರೂ ಜತೆಗೂಡಿದ್ದಾರೆ. ತನ್ನ ಆಶೋತ್ತರಗಳ ನಿರ್ವಹಣೆಗೆ ಶಾಶ್ವತ ನಿಧಿ ಮಾಡುವ ಆಕಾಂಕ್ಷೆಯೂ ವೀರಂಜಯ ಹೆಗ್ಡೆಯವರಲ್ಲಿದೆ. ಗ್ರಾಮೀಣ ಮಟ್ಟದ ಉತ್ತಮ ಕ್ರೀಡಾಪಟುವಾಗಿರುವ ಅವರು ಬ್ಯಾಡ್ಮಿಂಟನ್ ಮುಂತಾದ ಕ್ರೀಡೆಗಳಲ್ಲಿ ಆಸಕ್ತರಿಗೆ ತರಬೇತಿ ನೀಡುತ್ತಿದ್ದಾರೆ. ಒಂದು ಸ್ಟೇಡಿಯಮ್ ಕೂಡ ಅವರ ಒಡೆತನದಲ್ಲಿರುವ ಕಾರಣ ಅಲ್ಲಿ ಪಂದ್ಯಾಟಗಳು ನಡೆಯುತ್ತವೆ. ಬೇಸಿಗೆಯಲ್ಲಿ ವಿವಿಧ ಕಲೆಗಳ ಕಲಿಕಾ ಶಿಬಿರವನ್ನೂ ಮಾಡುತ್ತಾರೆ. ಸಣ್ಣ ಅಂಗಡಿ ಇದೆ. ಕೃಷಿಯಿಂದ ಬರುವ ಒಂದಷ್ಟು ವರಮಾನವಿದೆ. ಇದೆಲ್ಲದರ ಮೂಲಕ ಬರುವ ಆದಾಯವನ್ನು ತಮ್ಮ ನಾಯಿ ಆಸರೆಯ ಹವ್ಯಾಸಕ್ಕೆ ಮುಗಿಸುತ್ತಾರೆ. ಬಿಡುವಿರುವಾಗ ಎಲ್ಲ ನಾಯಿಗಳನ್ನೂ ಬಳಿಗೆ ಕರೆದು ಆಟವಾಡುವುದು ಅವರ ಮೆಚ್ಚಿನ ಹವ್ಯಾಸ. ಮೂಕ ಪ್ರಾಣಿಗಳ ನಿಷ್ಕಲ್ಮಶ ಪ್ರೀತಿಯ ಒಡನಾಟದಲ್ಲಿ ಬದುಕಿನ ಜಂಜಾಟಗಳನ್ನೆಲ್ಲ ಮರೆಯುತ್ತೇನೆ ಎನ್ನುತ್ತಾರೆ.

ಏಕೈಕವಾಗಿ ಇಂತಹ ಸಾಹಸ ಮಾಡುತ್ತಿರುವ ಹೆಗ್ಡೆಯವರಿಗೆ ಕಟ್ಟಡಗಳ ನಿರ್ಮಾಣದಿಂದ ಆರಂಭಿಸಿ ನಾಯಿಗಳ ದಿನದ ಊಟದ ತನಕ ಆರ್ಥಿಕ ನೆರವನ್ನು ಒದಗಿಸಿ ಬೆನ್ನು ತಟ್ಟಿದ ದಾನಿಗಳು ಹಲವರಿದ್ದಾರೆ. ಹೆಗ್ಡೆ 'ನೀವೂ ನನ್ನಂತೆಯೇ ಪ್ರಾಣಿಗಳ ಸಂರಕ್ಷಣೆ ಮಾಡಿ' ಎಂದು ಎಲ್ಲರಲ್ಲಿಯೂ ಕೇಳಿಕೊಳ್ಳುತ್ತಾರೆ. ವೀರಂಜಯ ಹೆಗ್ಡೆಯವರ ಈ ಸತ್ಕಾರ್ಯಕ್ಕೆ ಸಹೃದಯ ದಾನಿಗಳೇ ಆಸರೆಯಾಗಬೇಕಾಗಿದೆ.

ಅಹಿಂಸಾ ಟ್ರಸ್ಟ್‌ನ ಫೇಸ್‌ಬುಕ್ ಪೇಜ್ ಇದೆ. ಅದನ್ನು ಫಾಲೋ ಮಾಡಿ, ನಿಮ್ಮ ಗೆಳೆಯರೊಂದಿಗೂ ಹಂಚಿಕೊಳ್ಳಿ, ಒಬ್ಬರು ಒಂದು ನಾಯಿಗೆ ಒಂದು ದಿನದ ಊಟ ಕೊಡಿ, ಇದರಿಂದ ನನ್ನ ಹೆಗಲ ಮೇಲಿರುವ ಈ ಸಂರಕ್ಷಣೆಯ ಭಾರವನ್ನು ನೀವೂ ಹಂಚಿಕೊಂಡಂತೆ ಆಗುತ್ತದೆ ಎಂದು ಹೆಗ್ಡೆ ಮನವಿ ಮಾಡುತ್ತಾರೆ. ಹಾಗೆಯೇ, 'ದಯವಿಟ್ಟು ಯಾರೂ ನಿಮ್ಮ ಮನೆಯ ನಾಯಿಯನ್ನು ಬೀದಿಪಾಲು ಮಾಡಬೇಡಿ. ಮಾನವೀಯತೆ ತೋರುವ ಮೂಲಕ ಮಾನವೋತ್ತಮರಾಗಿ' ಎಂದು ಕೇಳಿಕೊಳ್ಳುತ್ತಾರೆ. ಅವರನ್ನು ಸಂಪರ್ಕಿಸಲು ಇಚ್ಛಿಸುವವರು ಅವರ ದೂರವಾಣಿ 9611944763 ಕ್ಕೆ ಕರೆ ಮಾಡಬಹುದು.


Downloaded From:www.kpscvaani.com



## ಸ್ವಾತಂತ್ರ್ಯ ಹೋರಾಟದಲ್ಲಿ

# ಉಮಾಬಾಯಿ ಕುಂದಾಪುರರ

## ಪಾತ್ರ ಸ್ಮರಣೀಯ

**ಭಾರತದ ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ನೆನೆದಾಗ ಹೆಚ್ಚಾಗಿ ಅರಸರು, ರಾಜಕೀಯ ಧುರೀಣರು ಮತ್ತು ಪ್ರಭಾವಿ ವ್ಯಕ್ತಿಗಳನ್ನು ನೆನಪಿಸಿಕೊಳ್ಳುತ್ತೇವೆ. ಆದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಸಾಮಾನ್ಯ ಜನರು, ಅದರಲ್ಲೂ ಮಹಿಳೆಯರು ಹೋರಾಡಿದ್ದಾರೆ.**

ರಿಥೇಶ ನಾಯ್ಕ

ಸ್ವಾತಂತ್ರ್ಯ ಹೋರಾಟದಲ್ಲಿ ಪುರುಷರ ಸಮಾನವಾಗಿ ಹೋರಾಡಿದ ಹಲವಾರು ಧೀಮಂತ ನಾರಿಯರಲ್ಲಿ ನಮ್ಮ ಕರ್ನಾಟಕದ ಮಹಿಳೆಯರ ಪಾತ್ರವು ಹೆಚ್ಚು ಮಹತ್ವವನ್ನು ಪಡೆದಿದೆ. ಅಂತಹ ಧೀರ ಮಹಿಳೆಯರಲ್ಲಿ ಸಾಮಾನ್ಯ ಹಳ್ಳಿ ಕುಟುಂಬದಿಂದ ಬಂದಂತಹ ಹೆಣ್ಣು ಮಗಳಾದ ಉಮಾಬಾಯಿ ಕುಂದಾಪುರ ಅವರ ಹೋರಾಟದ ಹಾದಿಯು ರೋಚಕವಾಗಿದೆ.

ಉಮಾಬಾಯಿ ಕುಂದಾಪುರ ಅವರು 1892ರಲ್ಲಿ ಮಂಗಳೂರಿನ ಗೋಳಿಕೇರಿ ಕುಟುಂಬದಲ್ಲಿ ಕೃಷ್ಣರಾವ್ ಗೋಳಿಕೇರಿ ಮತ್ತು ಜುಂಗಾಬಾಯಿ ದಂಪತಿಗಳಿಗೆ ಭವಾನಿ ಗೋಳಿಕೇರಿಯಾಗಿ ಜನಿಸುತ್ತಾರೆ. ಈಕೆಗೆ ಮುಂದೆ ಅವರ ಮಾವನವರು ಉಮಾಬಾಯಿ ಎಂದು ನಾಮಕರಣ ಮಾಡುತ್ತಾರೆ.

ತಮ್ಮ 13ನೇ ವಯಸ್ಸಿನಲ್ಲಿ ಸಂಜೀವ್‌ರಾವ್ ಕುಂದಾಪುರ ಅವರನ್ನು ವಿವಾಹವಾದ ಉಮಾಬಾಯಿ ತಮ್ಮ ಮಾವ ಆನಂದರಾವ್ ಕುಂದಾಪುರ ಅವರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ಮೆಟ್ರಿಕ್ಯುಲೇಶನ್ ಪರಿಕ್ಷೆಯಲ್ಲಿ ಉತ್ತೀರ್ಣರಾಗುತ್ತಾರೆ. ಆನಂದರಾವ್ ಪ್ರಗತಿಪರ ಚಿಂತಕರಾಗಿದ್ದಲ್ಲದೆ, ಮಹಿಳೆಯರ ಉನ್ನತಿಯಲ್ಲಿ ಹೆಚ್ಚಿನ ಕಾಳಜಿಯನ್ನು ಹೊಂದಿದ್ದರು.

ಅತ್ಯಂತ ಕಿರಿಯ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡ ಉಮಾಬಾಯಿ ತಮ್ಮ ಮಾವನವರೊಂದಿಗೆ ಹುಬ್ಬಳ್ಳಿಯಲ್ಲಿ ಬಂದು ನೆಲೆಸಿ "ಕರ್ನಾಟಕ ಮುದ್ರಣಾಲಯ"ವನ್ನು ಪ್ರಾರಂಭಿಸಿದರು. ಆನಂದರಾವ್ ಉಮಾಬಾಯಿಯ ನೇತೃತ್ವದಲ್ಲಿ ಬಾಲಕಿಯರಿಗಾಗಿ "ತಿಲಕ ಕನ್ಯಾ ಶಾಲೆ"ಯನ್ನು ಆರಂಭಿಸಿದರು.

**ಸ್ವಾತಂತ್ರ್ಯ ಹೋರಾಟಗಾರರಾಗಿ ಉಮಾಬಾಯಿ:**

ಉಮಾಬಾಯಿ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರ ಕಲ್ಯಾಣಕ್ಕಾಗಿ ಮೀಸಲಾದ "ಭಗನಿ ಮಂಡಲ"ಎಂಬ ಸಾಮಾಜಿಕ ಸಂಘಟನೆಯನ್ನು ಸ್ಥಾಪಿಸಿದರು. 1923 ರಲ್ಲಿ ಎನ್. ಎಸ್. ಹರ್ಡಿಕರ್ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಯುವಕರನ್ನು ಸಂಘಟಿಸಲು ಸ್ಥಾಪಿಸಿದಂತಹ ಹಿಂದೂಸ್ಥಾನಿ ಸೇವಾದಳದ ಮಹಿಳಾ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ ಇವರು ಮಹಿಳೆಯರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗುವಂತೆ ಪ್ರೇರೇಪಿಸಲು ರಾಜ್ಯದಾದ್ಯಂತ ಪ್ರವಾಸ ಕೈಗೊಂಡರು.

1924 ರಂದು ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಉಮಾಬಾಯಿ ರಾಜ್ಯಾದ್ಯಂತ ಸಂಚರಿಸಿ 150 ಮಹಿಳಾ ಸ್ವಯಂ ಸೇವಕರ ತಂಡವನ್ನು ಕಟ್ಟಲು ಶ್ರಮಿಸಿದ್ದರು.

ಉಮಾಬಾಯಿ ಅವರ ಸಮಾಜ ಸೇವೆಯನ್ನು ಬಹಳ ಹತ್ತಿರದಿಂದ ನೋಡಿದಂತಹ ಕರ್ನಾಟಕದ ಮತ್ತೊಬ್ಬ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ್ತಿ ಕಮಲಾದೇವಿ ಚಟ್ಟೋಪಾಧ್ಯಾಯರು. "ಉಮಾಬಾಯಿ ಅವರ ಸಂಘಟನಾ



Downloaded From:www.kpscvaani.com



**ಉಮಾಭಾರತಿ ಕುಂದಾಪುರ ಅವರು ಭಾರತದ ಸ್ವಾತಂತ್ರ್ಯ ಹೋರಾಟಕ್ಕಾಗಿ ನೀಡುವ ಉನ್ನತ ಪುರಸ್ಕಾರವಾದ "ತಾಮ್ರ ಪತ್ರ"ವನ್ನು ನಿರಾಕರಿಸುವುದರ ಜೊತೆಗೆ ಸರ್ಕಾರ ನೀಡುವ ಪಿಂಚಣಿಯನ್ನು ಸಹ ಪಡೆದುಕೊಳ್ಳದೇ ಕೊನೆಯವರೆಗೂ ಗಾಂಧಿವಾದಿಯಾಗಿಯೇ ಉಳಿದರು.**

ಕೌಶಲವನ್ನು ನೋಡಿದ ದಿನದಿಂದಲೂ, ನಾನು ಅವರ ಕಟ್ಟಾ ಅನುಯಾಯಿಯಾಗಿದ್ದೇನೆ" ಎಂದು ಹೇಳಿಕೊಂಡಿದ್ದಾರೆ. ಸ್ವಾತಂತ್ರ್ಯ ಹೋರಾಟ ಮತ್ತು ಸಾಮಾಜಿಕ ಕಾರ್ಯಕ್ರಮದಲ್ಲಿ ಸಕ್ರಿಯರಾಗಿ ಸೇವೆ ಸಲ್ಲಿಸಿದ ಉಮಾಬಾಯಿಯವರು ಗ್ರಾಮೀಣ ಮಕ್ಕಳ ಕಲ್ಯಾಣ, ಆರೋಗ್ಯ ಮತ್ತು ಶಿಕ್ಷಣಕ್ಕಾಗಿ ಮಹಾತ್ಮ ಗಾಂಧಿಯವರಿಂದ ಸ್ಥಾಪಿಸಲ್ಪಟ್ಟ ಕಸ್ತೂರ್ ಬಾ ಟ್ರಸ್ಟ್‌ನ ಕರ್ನಾಟಕ ಶಾಖೆಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿ ಇತರ ಮಹಿಳೆಯರೊಂದಿಗೆ ಭಿಕ್ಷೆಯನ್ನು ಸಂಗ್ರಹಿಸಿ ಗ್ರಾಮ ಸೇವಕರಿಗೆ ತರಬೇತಿಯನ್ನು ನೀಡಿ ಹಳ್ಳಿಗಳ ಸ್ಥಿತಿಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು.

ಮುಂದೆ 1932ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಉಮಾಬಾಯಿ ಬಂಧನಕ್ಕೊಳಗಾಗಿ ಯರವಾಡ ಜೈಲಿನಲ್ಲಿ ನಾಲ್ಕು ತಿಂಗಳ ಸೆರೆಮನೆ ವಾಸವನ್ನು ಅನುಭವಿಸಿದರು. ಈ ಸಮಯದಲ್ಲಿ ಬ್ರಿಟಿಷರು, ಕರ್ನಾಟಕ ಮುದ್ರಣಾಲಯವನ್ನು ಮುಟ್ಟುಗೋಲು ಹಾಕಿಕೊಂಡು, ಆಕೆಯ ಶಾಲೆಯನ್ನು ಜಪ್ತಿ ಮಾಡಿದರು. ಹಾಗೂ ಭಗನಿ ಮಂಡಲ ಸಂಘಟನೆಯನ್ನು ಕಾನೂನು ಬಾಹಿರವೆಂದು ಘೋಷಿಸಿದರು. ಈ ಎಲ್ಲಾ ಘಟನೆಗಳಿಂದ ಧೃತಿಗೆಡದ ಉಮಾಬಾಯಿ ತಮ್ಮ ಹೋರಾಟವನ್ನು ನಿಲ್ಲಿಸದೆ ಇನ್ನಷ್ಟು ಗಟ್ಟಿಯಾಗಿ ಮುಂದುವರೆದರು.

1934 ರಲ್ಲಿ ಬಿಹಾರದಲ್ಲಿ ಭೂಕಂಪ ಸಂಭವಿಸಿದಾಗ, ಉಮಾಬಾಯಿ ಇತರ ಸ್ವಯಂ ಸೇವಕರೊಂದಿಗೆ ತೆರಳಿ ನಿರಾಶ್ರಿತರ ಶಿಬಿರಗಳಲ್ಲಿ ಉಳಿದುಕೊಂಡು ಹಗಲಿರುಳು ಸಂತ್ರಸ್ತರ ಸೇವೆ ಮಾಡಿದರು. ಅನಾರೋಗ್ಯದ ಕಾರಣ 1942 ರಲ್ಲಿ ನಡೆದ "ಭಾರತ ಬಿಟ್ಟು ತೊಲಗಿ" ಚಳುವಳಿಯಲ್ಲಿ ನೇರವಾಗಿ ಭಾಗಿಯಾಗಲು ಸಾಧ್ಯವಾಗದಿದ್ದರೂ, ಅನೇಕ ಸ್ವಾತಂತ್ರ್ಯ ಹೋರಾಟಗಾರರಿಗೆ ಆಹಾರ, ಆರ್ಥಿಕ ನೆರವು ಮತ್ತು ಆಶ್ರಯವನ್ನು ನೀಡಿದರು.

ಉಮಾಬಾಯಿ ಅವರು ಭಾರತದ ಸ್ವಾತಂತ್ರ್ಯದ ನಂತರವೂ ಸರಳ ಜೀವನವನ್ನು ನಡೆಸಿ, ಅನೇಕ ಸಾಮಾಜಿಕ ಕಾರ್ಯಗಳನ್ನು ಮುಂದುವರಿಸಿದರು. ತಮ್ಮ 100ನೇ ವಯಸ್ಸಿನಲ್ಲಿ, 1992 ರಲ್ಲಿ ತೀರಿಕೊಂಡರು.


ಬಹುಶಃ ಉಮಾಬಾಯಿ ಕುಂದಾಪುರ ಅವರ ಹೆಸರು ಭಾರತೀಯ ಸ್ವಾತಂತ್ರ್ಯ ಹೋರಾಟಗಾರರ ಪುಟಗಳಲ್ಲಿ ಮರೆಯಾಗಲು ಸ್ವಾತಂತ್ರ್ಯದ ನಂತರ ಅವರು ಆಯ್ದುಕೊಂಡ ಸಾಮಾನ್ಯ ಜೀವನವೇ ಕಾರಣವಿರಬಹುದು. ಭಾರತದ ಸ್ವಾತಂತ್ರ್ಯ ಹೋರಾಟಕ್ಕಾಗಿ ನೀಡುವ ಉನ್ನತ ಪುರಸ್ಕಾರವಾದ "ತಾಮ್ರ ಪತ್ರ"ವನ್ನು ನಿರಾಕರಿಸುವುದರ ಜೊತೆಗೆ ಸರ್ಕಾರ ನೀಡುವ ಪಿಂಚಣಿಯನ್ನು ಸಹ ಪಡೆದುಕೊಳ್ಳದೇ ಕೊನೆಯವರೆಗೂ ಗಾಂಧಿವಾದಿಯಾಗಿಯೇ ಉಳಿದರು.

ನಿಸ್ವಾರ್ಥವಾಗಿ ರಾಷ್ಟ್ರ ಸೇವೆಯನ್ನು ಸಲ್ಲಿಸಿದ ಉಮಾಬಾಯಿ ಕುಂದಾಪುರರಂತಹ ಮಹಾನ್ ಮಹಿಳೆಯರ ಜೀವನ ಮತ್ತು ಹೋರಾಟದ ಹಾದಿಯನ್ನು ಸ್ವಾತಂತ್ರ್ಯೋತ್ಸವದ 75 ನೇ ಅಮೃತ ಮಹೋತ್ಸವ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯ. ■



Downloaded From:www.kpscvaani.com

# ಪದಬಂಧ-34



ವಿದ್ಯಾ ವಿ. ಹಾಲಭಾವಿ

### ಎಡದಿಂದ ಬಲಕ್ಕೆ

1. ಪ್ರಗತಿಶೀಲ ಸ್ವಭಾವದವನು (4)
4. ಹಾವು ವಾಸ ಮಾಡುವ ಸ್ಥಳ (2)
5. ಮುಧೋಳ ತಾಲೂಕಿನ ಈ ಗ್ರಾಮದ ಬೇಡರುಬ್ರಿಟಿಷರು ಜಾರಿಗೆ ತಂದಿದ್ದ ನಿಶಸ್ತ್ರೀಕರಣದ ವಿರುದ್ಧ ಸಡ್ಡು ಹೊಡೆದು ಹೋರಾಟ ಮಾಡಿದ್ದರು (4)
7. ದಾಖಲೆಗಳ ಕಟ್ಟು (3)
9. ಹತ್ತು ವರ್ಷಗಳ ಕಾಲದ ಅವಧಿ (3)
11. ಕೌರವರ ಸೋದರ ಮಾವ (3)
12. ಇದೊಂದು ಬಗೆಯ ಅಲೋಹ ಮೂಲಧಾತು (3)
14. ದೇವಾಲಯದ ಸಭಾಮಂಟಪ (4)
16. ಒಂದು ದಿವಸದ ಎಂಟನೇ ಒಂದುಭಾಗ (2)
17. ಕಡಲ ತೀರದ ಕಾಶ್ಮೀರ ಎಂದು ಪ್ರಸಿದ್ಧಿಪಡೆದಿರುವಈ ನಗರ ಉತ್ತರಕನ್ನಡ ಜಿಲ್ಲೆಯಲ್ಲಿದೆ (4)

### ಮೇಲಿಂದ ಕೆಳಕ್ಕೆ

1. ಗೋವುಗಳ ದತ್ತು ಸ್ವೀಕಾರದ ಯೋಜನೆಯಿದು (6)
2. ಸುಮಾರು ಆರು ಮೈಲಿ (3)
3. ಫಲಕದ ಹತ್ತಿರವಿರುವ ಹಣ್ಣು (2)
4. ಹುಡುಕತಲಿದ್ದಾಗ ವ್ಯಾಘ್ರ ಕಾಣಿಸಿತೇ? (2)
5. ಮನೆ ಮನೆಗಳ ಮೇಲೆ ಧ್ವಜಾರೋಹಣ ಮಾಡಿದ ಕಾರ್ಯಕ್ರಮ (7)
6. ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
8. ಕೋಲಾರ ಜಿಲ್ಲೆಯಲ್ಲಿರುವ ಮಾವಿನಹಣ್ಣಿನ ನಗರ (6)
10. ಮಧುರವಾದ ಧ್ವನಿ (4)
13. ಈತ ಕಬ್ಬಿಣದ ಕೆಲಸಗಾರ (3)
14. ವನದಲ್ಲಿ ತಿರುಗಿದಾಗ ಹೊಸದು ಕಂಡೀತೇ? (2)
15. ಬಣ್ಣ ಇಲ್ಲಿದೆ (2)

### ಉತ್ತರ

**ಎಡದಿಂದ ಬಲಕ್ಕೆ**

1. ಪುರೋಗಾಮಿ 4. ಹುತ್ತ 5. ಹಲಗಲಿ 7. ದಫ್ತರ್ 9. ದಶಕ 11. ಶಕುನಿ 12. ರಂಜಕ 14. ನವರಂಗ 16. ಜಾವ 17. ಕಾರವಾರ

**ಮೇಲಿಂದ ಕೆಳಕ್ಕೆ**

1. ಪುಣ್ಯಕೋಟಿದತ್ತು 2. ಗಾವುದ 3. ಫಲ 4. ಹುಲಿ 5. ಹರ್‌ಘರ್‌ತಿರಂಗ 6. ಗರ್ಭಕೋಶ 8. ಶ್ರೀನಿವಾಸಪುರ 10. ಕಲರವ 13. ಕಮ್ಮಾರ 14. ನವ 15. ರಂಗು

### -: ಸೂಚನೆ :-

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಟ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಆಗಸ್ಟ್ 20 ರಂದು ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ 107 ನೇ ಜನ್ಮದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಅವರು ಪುಷ್ಪ ನಮನ ಸಲ್ಲಿಸುತ್ತಿರುವುದು.



ಆಗಸ್ಟ್ 15 ರಂದು ಸಂಗೊಳ್ಳಿ ರಾಯಣ್ಣ ಜನ್ಮದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಅವರು ಪುಷ್ಪ ನಮನ ಸಲ್ಲಿಸುತ್ತಿರುವುದು.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com